THE GOSPEL ACCORDING TO

SAINT MARK

ಮಾರ್ಕನು ಬರೆದ ಸುವಾರ್ತೆ

ಸ್ನಾನಿಕನಾದ ಯೋಹಾನನ ವಿಷಯ.
(ಮತ್ತಾ. 3. 1—12; ಲೂಕ 3. 1—18; ಯೋಹಾ. 1. 19—28.)

ದೇವಕುಮಾರನಾದ ಯೇಸು ಕ್ರಿಸ್ತನ ವಿಷಯ
ವಾದ ಸುವಾರ್ತೆಯ ಪ್ರಾರಂಭವು.
ನಾನು ನನ್ನ ದೂತನನ್ನು ನಿನ್ನ
ಕಳುಹಿಸುತ್ತೇನೆ;
ೋಗುವ ದಾರಿಯನ್ನು ಅವನು ಸರಿ
ಡುವನೆಂತಲೂ,

3 ಕರ್ತನ ದಾರಿಯನ್ನು ಸಿದ್ಧಮಾಡಿರಿ; ಆತನ
ಹಾದಿಗಳನ್ನು ನೆಟ್ಟಗೆಮಾಡಿರಿ ಎಂದು ಅಡವಿ

ಯಲ್ಲಿ ಕೂಗುವವನ ಶಬ್ದವದೆ ಎಂತಲು
4 ಪ್ರವಾದಿಯಾದ ಯೆಶಾಯನ ಗ್ರಂಥದಲ್ಲಿ ಬ
ದಿರುವ ಪ್ರಕಾರ ಯೋಹಾನನು ಬಂದು ಜನರಿಗೆ
ನೀವು ಪಾಪಪರಿಹಾರಕ್ಕಾಗಿ ದೇವರ ಕಡೆಗೆ ತಿರು
ಕೊಂಡು ದೀಕ್ಷಾಸ್ನಾನಮಾಡಿಸಿಕೊಳ್ಳಬೇಕೆಂದ
ಸಾರಿಹೇಳುತ್ತಾ ಅಡವಿಯಲ್ಲಿ ದೀಕ್ಷಾಸ್ನಾನಮಾ
5 ಸುತ್ತಾ ಇದ್ದನು. ಆಗ ಯೂದಾಯ ಸೀಮ
ಯೆಲ್ಲವೂ ಯೆರೂಸಲೇಮಿನವರೆಲ್ಲರೂ ಅವ
ಬಳಿಗೆ ಹೊರಟುಹೋಗಿ ತಮ್ಮ ತಮ್ಮ ಪಾ
ಗಳನ್ನು ಹೇಳಿಕೊಂಡು ಯೊರ್ದನ್ ಹೊಳೆಯ
ಅವನಿಂದ ದೀಕ್ಷಾಸ್ನಾನಮಾಡಿಸಿಕೊಳ್ಳುತ್ತಿದ್ದರ

ಈ ಯೋಹಾನನು ಒಂಟೆಯ ಕೂದಲಿನ ಹೊದಿಕೆ
ಯನ್ನು ಹೊದ್ದುಕೊಂಡು ಸೊಂಟಕ್ಕೆ ತೊಗಲಿನ
ನಡುಕಟ್ಟನ್ನು ಕಟ್ಟಿಕೊಂಡಿದ್ದನು; ಅವನು ಮಿಡಿತೆ
ಯನ್ನೂ ಕಾಡುಜೇನನ್ನೂ ಆಹಾರ ಮಾಡು
ತ್ತಿದ್ದನು. ಅವನು – ನನಗಿಂತ ಶಕ್ತನು ನನ್ನ ಹಿಂದೆ
ಬರುತ್ತಾನೆ; ಆತನ ಕೆರಗಳ ಬಾರನ್ನು ಬೊಗ್ಗಿ
ಕೊಂಡು ಬಿಚ್ಚುವದಕ್ಕೂ ನಾನು ಯೋಗ್ಯನಲ್ಲ.
ನಾನು ನಿಮಗೆ ನೀರಿನ ಸ್ನಾನಮಾಡಿಸಿದೆನು; ಆತ
ನಾದರೋ ನಿಮಗೆ ಪವಿತ್ರಾತ್ಮದ ಸ್ನಾನಮಾಡಿಸು
ವನು ಎಂದು ಸಾರಿಹೇಳಿದನು.

ಯೇಸು ಪ್ರತಿಷ್ಠೆಯನ್ನು ಹೊಂದಿ ತನ್ನ ಉದ್ಯೋಗವನ್ನು ಪ್ರಾರಂಭಿಸಿದ್ದು.
(ಮತ್ತಾ. 3. 13—4. 17; ಲೂಕ 3. 21, 22; 4. 1—15;
ಯೋಹಾ. 1. 31—33.)

9 ಆ ದಿನಗಳಲ್ಲಿ ಯೇಸು ಗಲಿಲಾಯ ಸೀಮೆಗೆ
ಸೇರಿದ ನಜರೇತೆಂಬ ಊರಿನಿಂದ ಬಂದು
ಯೊರ್ದನ್ ಹೊಳೆಯಲ್ಲಿ ಯೋಹಾನನಿಂದ ಸ್ನಾನ
10 ಮಾಡಿಸಿಕೊಂಡನು. ಮಾಡಿಸಿಕೊಂಡ ಕೂಡಲೆ
ಆತನು ನೀರಿನೊಳಗಿಂದ ಮೇಲಕ್ಕೆ ಬರಲು,
ಆಕಾಶವೊಡೆದು ದೇವರಾತ್ಮವು ಪಾರಿವಾಳದ ಹಾಗೆ
11 ತನ್ನ ಮೇಲೆ ಇಳಿಯುವದನ್ನು ಕಂಡನು. ಆಗ—
ನೀನು ಪ್ರಿಯನಾಗಿರುವ ನನ್ನ ಮಗನು, ನಿನ್ನನ್ನು
ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ
ಆಯಿತು.

12 ಕೂಡಲೆ ಯೇಸು ದೇವರಾತ್ಮ ಪ್ರೇರಿತನಾಗಿ
13 ಅಡವಿಗೆ ಹೋದನು. ಆತನು ನಾಲ್ವತ್ತು ದಿವಸ
ಅಡವಿಯಲ್ಲಿ ಮೃಗಗಳೊಂದಿಗೆ ಇದ್ದು ಸೈತಾನ
ನಿಂದ ಶೋಧಿಸಲ್ಪಡುವವನಾದನು; ಮತ್ತು ದೇವ
ದೂತರು ಆತನಿಗೆ ಉಪಚಾರಮಾಡಿದರು.

14 ಯೋಹಾನನು ಸೆರೆಗೆ ಬಿದ್ದ ಮೇಲೆ ಯೇಸು
15 ಗಲಿಲಾಯ ಸೀಮೆಗೆ ಬಂದು—ಕಾಲ ಪರಿಪೂರ್ಣ
ವಾಯಿತು, ದೇವರ ರಾಜ್ಯವು ಸಮಿಾಪಿಸಿತು,
ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆ
ಯನ್ನು ನಂಬಿರಿ ಎಂದು ದೇವರ ಸುವಾರ್ತೆ
ಯನ್ನು ಸಾರಿಹೇಳಿದನು.

ಯೇಸು ಪ್ರಥಮ ಶಿಷ್ಯರನ್ನು ಮಾಡಿಕೊಂಡದ್ದು.
(ಮತ್ತಾ. 4. 18—22; ಲೂಕ 5. 1—11.)

16 ಹೀಗಿರುವಲ್ಲಿ ಆತನು ಗಲಿಲಾಯ ಸಮುದ್ರದ
ಬಳಿಯಲ್ಲಿ ಹೋಗುತ್ತಿರುವಾಗ ಸೀಮೋನನೂ
ಸೀಮೋನನ ತಮ್ಮನಾದ ಅಂದ್ರೇಯನೂ ಸಮುದ್ರ
17 ದಲ್ಲಿ ಬಲೆ ಬೀಸುವದನ್ನು ಕಂಡನು. ಅವರು
ಬೆಸ್ತರು. ಯೇಸು ಅವರಿಗೆ—ನನ್ನ ಹಿಂದೆ ಬನ್ನಿರಿ;
ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ
ನಿಮ್ಮನ್ನು ಮಾಡುವೆನು ಎಂದು ಹೇಳುತ್ತಲೇ
18 ಅವರು ತಮ್ಮ ಬಲೆಗಳನ್ನು ಬಿಟ್ಟು ಆತನ ಹಿಂದೆ
19 ಹೋದರು. ಇನ್ನೂ ಸ್ವಲ್ಪ ಮುಂದೆ ಹೋಗಿ ಜೆಬೆ
ದಾಯನ ಮಗನಾದ ಯಾಕೋಬನನ್ನೂ ಅವನ
20 ತಮ್ಮನಾದ ಯೋಹಾನನನ್ನೂ ಕಂಡನು. ಇವರು

ದೋಣಿಯಲ್ಲಿ ತಮ್ಮ ಬಲೆಗಳನ್ನು ಸರಿಮಾಡು
ತ್ತಿದ್ದರು. ಕೂಡಲೆ ಇವರನ್ನೂ ಕರೆದನು ಅವರು
ತಮ್ಮ ತಂದೆಯಾದ ಜೆಬೆದಾಯನನ್ನು ಕೂಲಿ
ಯಾಳುಗಳ ಸಂಗಡ ದೋಣಿಯಲ್ಲಿ ಬಿಟ್ಟು
ಆತನ ಹಿಂದೆ ಹೋದರು.

ಯೇಸು ಉಪದೇಶಮಾಡಿ ದೆವ್ವಗಳನ್ನು ಬಿಡಿಸಿ ರೋಗಿಗಳನ್ನು
ಸ್ವಸ್ಥಮಾಡಿ ಹೆಸರುಗೊಂಡದ್ದು.
(ಮತ್ತಾ. 8. 14—16; ಲೂಕ 4. 31—41.)

21 ಬಳಿಕ ಅವರು ಕಪೆರ್ನೌಮೆಂಬ ಊರಿಗೆ
ಸೇರಿದರು. ಕೂಡಲೆ ಸಬ್ಬತ್‌ದಿನದಲ್ಲಿ ಯೇಸು
ಸಭಾಮಂದಿರಕ್ಕೆ ಹೋಗಿ ಉಪದೇಶಮಾಡಿದನು.
22 ಜನರು ಆತನ ಉಪದೇಶಕ್ಕೆ ಅತ್ಯಾಶ್ಚರ್ಯ
ಪಟ್ಟರು; ಯಾಕಂದರೆ ಆತನು ಶಾಸ್ತ್ರಿಗಳಂತೆ

ಉಪದೇಶಮಾಡದೆ ಅಧಿಕಾರವಿದ್ದವನಂತೆ ಅವರಿಗೆ
23 ಉಪದೇಶಮಾಡುತ್ತಿದ್ದನು. ಆಗ ಅವರ ಸಭಾ
ಮಂದಿರದಲ್ಲಿ ದೆವ್ವಹಿಡಿದ ಒಬ್ಬ ಮನುಷ್ಯನಿದ್ದನು.
24 ಆ ದೆವ್ವವು—ನಜರೇತಿನ ಯೇಸುವೇ, ನಮ್ಮ
ಗೊಡವೆ ನಿನಗೇಕೆ? ನಮ್ಮನ್ನು ನಾಶಮಾಡುವದಕ್ಕೆ
ಬಂದೆಯಾ? ನಿನ್ನನ್ನು ಬಲ್ಲೆನು; ನೀನು ದೇವರು
25 ಪ್ರತಿಷ್ಠಿಸಿದವನೇ ಎಂದು ಕೂಗಿ ಹೇಳಿತು. ಯೇಸು
ಅದನ್ನು ಗದರಿಸಿ—ಸುಮ್ಮನಿರು, ಇವನನ್ನು ಬಿಟ್ಟು
26 ಹೋಗು ಎನ್ನಲಾಗಿ ಆ ದೆವ್ವವು ಅವನನ್ನು
ಒದ್ದಾಡಿಸಿ ಅಬ್ಬರಿಸಿಕೂಗಿ ಬಿಟ್ಟುಹೋಯಿತು
27 ಅದಕ್ಕೆ ಎಲ್ಲರು ಬೆರಗಾಗಿ—ಇದೇನಿರಬಹುದು?
ಇದು ಹೊಸ ಉಪದೇಶ. ಈತನು ಅಧಿಕಾರ
ದಿಂದ ದೆವ್ವಗಳಿಗೂ ಅಪ್ಪಣೆಕೊಡುತ್ತಾನೆ; ಅವು

ಆತನ ಮಾತನ್ನು ಕೇಳುತ್ತವೆ ಎಂದು ತಮ್ಮ
28 ತಮ್ಮೊಳಗೆ ವಿಚಾರಮಾಡಿಕೊಂಡರು. ಕೂಡಲೆ
ಆತನ ಸುದ್ದಿಯು ಗಲಿಲಾಯ ಸೀಮೆಯಲ್ಲಿ
29 ಎಲ್ಲೆಲ್ಲಿಯೂ ಹಬ್ಬಿತು. ಆ ಮೇಲೆ ಅವರು ಸಭಾ
ಮಂದಿರದಿಂದ ಹೊರಟು ಯಾಕೋಬ ಯೋಹಾ
ನರ ಸಂಗಡ ಸೀಮೋನ ಅಂದ್ರೆಯರ ಮನೆಗೆ
30 ಬಂದರು. ಅಲ್ಲಿ ಸೀಮೋನನ ಅತ್ತೆ ಜ್ವರ ಬಂದು
ಮಲಗಿರಲಾಗಿ ಅವರು ಆಕೆಯ ಸಂಗತಿಯನ್ನು
31 ಆತನಿಗೆ ತಿಳಿಸಿದರು. ಆತನು ಹತ್ತರಕ್ಕೆ ಬಂದು
ಆಕೆಯ ಕೈಯನ್ನು ಹಿಡಿದು ಎಬ್ಬಿಸಲು ಜ್ವರವು
ಆಕೆಯನ್ನು ಬಿಟ್ಟುಹೋಯಿತು; ಆಕೆಯು ಅವ
ರಿಗೆ ಉಪಚಾರಮಾಡಿದಳು.

32 ಸಂಜೆಯಾಗಿ ಹೊತ್ತು ಮುಣುಗಿದ ಮೇಲೆ

ಜನರು ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನೂ ದೆವ್ವ
ಹಿಡಿದವರನ್ನೂ ಆತನ ಬಳಿಗೆ ಕರತಂದರು.
33 ಊರೆಲ್ಲಾ ಬಾಗಲಿನ ಮುಂದೆ ಒಟ್ಟುಗೂಡಿತ್ತು.
34 ಆಗ ಆತನು ತರತರವಾದ ರೋಗಗಳಿಂದ ಮೈ
ಯಲ್ಲಿ ನೆಟ್ಟಗಿಲ್ಲದ ಬಹು ಜನರನ್ನು ವಾಸಿಮಾಡಿ
ಅನೇಕ ದೆವ್ವಗಳನ್ನು ಬಿಡಿಸಿದನು. ಮತ್ತು
ತಾನು ಇಂಥವನೆಂದು ಅವುಗಳಿಗೆ ತಿಳಿದದ್ದರಿಂದ
ಆತನು ಅವುಗಳನ್ನು ಮಾತಾಡಗೊಡಿಸಲಿಲ್ಲ.

ಯೇಸು ಸುವಾರ್ತೆಯನ್ನು ಸಾರುತ್ತಾ ಗಲಿಲಾಯದಲ್ಲಿ ಸಂಚರಿಸಿದ್ದು.
(ಲೂಕ 4. 42—44.)

35 ಮುಂಜಾನೆ ಇನ್ನೂ ಮೊಬ್ಬಿರುವಾಗ ಆತನು
ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ
36 ದೇವರನ್ನು ಪ್ರಾರ್ಥಿಸುತ್ತಿದ್ದನು. ಸೀಮೋನನೂ

ಅವನ ಸಂಗಡ ಇದ್ದವರೂ ಆತನನ್ನು ಹಿಂದಟ್ಟಿ
37 ಕಂಡು--ಎಲ್ಲರು ನಿನ್ನನ್ನು ಹುಡುಕುತ್ತಾರೆ ಅನ್ನ
38 ಲಾಗಿ ಆತನು ಅವರಿಗೆ—ನಾವು ಸಮೀಪದಲ್ಲಿರುವ
ಬೇರೆ ಊರುಗಳಿಗೆ ಹೋಗೋಣ; ಅಲ್ಲಿಯೂ
ನಾನು ಸುವಾರ್ತೆಯನ್ನು ಸಾರಬೇಕು; ಇದಕ್ಕಾಗಿ
ಯೇ ನಾನು ಹೊರಟುಬಂದಿದ್ದೇನೆ ಎಂದು ಹೇಳಿ
39 ದನು. ಬಳಿಕ ಆತನು ಗಲಿಲಾಯದಲ್ಲೆಲ್ಲಾ ಹೋಗಿ
ಅವರ ಸಭಾಮಂದಿರಗಳಲ್ಲಿ ಸುವಾರ್ತೆಯನ್ನು
ಸಾರುತ್ತಾ ದೆವ್ವಗಳನ್ನು ಬಿಡಿಸುತ್ತಾ ಇದ್ದನು.

ಕುಷ್ಠರೋಗಿಯನ್ನು ಸ್ವಸ್ಥಮಾಡಿದ್ದು.
(ಮತ್ತಾ. 8. 2—4; ಲೂಕ 5. 12—16.)

40 ಒಬ್ಬ ಕುಷ್ಠರೋಗಿಯು ಯೇಸುವಿನ ಬಳಿಗೆ
ಬಂದು ಆತನ ಮುಂದೆ ಮೊಣಕಾಲೂರಿಕೊಂಡು—

ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧಮಾಡಬಲ್ಲೆ
ಎಂದು ಬೇಡಿಕೊಳ್ಳಲು ಆತನು ಕನಿಕರ ಪಟ್ಟು ಕೈ
41 ನೀಡಿ ಅವನನ್ನು ಮುಟ್ಟಿ—ನನಗೆ ಮನಸ್ಸುಂಟು;
42-44 ಶುದ್ಧವಾಗು ಅಂದನು. ಕೂಡಲೆ ಅವನ ಕುಷ್ಠವು
ಹೋಗಿ, ಅವನು ಶುದ್ಧವಾದನು. ಆಗ ಯೇಸು
ಅವನಿಗೆ—ಯಾರಿಗೂ ಏನೂ ಹೇಳ ಬೇಡ ನೋಡು;
ಆದರೆ ಹೋಗಿ ಯಾಜಕನಿಗೆ ನಿನ್ನ ಮೈ ತೋರಿಸಿ
ಮೋಶೆಯು ನೇಮಕಮಾಡಿರುವದನ್ನು ಅರ್ಪಿಸಿ
ನಿನ್ನ ಶುದ್ಧಾಚಾರವನ್ನು ನೆರವೇರಿಸು, ಅದು ಜನ
ರಿಗೆ ಸಾಕ್ಷಿಯಾಗಲಿ ಎಂದು ಖಂಡಿತವಾಗಿ ಹೇಳಿ
45 ಅವನನ್ನು ಕಳುಹಿಸಿಬಿಟ್ಟನು. ಆದರೆ ಅವನು
ಹೊರಟುಹೋಗಿ ಆ ಸಂಗತಿಯನ್ನು ಬಹಳವಾಗಿ
ಸಾರಿ ಹಬ್ಬಿಸಿದ್ದರಿಂದ ಯೇಸು ಬಹಿರಂಗವಾಗಿ

ಇನ್ನು ಯಾವ ಊರೊಳಕ್ಕೂ ಹೋಗಲಾರದೆ
ಹೊರಗೆ ಅಡವಿಯ ಸ್ಥಳಗಳಲ್ಲಿ ಇದ್ದನು. ಮತ್ತು
ಜನರು ನಾಲ್ಕು ಕಡೆಯಿಂದಲೂ ಆತನ ಬಳಿಗೆ
ಬರುತ್ತಿದ್ದರು.

ಯೇಸು ಒಬ್ಬ ರೋಗಿಗೆ ಪಾಪವನ್ನು ಕ್ಷಮಿಸಿದ್ದಕ್ಕೆ ಶಾಸ್ತ್ರಿಗಳು ಆತನ ಮೇಲೆ ಆಕ್ಷೇಪಣೆ ಮಾಡಿದ್ದು.
(ಮತ್ತಾ. 9. 1—8; ಲೂಕ 5. 17—26.)

2 ಕೆಲವು ದಿನಗಳಾದ ಮೇಲೆ ಆತನು ಕಪೆರ್ನೌ
ಮಿಗೆ ತಿರಿಗಿ ಬಂದನು. ಮನೆಯಲ್ಲಿದ್ದಾನೆಂಬ
2 ವರ್ತಮಾನವು ಹಬ್ಬಿದಾಗ ಬಹುಜನರು ಕೂಡಿ
ಬಂದದ್ದರಿಂದ ಬಾಗಲಿನ ಬಳಿಯಲ್ಲಾದರೂ ಸ್ಥಳ
ವಿರಲಿಲ್ಲ. ಆತನು ಅವರಿಗೆ ದೇವರ ವಾಕ್ಯವನ್ನು
3 ಹೇಳುತ್ತಿದ್ದನು. ಅಷ್ಟರಲ್ಲಿ ಕೆಲವರು ಒಬ್ಬ ಪಾರ್ಶ್ವ

ಪಾಂಯುರೋಗಿಯನ್ನು ನಾಲ್ಕು ಮಂದಿಯಿಂದ
4 ಹೊರಿಸಿಕೊಂಡು ಆತನ ಬಳಿಗೆ ತಂದರು. ಜನರು
ಗುಂಪಾಗಿದ್ದದರಿಂದ ಅವರು ಆತನ ಹತ್ತಿರಕ್ಕೆ ಸೇರ
ಲಾರದೆ ಆತನಿದ್ದ ಮನೆಯ ಮೇಲ್ಚಾವಣಿಯನ್ನು
ಬಿಚ್ಚಿ ದ್ವಾರಮಾಡಿ ಪಾರ್ಶ್ವವಾಯುರೋಗಿಯು
5 ಮಲಗಿದ್ದ ಹಾಸಿಗೆಯನ್ನು ಇಳಿಸಿದರು. ಯೇಸು
ಅವರ ನಂಬಿಕೆಯನ್ನು ನೋಡಿ ಆ ಪಾರ್ಶ್ವವಾಯು
ರೋಗಿಗೆ–ಮಗನೇ, ನಿನ್ನ ಪಾಪಗಳು ಕ್ಷಮಿಸ
6 ಲ್ಪಟ್ಟಿವೆ ಎಂದು ಹೇಳಿದನು. ಆದರೆ ಶಾಸ್ತ್ರಿಗಳಲ್ಲಿ
7 ಕೆಲವರು ಅಲ್ಲಿ ಕೂತುಕೊಂಡಿದ್ದು–ಇವನು
ಯಾಕೆ ಹೀಗೆ ಮಾತನಾಡುತ್ತಾನೆ? ಇದು ದೇವ
ದೂಷಣೆ. ದೇವರೊಬ್ಬನೇ ಹೊರತು ಮತ್ತಾರು
ಪಾಪಗಳನ್ನು ಕ್ಷಮಿಸಬಲ್ಲರು? ಎಂದು ತಮ್ಮ

8 ತಮ್ಮ ಮನಸ್ಸಿನಲ್ಲಿ ಅಂದುಕೊಂಡರು. ಹೀಗೆ
ಅಂದುಕೊಳ್ಳುವದನ್ನು ಕೂಡಲೆ ಯೇಸು ತನ್ನ
ಆತ್ಮದಲ್ಲಿ ತಿಳಿದುಕೊಂಡು ಅವರಿಗೆ - ನೀವು ನಿಮ್ಮ
ಮನಸ್ಸಿನಲ್ಲಿ ಯಾಕೆ ಹೀಗೆ ಅಂದುಕೊಳ್ಳುತ್ತೀರಿ?
9 ಯಾವದು ಸುಲಭ? ನಿನ್ನ ಪಾಪಗಳು ಕ್ಷಮಿಸಲ್ಪ
ಟ್ಟಿವೆ ಅನ್ನುವದೋ? ಎದ್ದು ನಿನ್ನ ಹಾಸಿಗೆಯನ್ನು
10 ತೆಗೆದುಕೊಂಡು ನಡೆ ಅನ್ನುವದೋ? ಆದರೆ ಪಾಪ
ಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರ
ನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂಬದು
ನಿಮಗೆ ತಿಳಿಯಬೇಕು ಎಂದು ಹೇಳಿ ಪಾರ್ಶ್ವ
11 ವಾಯುರೋಗಿಯನ್ನು ನೋಡಿ - ಎದ್ದು ನಿನ್ನ
ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗೆಂದು
12 ನಿನಗೆ ಹೇಳುತ್ತೇನೆ ಅಂದನು. ಅವನು ಎದ್ದು

ಕೂಡಲೆ ತನ್ನ ಹಾಸಿಗೆಯನ್ನು ತೆಗೆದುಕೊಂಡು
ಎಲ್ಲರ ಮುಂದೆ ಹೊರಟುಹೋದನು. ಅದಕ್ಕೆ
ಎಲ್ಲರು ಬೆರಗಾಗಿ—ಇದುವರೆಗೆ ನಾವು ಇಂಥದನ್ನು
ಎಂದಿಗೂ ನೋಡಿದ್ದೇ ಇಲ್ಲವೆಂದು ಹೇಳುತ್ತಾ
ದೇವರನ್ನು ಕೊಂಡಾಡಿದರು.

ಯೇಸು ಭ್ರಷ್ಟರ ಕೂಡ ಊಟಮಾಡಿದ್ದಕ್ಕೆ ಶಾಸ್ತ್ರಿಗಳು ಆತನ ಮೇಲೆ ಆಕ್ಷೇಪಣೆ ಮಾಡಿದ್ದು.

(ಮತ್ತಾ. 9. 9—13; ಲೂಕ 5. 27—32.)

13 ಆತನು ಹೊರಟು ತಿರಿಗಿ ಸಮುದ್ರದ ಬಳಿಗೆ
ಹೋದನು. ಜನರ ಗುಂಪೆಲ್ಲಾ ಆತನ ಬಳಿಗೆ
ಬಂದಾಗ ಆತನು ಅವರಿಗೆ ಉಪದೇಶಮಾಡಿದನು.
14 ಆತನು [ಅಲ್ಲಿಂದ] ಹೋಗುತ್ತಿರುವಾಗ ಸುಂಕಕ್ಕೆ
ಕೂತಿದ್ದ ಅಲ್ಫಾಯನ ಮಗನಾದ ಲೇವಿಯನ್ನು

ನೋಡಿ–ನನ್ನನ್ನು ಹಿಂಬಾಲಿಸು ಎಂದು ಅವನನ್ನು
ಕರೆಯಲು ಅವನು ಎದ್ದು ಆತನ ಹಿಂದೆ ಹೋ
15 ದನು. ಅನಂತರ ಆತನು ಅವನ ಮನೆಯೊಳಗೆ
ಊಟಕ್ಕೆ ಕೂತಿರುವಲ್ಲಿ, ಬಹು ಮಂದಿ ಸುಂಕದವ
ರೂ ಪಾಪಿಗಳೂ ಯೇಸುವಿನ ಮತ್ತು ಆತನ
16 ಶಿಷ್ಯರ ಪಙ್ತ್ತಿಯಲ್ಲೇ ಕೂತುಕೊಂಡರು. ಅಂಥ
ವರು ಬಹುಮಂದಿ ಇದ್ದರು. ಫರಿಸಾಯರಾದ
ಶಾಸ್ತ್ರಿಗಳು ಆತನ ಹಿಂದೆ ಹೋಗಿ ಆತನು ಪಾಪಿಗಳ
ಮತ್ತು ಸುಂಕದವರ ಸಂಗಡ ಊಟಮಾಡುವ
ದನ್ನು ಕಂಡು ಆತನ ಶಿಷ್ಯರಿಗೆ–ಈತನು ಸುಂಕ
ದವರ ಮತ್ತು ಪಾಪಿಗಳ ಸಂಗಡ ಊಟಮಾಡು
17 ತ್ತಾನೆ ನೋಡಿರಿ ಎಂದು ಹೇಳಿದರು. ಯೇಸು
ಅದನ್ನು ಕೇಳಿ–ಕ್ಷೇಮದಿಂದಿರುವವರಿಗೆ ವೈದ್ಯನು

ಬೇಕಾಗಿಲ್ಲ; ಕ್ಷೇಮವಿಲ್ಲದವರಿಗೆ ಬೇಕು. ನಾನು
ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ,
ಪಾಪಿಗಳನ್ನು ಕರೆಯುವದಕ್ಕೆ ಬಂದವನು ಅಂದನು.

ಯೇಸುವಿನ ಶಿಷ್ಯರು ಉಪವಾಸಮಾಡದ್ದಕ್ಕೆ ಶಾಸ್ತ್ರಿಗಳು ಆತನ ಮೇಲೆ
ಆಕ್ಷೇಪಣೆ ಮಾಡಿದ್ದು.
(ಮತ್ತಾ. 9. 14—17; ಲೂಕ 5. 33—38.)

18 ಇದಲ್ಲದೆ ಯೋಹಾನನ ಶಿಷ್ಯರೂ ಫರಿಸಾಯ
ರೂ ಉಪವಾಸವಾಗಿದ್ದರು. ಅವರು ಆತನ ಬಳಿಗೆ
ಬಂದು-ಯೋಹಾನನ ಶಿಷ್ಯರೂ ಫರಿಸಾಯರ
ಶಿಷ್ಯರೂ ಉಪವಾಸಮಾಡುತ್ತಾರಲ್ಲ? ನಿನ್ನ ಶಿಷ್ಯ
ರು ಯಾಕೆ ಉಪವಾಸಮಾಡುವದಿಲ್ಲ? ಎಂದು
19 ಕೇಳಲು ಯೇಸು ಅವರಿಗೆ-ಮದುವೆಯ ಜನರು
ತಮ್ಮ ಸಂಗಡ ಮದಲಿಂಗನು ಇರುವಲ್ಲಿ ಉಪ

ವಾಸಮಾಡುವದುಂಟೇ? ಮದಲಿಂಗನು ತಮ್ಮ
ಸಂಗಡ ಇರುವ ತನಕ ಅವರು ಉಪವಾಸಮಾಡ
20 ಲಾಗದು. ಆದರೆ ಮದಲಿಂಗನನ್ನು ಅವರ ಬಳಿ
ಯಿಂದ ತೆಗೆದುಕೊಂಡು ಹೋಗುವ ಕಾಲ ಬರು
ತ್ತದೆ; ಆ ಕಾಲದಲ್ಲೇ ಉಪವಾಸಮಾಡುವರು.
21 ಯಾರೂ ಹೊಸ ಬಟ್ಟೆಯ ತುಂಡನ್ನು ಹಳೆಯ
ವಸ್ತ್ರಕ್ಕೆ ತ್ಯಾಪೆ ಹಚ್ಚುವದಿಲ್ಲ; ಹಚ್ಚಿದರೆ ಆ ಹೊಸ
ತ್ಯಾಪೆಯು ಹಳೆಯ ವಸ್ತ್ರವನ್ನು ಹಿಂಜುವದರಿಂದ
22 ಹರಕು ಹೆಚ್ಚಾಗುವದು. ಮತ್ತು ಹಳೆಯ ಬುದ್ದಲಿ
ಗಳಲ್ಲಿ ಹೊಸ ದ್ರಾಕ್ಷಾರಸವನ್ನು ಯಾರೂ ಹಾಕಿ
ಡುವದಿಲ್ಲ; ಇಟ್ಟರೆ ಆ ದ್ರಾಕ್ಷಾರಸವು ಬುದ್ದಲಿ
ಗಳನ್ನು ಒಡೆದು ದ್ರಾಕ್ಷಾರಸವು ಬುದ್ದಲಿಗಳು
ಎರಡೂ ಕೆಟ್ಟುಹೋಗುವವು. ಆದರೆ ಹೊಸ

ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ [ಹಾಕಿಡ
ತಕ್ಕದ್ದು] ಎಂದು ಹೇಳಿದನು.

ಯೇಸುವೂ ಆತನ ಶಿಷ್ಯರೂ ಸಬ್ಬತ್‌ದಿನವನ್ನು ಅಲಕ್ಷ್ಯವಮಾಡುತ್ತಾರೆಂದು
ಶಾಸ್ತ್ರಿಗಳು ಆತನ ಮೇಲೆ ಆಕ್ಷೇಪಣೆಮಾಡಿದ್ದು.
(ಮತ್ತಾ. 12. 1—14; ಲೂಕ 6. 1—11.)

23 ಯೇಸು ಸಬ್ಬತ್‌ದಿನದಲ್ಲಿ ಪೈರಿನ ಹೊಲಗಳನ್ನು
ಹಾದುಹೋಗುತ್ತಿರುವಾಗ, ಆತನ ಶಿಷ್ಯರು ನಡೆ
24 ಯುತ್ತಾ ತೆನೆಗಳನ್ನು ಮುರುಕೊಂಡರು. ಫರಿ
ಸಾಯರು ಆತನನ್ನು—ನೋಡು, ಇವರು ಸಬ್ಬತ್
ದಿನದಲ್ಲಿ ಮಾಡಬಾರದ ಕೆಲಸವನ್ನು ಯಾಕೆ
25 ಮಾಡುತ್ತಾರೆ ಎಂದು ಕೇಳಿದರು. ಆತನು ಅವ
ರಿಗೆ—ದಾವೀದನು ತಾನೂ ತನ್ನ ಸಂಗಡ ಇದ್ದ
ವರೂ ಕೊರತೆಯುಳ್ಳವರಾಗಿ ಹಸಿದಾಗ ಏನು

ಮಾಡಿದನೆಂಬದನ್ನು ನೀವು ಎಂದಾದರೂ ಓದಲಿಲ್ಲ
26 ವೋ? ಅವನು ಮಹಾಯಾಜಕನಾದ ಅಬಿಯಾ
ತರನ ಕಾಲದಲ್ಲಿ ದೇವರ ಮಂದಿರದೊಳಕ್ಕೆ ಹೋಗಿ
ಯಾಜಕರು ಹೊರತು ಮತ್ತಾರೂ ತಿನ್ನಬಾರದ
ನೈವೇದ್ಯದ ರೊಟ್ಟಿಗಳನ್ನು ತಾನು ತಿಂದು ತನ್ನ
ಸಂಗಡ ಇದ್ದವರಿಗೂ ಕೊಟ್ಟನಲ್ಲಾ? ಎಂದು ಹೇಳಿ
27 ದನು. ಮತ್ತು ಆತನು—ಸಬ್ಬತ್‌ದಿನವು ಮನುಷ್ಯ
ರಿಗೋಸ್ಕರ ಉಂಟಾಯಿತೇ ಹೊರತು ಮನು
28 ಷ್ಯರು ಸಬ್ಬತ್‌ದಿನಕ್ಕೋಸ್ಕರ ಉಂಟಾಗಲಿಲ್ಲ; ಹೀಗಿ
ರಲಾಗಿ ಮನುಷ್ಯಕುಮಾರನು ಸಬ್ಬತ್‌ದಿನಕ್ಕೂ
ಒಡೆಯನಾಗಿದ್ದಾನೆ ಅಂದನು.

3 ಇನ್ನೊಂದು ಸಮಯದಲ್ಲಿ ಯೇಸು ಸಭಾ
ಮಂದಿರಕ್ಕೆ ಹೋದಾಗ ಅಲ್ಲಿ ಕೈಬತ್ತಿಹೋದವ

2 ನೊಬ್ಬನಿದ್ದನು. ಅವರು ಆತನ ಮೇಲೆ ತಪ್ಪು
ಹೊರಿಸಬೇಕೆಂದು ಆಲೋಚಿಸಿ ಸಬ್ಬತ್‌ದಿನದಲ್ಲಿ
ಅವನನ್ನು ಸ್ವಸ್ಥಮಾಡುವನೋ ಏನೋ ಎಂದು
3 ಆತನನ್ನು ಹೊಂಚಿ ನೋಡುತ್ತಾ ಇದ್ದರು. ಆತನು
ಕೈಬತ್ತಿದ್ದವನಿಗೆ—ಎದ್ದು ನಡುವೆ ಬಾ ಎಂದು ಹೇಳಿ
4 ಅವರಿಗೆ—ಸಬ್ಬತ್‌ದಿನದಲ್ಲಿ ಯಾವದನ್ನು ಮಾಡು
ವದು ನ್ಯಾಯ? ಮೇಲನ್ನು ಮಾಡುವದೋ,
ಕೇಡನ್ನು ಮಾಡುವದೋ? ಪ್ರಾಣವನ್ನು ಉಳಿಸು
ವದೋ, ತೆಗೆಯುವದೋ? ಎಂದು ಹೇಳಲು
5 ಅವರು ಸುಮ್ಮನಿದ್ದರು. ಆಗ ಆತನು ಅವರ
ಮನಸ್ಸು ಕಲ್ಲಾಗಿರುವದನ್ನು ಕಂಡು ದುಃಖಪಟ್ಟು
ಕೋಪದಿಂದ ಸುತ್ತಲೂ ಅವರನ್ನು ನೋಡಿ ಆ
ಮನುಷ್ಯನಿಗೆ—ನಿನ್ನ ಕೈಚಾಚು ಎಂದು ಹೇಳಿದನು.

6 ಅವನು ಚಾಚಿದನು; ಕೈ ವಾಸಿಯಾಯಿತು. ಫರಿ
ಸಾಯರು ಹೊರಕ್ಕೆ ಹೋಗಿ ಕೂಡಲೆ ಹೆರೋದ್ಯ
ರನ್ನು ಕೂಡಿಕೊಂಡು ಇವನನ್ನು ಯಾವ ಉಪಾ
ಯದಿಂದ ಕೊಲ್ಲೋಣ ಎಂದು ಆತನಿಗೆ ವಿರೋಧ
ವಾಗಿ ಆಲೋಚನೆ ಮಾಡಿಕೊಂಡರು.

ಯೇಸು ಏಂಗಡವಾಗಿ ಹೋಗಿ ಹನ್ನೆರಡು ಮಂದಿ ಅಪೊಸ್ತಲರನ್ನು ನೇಮಿಸಿದ್ದು.

(ಮತ್ತಾ. 10. 1—4; ಲೂಕ 6. 12—19.)

7 ಯೇಸು ತನ್ನ ಶಿಷ್ಯರ ಕೂಡ ಆ ಸ್ಥಳವನ್ನು
ಬಿಟ್ಟು ಸಮುದ್ರದ ಬಳಿಗೆ ಹೋದನು. ಗಲಿಲಾಯ
ದಿಂದ ಬಹು ಜನರು ಆತನ ಹಿಂದೆ ಹೋದರು.
8 ಇದಲ್ಲದೆ ಆತನು ಇಂಥಿಂಥ ಕೆಲಸಗಳನ್ನು ಮಾಡು
ತ್ತಾನೆಂದು ಕೇಳಿ ಬಹು ಜನರು ಯೂದಾಯ

ದಿಂದಲೂ ಯೆರೂಸಲೇಮಿನಿಂದಲೂ ಇದೂಮಾ
ಯದಿಂದಲೂ ಯೊರ್ದನ್ ಹೊಳೆಯ ಆಚೆಯಿಂದ
ಲೂ ತೂರ್ ಸೀದೋನ್ ಪಟ್ಟಣಗಳ ಸುತ್ತಲಿ
9 ನಿಂದಲೂ ಆತನ ಬಳಿಗೆ ಬಂದರು. ಜನರು
ಗುಂಪಾಗಿದ್ದದರಿಂದ ಮೈಮೇಲೆ ಬಿದ್ದು ನೂಕಾ
ರೆಂದು ಆತನು ತನಗೆ ಒಂದು ದೋಣಿಯು ಸಿದ್ಧ
10 ವಾಗಿರಲಿ ಎಂಬದಾಗಿ ಶಿಷ್ಯರಿಗೆ ಹೇಳಿದನು. ಯಾ
ಕಂದರೆ ಆತನು ಅನೇಕರನ್ನು ಸ್ವಸ್ಥಮಾಡಿದ್ದದ
ರಿಂದ ರೋಗಪೀಡಿತರಾಗಿದ್ದವರೆಲ್ಲರೂ ಆತನನ್ನು
11 ಮುಟ್ಟಬೇಕೆಂದು ಮೇಲೆ ಬೀಳುತ್ತಿದ್ದರು. ಮತ್ತು
ದೆವ್ವಗಳು ಆತನನ್ನು ಕಂಡಾಗೆಲ್ಲಾ ಆತನ ಪಾದಕ್ಕೆ
ಬಿದ್ದು—ನೀನು ದೇವಕುಮಾರನೆಂದು ಕೂಗು
12 ತ್ತಿದ್ದವು. ಆದರೆ ಆತನು ತಾನು ಇಂಥವನೆಂಬ

ದಾಗಿ ಯಾರಿಗೂ ಪ್ರಕಟಿಸಬಾರದೆಂದು ಅವರಿಗೆ
ಬಹು ಖಂಡಿತವಾಗಿ ಹೇಳಿದನು.
13 ಆ ಮೇಲೆ ಯೇಸು ಬೆಟ್ಟವನ್ನು ಹತ್ತಿ ತನಗೆ
ಬೇಕಾದವರನ್ನು ಹತ್ತಿರಕ್ಕೆ ಕರೆಯಲು ಅವರು
14 ಆತನ ಬಳಿಗೆ ಬಂದರು. ಆತನು ಹನ್ನೆರಡು ಮಂದಿ
15 ಯನ್ನು ಆರಿಸಿ ಅವರು ತನ್ನ ಸಂಗಡ ಇರ
ಬೇಕೆಂತಲೂ ದೆವ್ವಗಳನ್ನು ಬಿಡಿಸುವ ಅಧಿಕಾರ
ವುಳ್ಳವರಾಗಿ ಸುವಾರ್ತೆಯನ್ನು ಸಾರುವದಕ್ಕೆ
ತಾನು ಅವರನ್ನು ಕಳುಹಿಸುವೆನೆಂತಲೂ ಆ ಹನ್ನೆ
ರಡು ಮಂದಿಯನ್ನು ಆರಿಸಿ ನೇಮಿಸಿದನು.
16 ಸೀಮೋನನೆಂಬವನಿಗೆ ಪೇತ್ರನೆಂದು ಹೆಸರನ್ನು
17 ಇಟ್ಟನು. ಜೆಬೆದಾಯನ ಮಗನಾದ ಯಾಕೋಬ
ನಿಗೂ ಯಾಕೋಬನ ತಮ್ಮನಾದ ಯೋಹಾನ

ನಿಗೂ ಬೊವನೆರ್ಗೆಸ್ ಅಂದರೆ ಗುಡುಗಿನ ಮರಿ
18 ಗಳು ಎಂದು ಹೆಸರಿಟ್ಟನು. ಉಳಿದವರು ಯಾರಂ
ದರೆ, ಅಂದ್ರೆಯ, ಫಿಲಿಪ್ಪ, ಬಾರ್ತೊಲೊಮಾಯ,
ಮತ್ತಾಯ, ತೋಮ, ಅಲ್ಫಾಯನ ಮಗನಾದ
ಯಾಕೋಬ, ತದ್ದಾಯ, ಮತಾಭಿಮಾನಿ ಎಂದು
19 ಹೆಸರುಗೊಂಡ ಸೀಮೋನ, ಯೇಸುವನ್ನು ಹಿಡು
ಕೊಟ್ಟ ಇಸ್ಕರಿಯೋತ ಯೂದ, ಇವರೇ.

ಯೇಸುವಿನ ವೈರಿಗಳು ಆತನನ್ನು ದೂಷಿಸಿದ್ದು; ಆತನ ಸ್ವಂತ ಜನರು ಆತನ ವಿಷಯವಾಗಿ ಅನುಮಾನಪಟ್ಟದ್ದು.

(ಮತ್ತಾ. 12. 22—32; 46—50; ಲೂಕ 11. 14 – 22; 8. 19—21.)

20 ಆತನು ಮನೆಯೊಳಗೆ ಬಂದಾಗ ಜನರು ತಿರಿಗಿ
ನೆರೆದದ್ದರಿಂದ ಊಟಕ್ಕೂ ಅವಕಾಶವಾಗಲಿಲ್ಲ.
21 ಇದನ್ನು ಕೇಳಿ ಆತನ ಬಂಧುಗಳು ಅವನಿಗೆ

ಹುಚ್ಚು ಹಿಡಿದದೆ ಎಂದು ಹೇಳಿ ಆತನನ್ನು ಹಿಡಿಯು
22 ವದಕ್ಕೆ ಹೊರಟರು. ಇದಲ್ಲದೆ ಯೆರೂಸಲೇಮಿ
ನಿಂದ ಬಂದಿದ್ದ ಶಾಸ್ತ್ರಿಗಳು—ಇವನನ್ನು ಬೆಲ್ಜೆಬೂ
ಲನು ಹಿಡಿದಿದ್ದಾನೆಂತಲೂ ಇವನು ದೆವ್ವಗಳ ಒಡೆ
ಯನ ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಾ
23 ನೆಂತಲೂ ಹೇಳುತ್ತಿದ್ದರು. ಆತನು ಅವರನ್ನು ಹತ್ತಿ
ರಕ್ಕೆ ಕರೆದು ಅವರಿಗೆ ಸಾಮ್ಯರೂಪವಾಗಿ ಹೇಳಿ
ದ್ದೇನಂದರೆ—ಸೈತಾನನು ಸೈತಾನನನ್ನು ಬಿಡಿಸು
24 ವದುಂಟೇ? ಒಂದು ರಾಜ್ಯದಲ್ಲಿ ಭೇದಹುಟ್ಟಿದರೆ
25 ಆ ರಾಜ್ಯವು ಉಳಿಯಲಾರದು; ಒಂದು ಮನೆ
ಯಲ್ಲಿ ಭೇದಹುಟ್ಟಿದರೆ ಆ ಮನೆಯು ನಿಲ್ಲಲಾರದು.
26 ಅದರಂತೆ ಸೈತಾನನು ತನಗೆ ವಿರೋಧವಾಗಿ
ಎದ್ದು ತನ್ನಲ್ಲಿ ಭೇದಹುಟ್ಟಿಸಿಕೊಂಡರೆ ಅವನು ನಿಲ್ಲ

27 ಲಾರದೆ ನಾಶವಾಗಿ ಹೋಗುವನು. ಅದಲ್ಲದೆ
ಒಬ್ಬನು ಮೊದಲು ಬಲಿಷ್ಠನನ್ನು ಕಟ್ಟಿಹಾಕದೆ ಆ
ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತ
ನ್ನು ಸುಲುಕೊಳ್ಳುವದಕ್ಕಾಗುವದಿಲ್ಲ; ಕಟ್ಟಿಹಾಕಿದ
ಮೇಲೆ ಅವನ ಮನೆಯನ್ನು ಸುಲುಕೊಂಡಾನು.
30 ಇದಲ್ಲದೆ ಅವರು—ಇವನಿಗೆ ದೆವ್ವ ಹಿಡಿದದೆ ಎಂದು
28 ಹೇಳಿದ್ದರಿಂದ ಆತನು ಅವರಿಗೆ—ನಿಮಗೆ ಸತ್ಯವಾಗಿ
ಹೇಳುತ್ತೇನೆ, ಮನುಷ್ಯರು ಎಷ್ಟು ದೂಷಿಸಿ
ದಾಗ್ಯೂ ಅವರು ಮಾಡುವ ಎಲ್ಲಾ ಪಾಪಗಳಿಗೂ
ದೂಷಣೆಗಳಿಗೂ ಕ್ಷಮಾಪಣೆ ಉಂಟಾಗುವದು,
29 ಆದರೆ ಪವಿತ್ರಾತ್ಮನನ್ನು ದೂಷಿಸಿದವನು ಎಂದಿಗೂ
ಕ್ಷಮಾಪಣೆ ಹೊಂದನು; ಅವನು ಶಾಶ್ವತ ಪಾಪ
ದೊಳಗೆ ಸೇರಿದವನಾದನು ಎಂದು ಹೇಳಿದನು.

31 ಜನರು ಆತನ ಸುತ್ತಲು ಕೂತುಕೊಂಡಿದ್ದಾಗ
ಆತನ ತಾಯಿಯೂ ತಮ್ಮಂದಿರೂ ಬಂದು
ಹೊರಗೆ ನಿಂತುಕೊಂಡು ಆತನನ್ನು ಕರೇ ಕಳು
32 ಹಿಸಿದರು. ಆ ಜನರು ಆತನಿಗೆ–ನಿನ್ನ ತಾಯಿ
ಯೂ ನಿನ್ನ ತಮ್ಮಂದಿರೂ ನಿನ್ನನ್ನು ಹುಡುಕಿ
ಕೊಂಡು ಬಂದು ಹೊರಗೆ ನಿಂತಿರುತ್ತಾರೆ
33 ನೋಡು ಎಂದು ಹೇಳಿದ್ದಕ್ಕೆ ಆತನು ಅವರಿಗೆ–
ನನಗೆ ತಾಯಿಯೂ ತಮ್ಮಂದಿರೂ ಯಾರು?
ಎಂದು ಹೇಳಿ ತನ್ನ ಸುತ್ತಲು ಕೂತಿದ್ದವರನ್ನು
34 ನೋಡಿ–ಇಗೋ, ನನ್ನ ತಾಯಿ, ನನ್ನ ತಮ್ಮಂದಿ
35 ರು. ದೇವರ ಚಿತ್ತದಂತೆ ನಡೆಯುವವನೇ ನನಗೆ
ತಮ್ಮನೂ ತಂಗಿಯೂ ತಾಯಿಯೂ ಆಗಬೇಕು
ಅಂದನು.

ದೇವರ ರಾಜ್ಯವನ್ನು ಕುರಿತ ಸಾಮ್ಯಗಳು.

(ಮತ್ತಾ. 13. 1 — 34; ಲೂಕ 8. 4 — 18; 13. 18, 19.)

4 ಆತನು ತಿರಿಗಿ ಸಮುದ್ರದ ದಡದಲ್ಲಿ ಉಪದೇಶ
ಮಾಡುತ್ತಿದ್ದನು. ಬಹು ಜನರು ಆತನ ಬಳಿಗೆ
ಕೂಡಿ ಬಂದದ್ದರಿಂದ ಆತನು ಸಮುದ್ರದಲ್ಲಿದ್ದ
ದೋಣಿಹತ್ತಿ ಕೂತುಕೊಂಡನು; ಆ ಜನರೆಲ್ಲರು
2 ಸಮುದ್ರದ ಹತ್ತರ ನೆಲದ ಮೇಲೆ ಇದ್ದರು. ಆಗ
ಆತನು ಅವರಿಗೆ ಸಾಮ್ಯರೂಪವಾಗಿ ಅನೇಕ
ಸಂಗತಿಗಳನ್ನು ಉಪದೇಶಮಾಡಿದನು. ಆ ಉಪ
ದೇಶದಲ್ಲಿ ಅವರಿಗೆ ಹೇಳಿದ್ದೇನಂದರೆ—
3 ಕೇಳಿರಿ! ಬಿತ್ತುವವನು ಬಿತ್ತುವದಕ್ಕೆ ಹೊರ
4 ಟನು. ಬಿತ್ತುವಾಗ ಕೆಲವು ಬೀಜ ದಾರಿಯ
ಮಗ್ಗುಲಲ್ಲಿ ಬಿದ್ದವು; ಹಕ್ಕಿಗಳು ಬಂದು ಅವು

5 ಗಳನ್ನು ತಿಂದುಬಿಟ್ಟವು. ಬೇರೆ ಕೆಲವು ಬೀಜ
ಬಹಳ ಮಣ್ಣಿಲ್ಲದ ಬಂಡೆಯ ನೆಲದಲ್ಲಿ ಬಿದ್ದವು;
ಅಲ್ಲಿ ಮಣ್ಣು ತೆಳ್ಳಗಿದ್ದದರಿಂದ ಅವು ಬೇಗ ಮೊಳೆ
6 ತವು; ಆದರೆ ಬಿಸಲೇರಿದಾಗ ಬಾಡಿ ಬೇರಿಲ್ಲದ
7 ಕಾರಣ ಒಣಗಿಹೋದವು. ಮತ್ತೆ ಕೆಲವು ಬೀಜ
ಮುಳ್ಳುಗಿಡಗಳಲ್ಲಿ ಬಿದ್ದವು; ಮುಳ್ಳುಗಿಡಗಳು
ಬೆಳೆದು ಅವುಗಳನ್ನು ಅಡಗಿಸಿಬಿಟ್ಟದ್ದರಿಂದ ಅವು
8 ಫಲಕೊಡಲಿಲ್ಲ. ಇನ್ನು ಕೆಲವು ಬೀಜ ಒಳ್ಳೆಯ
ನೆಲದಲ್ಲಿ ಬಿದ್ದು ಹುಟ್ಟಿ ಬೆಳೆಯುತ್ತಾ ಬಂದು ಒಂದು
9 ಮೂವತ್ತರಷ್ಟು, ಒಂದು ಅರುವತ್ತರಷ್ಟು, ಒಂದು
ನೂರರಷ್ಟು ಫಲವನ್ನು ಕೊಟ್ಟವು ಎಂದು
ಹೇಳಿ—ಕೇಳುವದಕ್ಕೆ ಕಿವಿಯುಳ್ಳವನು ಕೇಳಲಿ
ಅಂದನು.

10 ಆತನು ಒಬ್ಬನೇ ಇದ್ದಾಗ ಆತನ ಹತ್ತಿರ ಇದ್ದ
ವರು ಹನ್ನೆರಡು ಮಂದಿ ಶಿಷ್ಯರ ಕೂಡ ಆ ಸಾಮ್ಯ
11 ಗಳ ವಿಷಯದಲ್ಲಿ ಆತನನ್ನು ಕೇಳಿದರು. ಆತನು
ಅವರಿಗೆ – ದೇವರ ರಾಜ್ಯದ ಗುಟ್ಟು ನಿಮಗೇ
ಕೊಟ್ಟಿದೆ; ಹೊರಗಿನವರಿಗೆ ಎಲ್ಲವೂ ಸಾಮ್ಯದ
ಮರೆಯಲ್ಲಿವೆ.

12 ಅವರು ಕಣ್ಣಿದ್ದು ನೋಡಿದರೂ ಕಾಣ
ಬಾರದು,
ಕಿವಿಯಿದ್ದು ಕೇಳಿದರೂ ತಿಳುಕೊಳ್ಳ
ಬಾರದು,
ಹಾಗೆ ಕಂಡು ತಿಳುಕೊಂಡರೆ ಅವರು
ದೇವರ ಕಡೆಗೆ ತಿರುಗಿಕೊಂಡು ಪಾಪ
ಕ್ಷಮೆಯನ್ನು ಹೊಂದಾರು

13 ಎಂದೇ ಮರೆಮಾಡಲಾಗಿದೆ. ಆ ಮೇಲೆ ಆತನು
ಅವರಿಗೆ ಹೇಳಿದ್ದೇನಂದರೆ—ಈ ಸಾಮ್ಯದ ಅರ್ಥ
ನಿಮಗೆ ಗೊತ್ತಾಗಲಿಲ್ಲವೋ? ಹಾಗಾದರೆ ನನ್ನ
ಎಲ್ಲಾ ಸಾಮ್ಯಗಳನ್ನು ಹೇಗೆ ತಿಳುಕೊಂಡೀರಿ?
14 ಆ ಬಿತ್ತುವವನು ವಾಕ್ಯವೆಂಬ ಬೀಜವನ್ನು ಬಿತ್ತು
15 ತ್ತಾನೆ. ಕೆಲವರು ವಾಕ್ಯವನ್ನು ಕೇಳಿದ ಕೂಡಲೆ
ಸೈತಾನನು ಬಂದು ಅವರಲ್ಲಿ ಬಿತ್ತಿದ್ದ ವಾಕ್ಯವನ್ನು
ತೆಗೆದುಬಿಡುತ್ತಾನೆ. ಇವರೇ ವಾಕ್ಯವು ಬಿತ್ತಲ್ಪಟ್ಟ
16-17 ದಾರಿಯ ಮಗ್ಗುಲಾಗಿರುವವರು. ಅದೇ ಪ್ರಕಾರ
ಬೇರೆ ಕೆಲವರು ವಾಕ್ಯವನ್ನು ಕೇಳಿದ ಕೂಡಲೆ
ಸಂತೋಷದಿಂದ ಅದನ್ನು ಸ್ವೀಕರಿಸುತ್ತಾರೆ;
ತಮಗೆ ಬೇರಿಲ್ಲದ ಕಾರಣ ಇವರು ಸ್ವಲ್ಪ ಕಾಲ
ಮಾತ್ರವೇ ಇದ್ದು ಬಳಿಕ ಆ ವಾಕ್ಯದ ನಿಮಿತ್ತವಾಗಿ

ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ
ಎಡವಿಬೀಳುತ್ತಾರೆ; ಇವರೇ ಬೀಜ ಬಿದ್ದ ಬಂಡೆಯ
18-19 ನೆಲವಾಗಿರುವವರು. ಇನ್ನು ಕೆಲವರು ವಾಕ್ಯ
ವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಗಳೂ
ಐಶ್ವರ್ಯದಿಂದುಂಟಾಗುವ ಮೋಸವೂ ಇತರ
ವಿಷಯಗಳ ಮೇಲಣ ಆಶೆಗಳೂ ಒಳಗೆ ಸೇರಿ ಆ
ವಾಕ್ಯವನ್ನು ಅಡಗಿಸಿಬಿಡುವದರಿಂದ ಫಲವನ್ನು
ಕೊಡದೆ ಇರುತ್ತಾರೆ; ಇವರೇ ಮುಳ್ಳುಗಿಡಗಳಲ್ಲಿ
20 ಬೀಜ ಬಿದ್ದ ನೆಲವಾಗಿರುವವರು. ಮತ್ತೆ ಕೆಲವರು
ವಾಕ್ಯವನ್ನು ಕೇಳಿ ಕೈಕೊಂಡು ಮೂವತ್ತರಷ್ಟಾ
ಗಲಿ ಅರುವತ್ತರಷ್ಟಾಗಲಿ ನೂರರಷ್ಟಾಗಲಿ ಫಲ
ವನ್ನು ಕೊಡುತ್ತಾರೆ; ಇವರೇ ಬೀಜ ಬಿದ್ದ ಒಳ್ಳೆ
ಯ ನೆಲವಾಗಿರುವವರು ಅಂದನು.

21 ಇದಲ್ಲದೆ ಆತನು ಅವರಿಗೆ—ದೀಪವನ್ನು ತಂದು
ಕೊಳಗದೊಳಗಾಗಲಿ ಮಂಚದ ಕೆಳಗಾಗಲಿ ಇಡು
ವದುಂಟೇ? ದೀಪಸ್ತಂಭದ ಮೇಲೆ ಇಡುತ್ತಾರಲ್ಲಾ?
22 ಯಾವದಾಗಲಿ ಪ್ರಕಾಶಕ್ಕೆ ಬರಬೇಕೇ ಹೊರತು
ರಹಸ್ಯವಾಗಿರುವದಿಲ್ಲ; ಯಾವದಾಗಲಿ ಬೈಲಿಗೆ
23 ಬರಬೇಕೇ ಹೊರತು ಗುಟ್ಟಾಗಿರುವದಿಲ್ಲ. ಕೇಳು
ವದಕ್ಕೆ ಕಿವಿಯುಳ್ಳವನು ಕೇಳಲಿ ಎಂದು ಹೇಳಿ
24 ದನು. ಮತ್ತು ಆತನು ಅವರಿಗೆ—ನೀವು ಕಿವಿ
ಗೊಡುವ ವಿಷಯದಲ್ಲಿ ಎಚ್ಚರಿಕೆ. ನೀವು ಅಳೆ
ಯುವ ಅಳತೆಯಿಂದಲೇ ನಿಮಗೂ ಅಳೆಯು
25 ವರು; ಇನ್ನೂ ಕೂಡಿಸಿಕೊಡುವರು. ಇದ್ದವನಿಗೆ
ಕೊಡಲ್ಪಡುವದು; ಇಲ್ಲದವನ ಕಡೆಯಿಂದ ಇದ್ದ
ದ್ದೂ ತೆಗೆಯಲ್ಪಡುವದು ಎಂದು ಹೇಳಿದನು.

26 ಇನ್ನೂ ಆತನು ಅವರಿಗೆ ಹೇಳಿದ್ದು—ಒಬ್ಬನು
ಭೂಮಿಯಲ್ಲಿ ಬೀಜವನ್ನು ಹಾಕಿ ರಾತ್ರಿ ಮಲಗು
27 ತ್ತಾ ಹಗಲು ಎದ್ದಿರುತ್ತಾ ಇರಲು ಅವನಿಗೆ ತಿಳಿ
ಯದ ರೀತಿಯಲ್ಲಿ ಆ ಬೀಜವು ಹುಟ್ಟಿ ಬೆಳೆಯು
28 ವದು. ಇದರಂತೆ ದೇವರ ರಾಜ್ಯ. ಭೂಮಿಯು
ಮೊದಲು ಗರಿಯನ್ನೂ, ಆ ಮೇಲೆ ಹೊಡೆಯ
ನ್ನೂ, ತರುವಾಯ ತೆನೆಯಲ್ಲಿ ತುಂಬಾ ಕಾಳನ್ನೂ
29 ತನ್ನಷ್ಟಕ್ಕೆ ತಾನೇ ಹುಟ್ಟಿಸುತ್ತದೆ. ಆದರೆ ಫಲ
ವಾಗಿದ ಕೂಡಲೆ ಅವನು ಸುಗ್ಗಿಕಾಲ ಬಂತೆಂದು
ಕೊಯಿಸುತ್ತಾನೆ ಅಂದನು.

30 ಇನ್ನೂ ಆತನು ಹೇಳಿದ್ದು—ದೇವರ ರಾಜ್ಯವನ್ನು
ಯಾವದಕ್ಕೆ ಹೋಲಿಸೋಣ? ಯಾವ ಸಾಮ್ಯ
ದಿಂದ ಅದನ್ನು ತೋರಿಸಿಕೊಡೋಣ? ಅದು

1 ಸಾಸಿವೆ ಕಾಳಿನಂತಿರುತ್ತದೆ. ಭೂಮಿಯಲ್ಲಿ ಬಿತ್ತು
ವಾಗ ಅದು ಭೂಮಿಯಲ್ಲಿರುವ ಎಲ್ಲಾ ಬೀಜ
2 ಗಳಿಗಿಂತಲೂ ಸಣ್ಣದಾಗಿದೆ. ಬಿತ್ತಿದ ಮೇಲೆ ಅದು
ಬೆಳೆದು ಎಲ್ಲಾ ಕಾಯಿಪಲ್ಯದ ಗಿಡಗಳಿಗಿಂತ ದೊಡ್ಡ
ದಾಗಿ ದೊಡ್ಡ ದೊಡ್ಡ ಕೊಂಬೆಗಳನ್ನು ಬಿಡುವದ
ರಿಂದ ಆಕಾಶದಲ್ಲಿ ಹಾರಾಡುವ ಹಕ್ಕಿಗಳು ಅದರ
ನೆರಳಿನಲ್ಲಿ ವಾಸಮಾಡುವದಕ್ಕಾಗುತ್ತದೆ ಅಂದನು.

ಆತನು ಈ ತರದ ಅನೇಕ ಸಾಮ್ಯಗಳಿಂದ
ಜನರ ಗ್ರಹಿಕೆಗೆ ತಕ್ಕ ಹಾಗೆ ದೇವರ ವಾಕ್ಯವನ್ನು
ಹೇಳುತ್ತಿದ್ದನು. ಸಾಮ್ಯವಿಲ್ಲದೆ ಅವರಿಗೆ ಹೇಳ
ಲಿಲ್ಲ. ಆದರೆ ಪ್ರತ್ಯೇಕವಾಗಿ ಆತನು ತನ್ನ ಆಪ್ತ
ಶಿಷ್ಯರಿಗೆ ಎಲ್ಲವನ್ನು ಬಿಚ್ಚಿ ಹೇಳಿದನು.

ಯೇಸು ಸಮುದ್ರದ ಮೇಲಣ ಬಿರುಗಾಳಿಯನ್ನು ನಿಲ್ಲಿಸಿದ್ದು.
(ಮತ್ತಾ. 8. 23 — 27; ಲೂಕ 8. 22 — 25.)

35 ಆ ಹೊತ್ತು ಸಾಯಂಕಾಲವಾದಾಗ ಆತನು
ಅವರಿಗೆ—ಆಚೇದಡಕ್ಕೆ ಹೋಗೋಣ ಎಂದು ಹೇಳಿ
36 ಲು ಅವರು ಆ ಜನರ ಗುಂಪನ್ನು ಬಿಟ್ಟು ಆತನನ್ನು
ಅದೇ ದೋಣಿಯಲ್ಲಿ ಹಾಗೆಯೇ ಕರಕೊಂಡು
ಹೋದರು. ಬೇರೆ ದೋಣಿಗಳೂ ಆತನ ಸಂಗಡ
37 ಇದ್ದವು. ತರುವಾಯ ದೊಡ್ಡ ಬಿರುಗಾಳಿ ಎದ್ದು
ತೆರೆಗಳು ಆ ದೋಣಿಗೆ ಬಡಿದು ಒಳಗೆ ನುಗ್ಗಿದ್ದ
ರಿಂದ ಆ ದೋಣಿ ಆಗಲೇ ತುಂಬುವದಕ್ಕೆ ಬಂದಿ
38 ತ್ತು. ಆತನು ದೋಣಿಯ ಹಿಂಭಾಗದಲ್ಲಿ ತಲೆ
ಗಿಂಬನ್ನು ಒರಗಿ ನಿದ್ದೆಮಾಡುತ್ತಿದ್ದನು. ಅವರು
ಆತನನ್ನು ಎಬ್ಬಿಸಿ—ಗುರುವೇ, ನಾವು ಮುಳುಗಿ

ಹೋಗುವದರಲ್ಲಿ ನಿನಗೆ ಚಿಂತೆಯಿಲ್ಲವೇ ಎಂದು
39 ಕೇಳಲು ಆತನು ಎದ್ದು ಗಾಳಿಯನ್ನು ಗದರಿಸಿ
ಸಮುದ್ರಕ್ಕೆ—ಸುಮ್ಮನಿರು, ಮೊರೆಯಬೇಡ ಎಂದು
ಅಪ್ಪಣೆಕೊಟ್ಟನು. ಕೊಡುತ್ತಲೆ ಗಾಳಿ ನಿಂತು
40 ಹೋಗಿ ಎಲ್ಲಾ ಶಾಂತವಾಯಿತು. ತರುವಾಯ
ಆತನು ಅವರನ್ನು—ಯಾಕೆ ಧೈರ್ಯಗೆಡುತ್ತೀರಿ?
ಇನ್ನೂ ನಿಮಗೆ ನಂಬಿಕೆಯಿಲ್ಲವೇ ಎಂದು ಕೇಳಲು
41 ಅವರು ಬಹು ಭಯಪಟ್ಟು—ಈತನು ಯಾರಿರ
ಬಹುದು? ಗಾಳಿಯೂ ಸಮುದ್ರವೂ ಸಹ ಈತನು
ಹೇಳಿದ ಹಾಗೆ ಕೇಳುತ್ತವಲ್ಲಾ ಎಂದು ತಮ್ಮ
ತಮ್ಮೊಳಗೆ ಮಾತಾಡಿಕೊಂಡರು.

ದೆವ್ವಗಳ ದಂಡಿನಿಂದ ಹಿಡಿಯಲ್ಪಟ್ಟವನನ್ನು ಕುರಿತದ್ದು.
(ಮತ್ತಾ. 8. 28—34; ಲೂಕ 8. 26—39.)

5 ಆ ಮೇಲೆ ಅವರು ಸಮುದ್ರದ ಆಚೇದಡಕ್ಕೆ
2 ಗೆರಸೇನರ ಸೀಮೆಗೆ ಮುಟ್ಟಿದರು. ಆತನು
ದೋಣಿಯಿಂದ ಇಳಿದುಬಂದ ಕೂಡಲೆ ದೆವ್ವ
ಹಿಡಿದವನೊಬ್ಬನು ಸಮಾಧಿಯ ಗವಿಗಳೊಳಗಿಂದ
3-4 ಆತನೆದುರಿಗೆ ಬಂದನು. ಅವನಿಗೆ ಸಮಾಧಿಯ
ಗವಿಗಳೇ ವಾಸಸ್ಥಳವಾಗಿದ್ದವು. ಅವನನ್ನು ಅನೇಕ
ಸಾರಿ ಬೇಡಿಗಳಿಂದಲೂ ಸರಪಣಿಗಳಿಂದಲೂ
ಕಟ್ಟಿದ್ದರೂ ಅವನು ಸರಪಣಿಗಳನ್ನು ಕಿತ್ತು ಬೇಡಿ
ಗಳನ್ನು ಮುರಿದು ಹಾಕಿದ್ದನು; ಅವನನ್ನು ಇನ್ನು
ಯಾರೂ ಸರಪಣಿಯಿಂದಾದರೂ ಕಟ್ಟಲಾರದೆ
ಹೋದರು; ಅವನನ್ನು ಹತೋಟಿಗೆ ತರುವದಕ್ಕೆ

5 ಯಾರಿಂದಲೂ ಆಗಲಿಲ್ಲ. ಅವನು ನಿತ್ಯ ರಾತ್ರಿ
ಹಗಲು ಸಮಾಧಿಯ ಗವಿಗಳಲ್ಲಿಯೂ ಗುಡ್ಡಗಳ
ಲ್ಲಿಯೂ ಆರ್ಭಟಿಸುತ್ತಾ ಕಲ್ಲುಗಳಿಂದ ತನ್ನನ್ನು
6 ಕಡಿದುಕೊಳ್ಳುತ್ತಾ ಇದ್ದನು. ಅವನು ಯೇಸು
ವನ್ನು ದೂರದಿಂದ ಕಂಡು ಓಡಿಬಂದು ಆತನಿಗೆ
ಅಡ್ಡಬಿದ್ದು ಮಹಾಶಬ್ದದಿಂದ ಆರ್ಭಟಿಸಿ—ಯೇಸು
ವೇ, ಪರಾತ್ಪರನಾದ ದೇವರ ಮಗನೇ, ನನ್ನ
ಗೊಡವೆ ನಿನಗೇಕೆ? ದೇವರಾಣೆ, ನನ್ನನ್ನು ಕಾಡ
8 ಬೇಡ ಎಂದು ಹೇಳಿದನು. ಯಾಕಂದರೆ—ಎಲಾ
ದೆವ್ವಾ, ಇವನನ್ನು ಬಿಟ್ಟುಹೋಗು ಎಂದು ಯೇಸು
9 ಹೇಳಿದ್ದನು. ಮತ್ತು—ನಿನ್ನ ಹೆಸರೇನೆಂದು ಅವ
ನನ್ನು ಕೇಳಿದ್ದಕ್ಕೆ ಅವನು—ನನ್ನ ಹೆಸರು ದಂಡು;
ಯಾಕಂದರೆ ನಾವು ಬಹು ಮಂದಿ ಇದ್ದೇವೆ ಎಂದು

10 ಹೇಳಿ—ನಮ್ಮನ್ನು ಈ ಸೀಮೆಯಿಂದ ಹೊರಡಿಸ
ಬೇಡವೆಂದು ಆತನನ್ನು ಬಹಳವಾಗಿ ಬೇಡಿ
11 ಕೊಂಡನು. ಅಲ್ಲಿಯ ಗುಡ್ಡದಲ್ಲಿ ಹಂದಿಗಳ
12 ದೊಡ್ಡ ಹಿಂಡು ಮೇಯುತ್ತಿತ್ತು. ಆ ದೆವ್ವಗಳು—
ಆ ಹಂದಿಗಳೊಳಗೆ ಸೇರಿಕೊಳ್ಳುವದಕ್ಕೆ ನಮ್ಮನ್ನು
13 ಕಳುಹಿಸಿಕೊಡು ಎಂದು ಬೇಡಿಕೊಂಡವು. ಆತನು-
ಆಗಲಿ ಎಂದು ಅವುಗಳಿಗೆ ಅಪ್ಪಣೆಕೊಡಲು ಆ
ದೆವ್ವಗಳು ಹೊರಗೆ ಬಂದು ಹಂದಿಗಳೊಳಗೆ
ಹೊಕ್ಕವು; ಆ ಗುಂಪು ಓಡಿ ಕಡಿದಾದ ಸ್ಥಳದಿಂದ
ಸಮುದ್ರದೊಳಗೆ ಬಿದ್ದು ಅಲ್ಲಿ ಉಸುರುಕಟ್ಟಿ
ಸತ್ತಿತು. ಹೆಚ್ಚು ಕಡಿಮೆ ಎರಡು ಸಾವಿರ ಹಂದಿ
ಗಳಿದ್ದವು. ಅವುಗಳನ್ನು ಮೇಯಿಸುವವರು ಓಡಿ
ಹೋಗಿ ಆ ಊರಲ್ಲಿಯೂ ಹಳ್ಳಿಗಳಲ್ಲಿಯೂ ತಿಳಿ

ಸಲು ಜನರು ನಡೆದ ಸಂಗತಿ ಏನೆಂದು ನೋಡು
15 ವದಕ್ಕೆ ಹೊರಟು ಯೇಸುವಿದ್ದಲ್ಲಿಗೆ ಬಂದು ಆ
ದೆವ್ವಹಿಡಿದಿದ್ದವನು, ಅಂದರೆ ದೆವ್ವಗಳ ದಂಡಿನಿಂದ
ಹಿಡಿಯಲ್ಪಟ್ಟಿದ್ದವನು, ಬಟ್ಟೆಗಳನ್ನು ಹಾಕಿಕೊಂಡು
ಸ್ವಸ್ಥಬುದ್ಧಿಯಿಂದ ಕೂತಿರುವದನ್ನು ನೋಡಿ
16 ಹೆದರಿದರು. ನಡೆದ ಸಂಗತಿಯನ್ನು ನೋಡಿದ್ದ
ವರು ಆ ದೆವ್ವಹಿಡಿದಿದ್ದವನಿಗೆ ಹೀಗೆಹೀಗಾಯಿ
ತೆಂಬದನ್ನೂ ಹಂದಿಗಳ ವಿಷಯವನ್ನೂ ಅವರಿಗೆ
17 ವಿವರಿಸಲು ಅವರು ತಮ್ಮ ಸೀಮೆಯನ್ನು ಬಿಟ್ಟು
ಹೋಗಬೇಕೆಂದು ಯೇಸುವನ್ನು ಬೇಡಿಕೊಂಡರು.
18 ಆತನು ದೋಣಿಯನ್ನು ಹತ್ತುವಾಗ ಆ ದೆವ್ವ
ಹಿಡಿದಿದ್ದವನು–ನಾನು ನಿನ್ನ ಬಳಿಯಲ್ಲಿಯೇ
ಇರುತ್ತೇನೆಂದು ಆತನನ್ನು ಬೇಡತೊಡಗಿದನು.

19 ಆದರೆ ಆತನು ಅವನನ್ನು ಇರಗೊಡದೆ ಅವನಿಗೆ–
ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ
ಹೋಗಿ ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು
ನಿನಗೆ ಎಂಥೆಂಥ ಉಪಕಾರಗಳನ್ನು ಮಾಡಿದ್ದಾನೋ
20 ಅದನ್ನು ಹೇಳು ಅಂದನು. ಅವನು ಹೊರಟು
ಹೋಗಿ ಯೇಸು ತನಗೆ ಮಾಡಿದ ಉಪಕಾರ
ಗಳನ್ನು ದೆಕಪೊಲಿ ಎಂಬ ಸೀಮೆಯಲ್ಲಿ ಸಾರುವ
ದಕ್ಕೆ ಪ್ರಾರಂಭಿಸಿದನು; ಎಲ್ಲರೂ ಆಶ್ಚರ್ಯ
ಪಟ್ಟರು.

ಯೇಸು ಸತ್ತಹುಡುಗಿಯನ್ನು ಬದುಕಿಸಿದ್ದು; ಮತ್ತು ಒಬ್ಬ ಸ್ತ್ರೀಯ
ರಕ್ತಕುಸುಮರೋಗವನ್ನು ವಾಸಿಮಾಡಿದ್ದು.
(ಮತ್ತಾ. 9. 18—26; ಲೂಕ 8. 40—56.)

21 ಯೇಸು ತಿರಿಗಿ ದೋಣಿಯಲ್ಲಿ ಈಚೇದಡಕ್ಕೆ
ಬಂದಾಗ ಜನರು ಬಹು ದೊಡ್ಡ ಗುಂಪಾಗಿ ಆತನ
ಬಳಿಗೆ ಬಂದರು; ಆತನು ಸಮುದ್ರದ ದಡದಲ್ಲಿ
22 ದ್ದನು. ಆಗ ಸಭಾಮಂದಿರದ ಅಧಿಕಾರಿಗಳಲ್ಲಿ
ಒಬ್ಬನಾದ ಯಾಯಿರನೆಂಬವನು ಬಂದು ಯೇಸು
23 ವನ್ನು ಕಂಡು ಆತನ ಪಾದಗಳಿಗೆ ಬಿದ್ದು—ನನ್ನ ಚಿಕ್ಕ
ಮಗಳು ಈಗ ಸಾಯುತ್ತಾಳೆ; ಆಕೆಯು ವಾಸಿ
ಯಾಗಿ ಬದುಕಿಕೊಳ್ಳುವಂತೆ ನೀನು ಬಂದು ಆಕೆ
ಯ ಮೇಲೆ ಕೈಯಿಡಬೇಕು ಎಂದು ಆತನನ್ನು
24 ಬಹಳವಾಗಿ ಬೇಡಿಕೊಂಡನು. ಆತನು ಅವನ

ಸಂಗಡ ಹೋದನು; ಮತ್ತು ಬಹು ಜನರು ಆತ
ನನ್ನು ನೂಕಿಕೊಂಡು ಹಿಂದೆ ಹೋದರು.
25 ಆಗ ಹನ್ನೆರಡು ವರುಷದಿಂದ ರಕ್ತಕುಸುಮ
26 ರೋಗವಿದ್ದ ಒಬ್ಬ ಹೆಂಗಸು ಬಂದಳು. ಆಕೆಯು
ಅನೇಕ ವೈದ್ಯರಿಂದ ಬಹು ಕಷ್ಟವನ್ನು ಅನುಭವಿಸಿ
ಕೈಯಲ್ಲಿದ್ದದ್ದನ್ನೆಲ್ಲಾ ಕಳಕೊಂಡರೂ ರೋಗವು
ಹೆಚ್ಚುತ್ತಾ ಬಂದದ್ದೇ ಹೊರತು ಮತ್ತೇನು ಪ್ರಯೋ
27-28 ಜನವನ್ನೂ ಹೊಂದಿರಲಿಲ್ಲ. ಆ ಹೆಂಗಸು ಯೇಸು
ವಿನ ಸಮಾಚಾರವನ್ನು ಕೇಳಿ—ನಾನು ಆತನ
ಉಡುಪನ್ನು ಮುಟ್ಟಿದರೆ ಸಾಕು, ನೆಟ್ಟಗಾಗುವೆನು
29 ಎಂದು ಆಲೋಚಿಸಿ ಗುಂಫಿನಲ್ಲಿ ಹಿಂದಿನಿಂದ ಬಂದು
ಆತನ ಉಡುಪನ್ನು ಮುಟ್ಟಿದಳು. ಮುಟ್ಟಿದ
ಕೂಡಲೆ ಆಕೆಗೆ ರಕ್ತಹರಿಯುವದು ನಿಂತುಹೋದ

ದರಿಂದ ಆಕೆಯು–ನನ್ನನ್ನು ಕಾಡಿದ ರೋಗವು
ಹೋಗಿ ನನಗೆ ಗುಣವಾಯಿತು ಎಂದು ತನ್ನೊಳಗೆ
30 ತಿಳುಕೊಂಡಳು. ಆ ಕ್ಷಣವೇ ಯೇಸು ತನ್ನಿಂದ
ಶಕ್ತಿಯು ಹೊರಟಿತೆಂದು ತನ್ನಲ್ಲಿ ತಿಳುಕೊಂಡು
ಗುಂಪಿನಲ್ಲಿ ಹಿಂತಿರುಗಿ–ನನ್ನ ಉಡುಪನ್ನು ಯಾರು
31 ಮುಟ್ಟಿದರು? ಎಂದು ಕೇಳಲು ಆತನ ಶಿಷ್ಯರು
ಆತನಿಗೆ – ಜನರು ನಿನ್ನನ್ನು ನೂಕುವದನ್ನು
ಕಂಡೂ ಕಂಡು ನನ್ನನ್ನು ಯಾರು ಮುಟ್ಟಿದರೆಂದು
32 ಕೇಳುತ್ತೀಯಲ್ಲಾ ಎಂದು ಹೇಳಿದರು. ಆದರೆ
ಆತನು ಈ ಕೆಲಸ ಮಾಡಿದವಳನ್ನು ಕಾಣಬೇಕೆಂದು
33 ಸುತ್ತಲು ನೋಡುತ್ತಾ ಇರಲಾಗಿ ಆ ಹೆಂಗಸು
ತನಗಾದದ್ದನ್ನು ತಿಳುಕೊಂಡು ಅಂಜಿ ನಡುಗುತ್ತಾ
ಬಂದು ಆತನಿಗೆ ಅಡ್ಡಬಿದ್ದು ಇದ್ದ ಸಂಗತಿಯ

34 ನ್ನೆಲ್ಲಾ ಹೇಳಿದಳು. ಆತನು ಆಕೆಗೆ—ಮಗಳೇ, ನಿನ್ನ
ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು; ಸಮಾ
ಧಾನದಿಂದ ಹೋಗು; ನಿನ್ನನ್ನು ಕಾಡಿದ ರೋಗವು
ಹೋಗಿ ನಿನಗೆ ಗುಣವಾಗಲಿ ಎಂದು ಹೇಳಿದನು.
35 ಆತನು ಇನ್ನೂ ಮಾತಾಡುತ್ತಿರುವಲ್ಲಿ ಸಭಾ
ಮಂದಿರದ ಅಧಿಕಾರಿಯ ಕಡೆಯವರು ಬಂದು—
ನಿನ್ನ ಮಗಳು ತೀರಿಹೋದಳು; ಇನ್ನೇಕೆ ಗುರು
36 ವಿಗೆ ತೊಂದರೆ ಕೊಡುವದು? ಅಂದರು. ಅವರು
ಆಡಿದ ಮಾತನ್ನು ಯೇಸು ಲಕ್ಷ್ಯಮಾಡದೆ ಸಭಾ
ಮಂದಿರದ ಅಧಿಕಾರಿಗೆ — ಅಂಜಬೇಡ, ನಂಬಿಕೆ
37 ಮಾತ್ರ ಇರಲಿ ಎಂದು ಹೇಳಿದನು. ಮತ್ತು ಆತನು
ಪೇತ್ರ, ಯಾಕೋಬ, ಯಾಕೋಬನ ತಮ್ಮನಾದ
ಯೋಹಾನ ಇವರನ್ನೇ ಹೊರತು ಬೇರೆ

38 ಯಾರನ್ನೂ ತನ್ನೊಂದಿಗೆ ಬರಗೊಡಲಿಲ್ಲ. ಅವರು
ಆ ಸಭಾಮಂದಿರದ ಅಧಿಕಾರಿಯ ಮನೆಗೆ
ಬಂದಾಗ ಆತನು ಗದ್ದಲವನ್ನೂ ಕೆಲವರು
ಬಹಳವಾಗಿ ಅಳುವದನ್ನೂ ಗೋಳಾಡುವದನ್ನೂ
39 ಕಂಡನು. ಆತನು ಒಳಕ್ಕೆ ಹೋಗಿ–ನೀವು ಗದ್ದಲ
ಮಾಡುವದೂ ಅಳುವದೂ ಯಾಕೆ? ಹುಡುಗಿ
40 ಸತ್ತಿಲ್ಲ; ನಿದ್ದೆಮಾಡುತ್ತಾಳೆ ಅನ್ನಲು ಅವರು ಆತ
ನನ್ನು ಹಾಸ್ಯಮಾಡಿದರು. ಆದರೆ ಆತನು ಎಲ್ಲ
ರನ್ನು ಹೊರಕ್ಕೆ ಕಳುಹಿಸಿ ಆ ಹುಡುಗಿಯ ತಂದೆ
ತಾಯಿಗಳನ್ನೂ ತನ್ನೊಂದಿಗಿದ್ದವರನ್ನೂ ಹುಡುಗಿ
ಯಿದ್ದಲ್ಲಿಗೆ ಕರಕೊಂಡು ಹೋಗಿ ಅವಳ
41 ಕೈಹಿಡಿದು – ತಲಿಥಾಕೂಮ್ ಅಂದನು. ಈ
ಮಾತಿಗೆ–ಅಮ್ಮಣ್ಣೀ, ಏಳೆನ್ನುತ್ತೇನೆ ಎಂದರ್ಥ.

42 ಕೂಡಲೆ ಆ ಹುಡುಗಿ ಎದ್ದು ನಡೆದಾಡಿದಳು;
ಆಕೆಯು ಹನ್ನೆರಡು ವರುಷ ವಯಸ್ಸಿನವಳು.
43 ಅವರು ಬಹಳ ಆಶ್ಚರ್ಯದಿಂದ ಬೆರಗಾದರು. ಆ
ಮೇಲೆ ಆತನು ಅವರಿಗೆ – ಇದು ಯಾರಿಗೂ
ತಿಳಿಯಬಾರದೆಂದು ಬಹು ಖಂಡಿತವಾಗಿ ಹೇಳಿ ಆ
ಹುಡುಗಿಗೆ ಊಟಮಾಡಿಸಿರಿ ಅಂದನು.

ಯೇಸುವಿನ ಸ್ವಂತ ಊರಿನವರು ಆತನನ್ನು ತಾತ್ಸಾರಮಾಡಿದ್ದು.
(ಮತ್ತಾ. 13. 54—58; ಲೂಕ 4. 15—30.)

6 ಆತನು ಅಲ್ಲಿಂದ ಹೊರಟು ತನ್ನ ಊರಿಗೆ
ಬಂದನು; ಶಿಷ್ಯರು ಆತನ ಹಿಂದೆಯೇ ಬಂದರು.
2 ಸಬ್ಬತ್ ದಿನ ಬಂದಾಗ ಆತನು ಸಭಾಮಂದಿರಕ್ಕೆ
ಹೋಗಿ ಉಪದೇಶಮಾಡುವದಕ್ಕೆ ಪ್ರಾರಂಭಿ
ಸಿದನು. ಎಲ್ಲರು ಕೇಳಿ ಅತ್ಯಾಶ್ಚರ್ಯಪಟ್ಟು–

ಇವನಿಗೆ ಈ ಮಾತುಗಳು ಎಲ್ಲಿಂದ ಬಂದಿದ್ದಾವು?
ಇವನು ಪಡೆದಿರುವ ಈ ಜ್ಞಾನವೇನು? ಇವನ
ಕೈಯಿಂದ ಇಂಥ ಮಹತ್ಕಾರ್ಯಗಳಾಗುವ
3 ದೇನು? ಇವನು ಆ ಬಡಗಿಯಲ್ಲವೇ. ಇವನು
ಮರಿಯಳ ಮಗನಲ್ಲವೇ. ಯಾಕೋಬ ಯೋಸೆ
ಯೂದ ಸೀಮೋನ ಇವರ ಅಣ್ಣನಲ್ಲವೇ. ಇವನ
ತಂಗಿಯರು ಇಲ್ಲಿ ನಮ್ಮಲ್ಲಿ ಇದ್ದಾರಲ್ಲವೇ ಎಂದು
ಮಾತಾಡಿಕೊಂಡು ಆತನ ವಿಷಯವಾಗಿ ಬೇಸರ
4 ಗೊಂಡರು. ಯೇಸು ಅವರಿಗೆ–ಪ್ರವಾದಿಯು
ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು;
ಆದರೆ ಸ್ವದೇಶದಲ್ಲಿಯೂ ಸ್ವಂತ ಜನರಲ್ಲಿಯೂ
ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆ
5 ಯಿಲ್ಲ ಎಂದು ಹೇಳಿದನು. ಆತನು ಅಲ್ಲಿ ಕೆಲವು

ಮಂದಿ ರೋಗಿಗಳ ಮೇಲೆ ಕೈಯಿಟ್ಟು ಸ್ವಸ್ಥ
ಮಾಡಿದ್ದೇ ಹೊರತು ಬೇರೆ ಯಾವ ಮಹ
6 ತ್ಕಾರ್ಯವನ್ನೂ ಮಾಡುವದಕ್ಕಾಗಲಿಲ್ಲ. ಅವರು
ತನ್ನನ್ನು ನಂಬದೆಹೋದದ್ದಕ್ಕೆ ಆತನು ಆಶ್ಚರ್ಯ
ಪಟ್ಟನು.

ಯೇಸು ಹನ್ನೆರಡು ಮಂದಿ ಶಿಷ್ಯರನ್ನು ಸುವಾರ್ತೆಸಾರುವದಕ್ಕೆ ಕಳುಹಿಸಿದ್ದು.
(ಮತ್ತಾ. 9. 35—10. 14; ಲೂಕ 9. 1—6.)

7 ಆತನು ಹಳ್ಳಿಪಳ್ಳಿಗಳನ್ನು ಸುತ್ತಿಕೊಂಡು ಉಪ
ದೇಶಮಾಡುತ್ತಾ ಬಂದನು. ಮತ್ತು ಹನ್ನೆರಡು
ಮಂದಿ ಶಿಷ್ಯರನ್ನು ಹತ್ತಿರಕ್ಕೆ ಕರೆದು ಅವರನ್ನು
ಇಬ್ಬರಿಬ್ಬರಾಗಿ ಕಳುಹಿಸಲಾರಂಭಿಸಿದನು. ಕಳು
ಹಿಸುವಾಗ ಅವರಿಗೆ ದೆವ್ವಗಳ ಮೇಲೆ ಅಧಿಕಾರ
8 ಕೊಟ್ಟು—ಕೋಲು ಹೊರತು ದಾರಿಗೆ ಏನೂ

ತಕ್ಕೊಂಡು ಹೋಗಬೇಡಿರಿ; ಬುತ್ತಿ, ಹಸಿಬೆ, ಹಮ್ಮಿ
9 ಣಿಯಲ್ಲಿ ದುಡ್ಡು ಬೇಡ. ಕೆರಗಳನ್ನು ಮೆಟ್ಟಿ
ಕೊಳ್ಳಬಹುದು. ಎರಡು ಅಂಗಿಗಳನ್ನು ತೊಟ್ಟು
10 ಕೊಳ್ಳಬೇಡಿರಿ ಎಂದು ಅಪ್ಪಣೆಕೊಟ್ಟನು. ಇದಲ್ಲದೆ
ಆತನು ಅವರಿಗೆ—ನೀವು ಎಲ್ಲಿಯಾದರೂ ಒಂದು
ಮನೆಯಲ್ಲಿ ಇಳುಕೊಂಡಾಗ ಆ ಸ್ಥಳದಿಂದ ಹೊರ
11 ಡುವ ತನಕ ಅಲ್ಲೇ ಇರಿ. ಮತ್ತು ಯಾವ ಸ್ಥಳ
ದವರಾದರೂ ನಿಮ್ಮನ್ನು ಸೇರಿಸಿಕೊಳ್ಳದೆಯೂ
ನೀವು ಹೇಳುವದನ್ನು ಕೇಳದೆಯೂ ಹೋದರೆ ಆ
ಸ್ಥಳದಿಂದ ಹೊರಟುಹೋಗುವಾಗ ನಿಮ್ಮ ಕಾಲಿಗೆ
ಹತ್ತಿದ ಧೂಳನ್ನು ಝಾಡಿಸಿಬಿಡಿರಿ; ಅದು ಅವರಿಗೆ
12 ಸಾಕ್ಷಿಯಾಗಿರಲಿ ಎಂದು ಹೇಳಿದನು. ಅವರು
ಹೊರಟು ಹೋಗಿ ಜನರಿಗೆ-ದೇವರ ಕಡೆಗೆ

13 ತಿರುಗಿಕೊಳ್ಳಬೇಕೆಂದು ಸಾರಿ ಅನೇಕ ದೆವ್ವ
ಗಳನ್ನು ಬಿಡಿಸಿ ಅನೇಕ ರೋಗಿಗಳಿಗೆ ಎಣ್ಣೆಹಚ್ಚಿ
ವಾಸಿಮಾಡಿದರು.

ಅರಸನು ಸ್ನಾನಿಕನಾದ ಯೋಹಾನನನ್ನು ಕೊಲ್ಲಿಸಿದ ಮೇಲೆ ಯೇಸುವಿನ
ಸುದ್ದಿಯನ್ನು ಕೇಳಿ ದಿಗಿಲುಬಿದ್ದದ್ದು.
(ಮತ್ತಾ. 14. 1—12; ಲೂಕ 9. 7—9; 3. 19, 20.)

14 ಮತ್ತು ಅರಸನಾದ ಹೆರೋದನು [ಯೇಸುವಿನ
ಸುದ್ದಿಯನ್ನು] ಕೇಳಿದನು. ಯಾಕಂದರೆ ಆತನ
ಹೆಸರು ಪ್ರಸಿದ್ಧವಾಯಿತು, ಮತ್ತು ಜನರು ಆತನ
ವಿಷಯದಲ್ಲಿ—ಸ್ನಾನಿಕನಾದ ಯೋಹಾನನೇ ತಿರಿಗಿ
ಬದುಕಿ ಬಂದಿದ್ದಾನೆ; ಆದದರಿಂದ ಮಹತ್ಕಾರ್ಯ
ಗಳನ್ನು ನಡಿಸುವ ಶಕ್ತಿಗಳು ಅವನಲ್ಲಿ ಅವೆ ಎಂದು
15 ಹೇಳುತ್ತಿದ್ದರು. ಕೆಲವರು—ಇವನು ಎಲೀಯ

ನೆಂತಲೂ ಕೆಲವರು—ಇವನು ಹಿಂದಿನ ಪ್ರವಾದಿ
ಗಳಂತಿರುವ ಒಬ್ಬ ಪ್ರವಾದಿಯೆಂತಲೂ ಹೇಳಿ
16 ದರು. ಆದರೆ ಹೆರೋದನು ಆತನ ಸುದ್ದಿಯನ್ನು
ಕೇಳಿ–ನಾನು ತಲೆಹೊಯಿಸಿದ ಯೋಹಾನನೇ
17 ತಿರಿಗಿ ಬದುಕಿ ಬಂದಿದ್ದಾನೆ ಅಂದನು. ಹೆರೋದ
ನು ತಾನು ಇಟ್ಟುಕೊಂಡಿದ್ದ ಹೆರೋದ್ಯಳ ನಿಮಿತ್ತ
ಯೋಹಾನನನ್ನು ಹಿಡಿತರಿಸಿ ಸೆರೆಯಲ್ಲಿ ಕಟ್ಟಿಹಾಕಿ
ಸಿದ್ದನು. ಆ ಹೆರೋದ್ಯಳು ಹೆರೋದನ ಅಣ್ಣ
18 ನಾದ ಫಿಲಿಪ್ಪನ ಹೆಂಡತಿ. ಯೋಹಾನನು ಹೆರೋದ
ನಿಗೆ–ನಿನ್ನ ಅಣ್ಣನ ಹೆಂಡತಿಯನ್ನು ಇಟ್ಟುಕೊಂಡಿ
ರುವದು ಧರ್ಮವಲ್ಲವೆಂದು ಹೇಳುತ್ತಿದ್ದನು.
19 ಇದಕ್ಕೆ ಹೆರೋದ್ಯಳು ಅವನ ಮೇಲೆ ದ್ವೇಷವಿಟ್ಟು
ಕೊಂಡು ಅವನನ್ನು ಕೊಲ್ಲಿಸಬೇಕೆಂದಿದ್ದರೂ

20 ಆಗದೆಹೋಯಿತು. ಹೆರೋದನು ಯೋಹಾನ
ನನ್ನು ನೀತಿವಂತನೆಂದೂ ದೇವಭಕ್ತನೆಂದೂ ತಿಳಿದು
ಅಂಜಿಕೊಂಡು ಅವನಿಗೆ ಯಾವ ಅಪಾಯವೂ
ಬಾರದಂತೆ ಇಟ್ಟಿದ್ದನು. ಇದಲ್ಲದೆ ಯೋಹಾನನು
ಹೇಳಿದ್ದನ್ನು ಅವನು ಕೇಳಿದಾಗ ಮನಸ್ಸಿನಲ್ಲಿ ಬಹು
ಗಲಿಬಿಲಿ ಹುಟ್ಟಿದರೂ ಅವನ ಮಾತನ್ನು ಸಂತೋಷ
21 ದಿಂದ ಕೇಳುತ್ತಿದ್ದನು. ಹೀಗಿರಲಾಗಿ ಅವಳಿಗೆ
ಅನುಕೂಲವಾದ ದಿವಸ ಬಂತು; ಹೇಗಂದರೆ
ಹೆರೋದನು ತಾನು ಹುಟ್ಟಿದ ದಿವಸದಲ್ಲಿ ಪ್ರಭು
ಗಳಿಗೂ ಸಹಸ್ರಾಧಿಪತಿಗಳಿಗೂ ಗಲಿಲಾಯ
ಸೀಮೆಯ ಮುಖ್ಯಸ್ಥರಿಗೂ ಔತಣವನ್ನು ಮಾಡಿಸಿ
22 ದಾಗ ಹೆರೋದ್ಯಳ ಮಗಳು ಒಳಕ್ಕೆ ಬಂದು
ನಾಟ್ಯವಾಡಿ ಹೆರೋದನನ್ನೂ ಅವನ ಸಂಗಡ

ಪಙ್ಕ್ತಿಯಲ್ಲಿ ಊಟಕ್ಕೆ ಕೂತಿದ್ದವರನ್ನೂ ಮೆಚ್ಚಿಸಿ
ದಳು. ಅರಸನು ಆ ಹುಡುಗಿಗೆ–ಬೇಕಾದದ್ದನ್ನು
23 ಕೇಳಿಕೋ, ಕೊಡುತ್ತೇನೆ. ನೀನು ನನ್ನನ್ನು ಏನು
ಕೇಳಿಕೊಂಡರೂ ಸರಿ, ನನ್ನ ರಾಜ್ಯದಲ್ಲಿ ಅರ್ಧ
ರಾಜ್ಯವನ್ನು ಕೇಳಿದರೂ, ನಿನಗೆ ಕೊಡುತ್ತೇನೆ
24 ಎಂದು ಆಣೆಯಿಟ್ಟುಕೊಂಡು ಹೇಳಿದನು. ಆಗ
ಅವಳು ಹೊರಕ್ಕೆ ಹೋಗಿ–ನಾನು ಏನು ಕೇಳಿ
ಕೊಳ್ಳಲಿ? ಎಂದು ತನ್ನ ತಾಯಿಯನ್ನು ಕೇಳ
ಲಾಗಿ ಅವಳು–ಸ್ನಾನಿಕನಾದ ಯೋಹಾನನ ತಲೆ
25 ಯನ್ನು ಕೇಳಿಕೋ ಅಂದಳು. ಕೂಡಲೆ ಅವಳು
ಅರಸನ ಬಳಿಗೆ ಅವಸರದಿಂದ ಬಂದು–ಈ ಕ್ಷಣ
ದಲ್ಲೇ ಸ್ನಾನಿಕನಾದ ಯೋಹಾನನ ತಲೆಯನ್ನು
ಪರಾತಿನಲ್ಲಿ ನನಗೆ ತರಿಸಿಕೊಡಬೇಕೆಂದೇ ನನ್ನ

26 ಕೋರಿಕೆ ಎಂದು ಅರಿಕೆಮಾಡಿಕೊಂಡಳು. ಅದಕ್ಕೆ
ಅರಸನು ಬಹು ದುಃಖಪಟ್ಟರೂ ತಾನು ಇಟ್ಟು
ಕೊಂಡ ಆಣೆಗಳ ನಿಮಿತ್ತವಾಗಿಯೂ ತನ್ನ
ಪಙ್ತಿಯಲ್ಲಿ ಕೂತಿದ್ದವರ ನಿಮಿತ್ತವಾಗಿಯೂ
ಅವಳನ್ನು ಅಸಡ್ಡೆಮಾಡುವದಕ್ಕೆ ಮನಸ್ಸಿಲ್ಲದೆ
27 ಕೂಡಲೆ ತನ್ನ ಮೈಗಾವಲಿನ ಸಿಪಾಯಿಗಳಲ್ಲಿ ಒಬ್ಬ
ನಿಗೆ—ನೀನು ಹೋಗಿ ಯೋಹಾನನ ತಲೆಯನ್ನು
ತಂದುಕೊಡು ಎಂದು ಅಪ್ಪಣೆಕೊಟ್ಟು ಕಳುಹಿಸಿ
28 ದನು; ಅವನು ಹೋಗಿ ಸೆರೆಮನೆಯಲ್ಲಿ ಅವನ
ತಲೆಯನ್ನು ಹೊಯಿದು ಪರಾತಿನಲ್ಲಿ ತಂದು ಆ
ಹುಡುಗಿಗೆ ಕೊಟ್ಟನು. ಆ ಹುಡುಗಿ ಅದನ್ನು
29 ತನ್ನ ತಾಯಿಗೆ ಕೊಟ್ಟಳು. ಯೋಹಾನನ ಶಿಷ್ಯ
ರು ಈ ಸಂಗತಿಗಳನ್ನು ಕೇಳಿದಾಗ ಅವರು ಬಂದು

ಅವನ ಶವವನ್ನು ಹೊತ್ತುಕೊಂಡು ಹೋಗಿ ಸಮಾಧಿಯಲ್ಲಿ ಇಟ್ಟರು.

ಯೇಸು ಐದುಸಾವಿರ ಜನರಿಗೆ ಊಟಮಾಡಿಸಿದ್ದು; ಸಮುದ್ರದ ಮೇಲೆ ನಡೆದದ್ದು; ರೋಗಿಗಳನ್ನು ಸ್ವಸ್ಥಮಾಡಿದ್ದು.

(ಮತ್ತಾ. 14. 13—36; ಲೂಕ 9. 10—17; ಯೋಹಾ. 6. 1—21.)

30 ಇತ್ತಲಾಗಿ ಅಪೊಸ್ತಲರು ಆತನ ಬಳಿಗೆ ಕೂಡಿ
ಬಂದು ತಾವು ಮಾಡಿದ್ದನ್ನೂ ಉಪದೇಶಿಸಿದ್ದನ್ನೂ
31 ಎಲ್ಲಾ ಆತನಿಗೆ ತಿಳಿಸಲು ಆತನು ಅವರಿಗೆ- ನೀವು
ಮಾತ್ರ ವಿಂಗಡವಾಗಿ ಅಡವಿಗೆ ಬಂದು ಸ್ವಲ್ಪ ದಣಿ
ವಾರಿಸಿಕೊಳ್ಳಿರಿ ಎಂದು ಹೇಳಿದನು. ಯಾಕಂದರೆ
ಬಹಳ ಮಂದಿ ಬರುತ್ತಾ ಹೋಗುತ್ತಾ ಇದ್ದದರಿಂದ
ಅವರಿಗೆ ಊಟಮಾಡುವದಕ್ಕೂ ಅವಕಾಶ ಸಿಕ್ಕ
32 ಲಿಲ್ಲ. ಆಗ ಅವರು ದೋಣಿಯಲ್ಲಿ ಹೊರಟು

33 ಮಿಂಗಡವಾಗಿ ಅಡವಿಗೆ ಹೋದರು. ಅವರು
ಹೋಗುವದನ್ನು ಬಹು ಜನರು ಕಂಡು ಅವರ
ಗುರುತನ್ನು ಹಿಡಿದು ಎಲ್ಲಾ ಊರುಗಳಿಂದ ಕಾಲು
ನಡಿಗೆಯಾಗಿ ಓಡಿ ಅವರಿಗಿಂತ ಮುಂಚೆ ಅಲ್ಲಿ ಸೇರಿ
34 ದರು. ಆತನು ಹೊರಗೆ ಬಂದು ಬಹು ಜನರ
ಗುಂಪನ್ನು ಕಂಡು ಇವರು ಕುರುಬನಿಲ್ಲದ ಕುರಿ
ಗಳ ಹಾಗಿದ್ದಾರಲ್ಲಾ ಎಂದು ಕನಿಕರಪಟ್ಟು ಅವರಿಗೆ
35 ಬಹಳ ಉಪದೇಶಮಾಡುತ್ತಿದ್ದನು. ಅಷ್ಟರಲ್ಲಿ
ಬಹಳ ಹೊತ್ತಾದ್ದರಿಂದ ಆತನ ಶಿಷ್ಯರು ಆತನ
36 ಬಳಿಗೆ ಬಂದು—ಇದು ಅಡವಿ, ಈಗ ಹೊತ್ತು
ಬಹಳವಾಯಿತು; ಈ ಜನರಿಗೆ ಅಪ್ಪಣೆಕೊಡು;
ಇವರು ಸುತ್ತಲಿರುವ ಹಳ್ಳಿಪಳ್ಳಿಗಳಿಗೆ ಹೋಗಿ
ತಮ್ಮ ಊಟಕ್ಕೆ ಏನಾದರೂ ಕೊಂಡುಕೊಳ್ಳಲಿ

37 ಅಂದದ್ದಕ್ಕೆ ಯೇಸು—ನೀವೇ ಅವರಿಗೆ ಊಟಕ್ಕೆ
ಕೊಡಿರಿ ಎಂದು ಉತ್ತರಕೊಟ್ಟನು. ಅದಕ್ಕವರು—
ನಾವು ಹೋಗಿ ಇನ್ನೂರು ಹಣಕ್ಕೆ ರೊಟ್ಟಿಯನ್ನು
ಕೊಂಡುಕೊಂಡು ಅವರಿಗೆ ಊಟಕ್ಕೆ ಕೊಡ
38 ಬೇಕೋ? ಎಂದು ಕೇಳಲು ಆತನು—ನಿಮ್ಮಲ್ಲಿ ಎಷ್ಟು
ರೊಟ್ಟಿಗಳಿವೆ? ಹೋಗಿ ನೋಡಿಕೊಂಡು ಬನ್ನಿ
ಅಂದನು. ಅವರು ತಿಳುಕೊಂಡು ಬಂದು—ಐದು
39 ರೊಟ್ಟಿ ಎರಡು ಮಿನು ಅಂದರು. ಆಗ ಆತನು
ಅವರಿಗೆ—ಎಲ್ಲರೂ ಹಸುರುಹುಲ್ಲಿನ ಮೇಲೆ ಪಙ್ತಿ
ಪಙ್ತಿಯಾಗಿ ಕೂತುಕೊಳ್ಳಲಿ ಎಂದು ಅಪ್ಪಣೆ
40 ಕೊಟ್ಟಾಗ ಜನರು ಪಙ್ತಿಗೆ ನೂರರಂತೆ ಐವತ್ತ
41 ರಂತೆ ಸಾಲುಸಾಲಾಗಿ ಕೂತುಕೊಂಡರು. ಆ
ಮೇಲೆ ಆತನು ಆ ಐದು ರೊಟ್ಟಿ ಎರಡು ಮಿನು

ಗಳನ್ನು ತೆಗೆದುಕೊಂಡು ಆಕಾಶದ ಕಡೆಗೆ ನೋಡಿ
ದೇವರ ಸ್ತೋತ್ರಮಾಡಿ ಆ ರೊಟ್ಟಿಗಳನ್ನು
ಮುರಿದು—ನೀವು ಜನರಿಗೆ ಹಂಚಿರಿ ಎಂದು ಶಿಷ್ಯರ
ಕೈಗೆ ಕೊಟ್ಟು ಆ ಎರಡು ಮೀನುಗಳನ್ನೂ ಎಲ್ಲ
42 ರಿಗೆ ಹಂಚಿಸಿದನು. ಅವರೆಲ್ಲರೂ ಊಟಮಾಡಿ
43 ತೃಪ್ತರಾದರು. ರೊಟ್ಟಿತುಂಡುಗಳನ್ನೂ ಮೀನಿನ
ತುಂಡುಗಳನ್ನೂ ಕೂಡಿಸಲಾಗಿ ಹನ್ನೆರಡು ಪುಟ್ಟಿ
44 ತುಂಬಿತು. ಊಟಮಾಡಿದವರು ಐದುಸಾವಿರ
ಮಂದಿ ಗಂಡಸರು.

45 ಇದಾದ ಕೂಡಲೆ ಆತನು ತನ್ನ ಶಿಷ್ಯರಿಗೆ—
ನಾನು ಈ ಜನರ ಗುಂಪನ್ನು ಕಳುಹಿಸಿಬಿಡುವಷ್ಟ
ರೊಳಗೆ ನೀವು ದೋಣಿಯನ್ನು ಹತ್ತಿ ಮುಂದಾಗಿ
ಆಚೇದಡಕ್ಕೆ ಬೇತ್ಸಾಯಿದಕ್ಕೆ ಹೋಗಿರಿ ಎಂದು

46 ಬಲವಂತಮಾಡಿದನು. ಆತನು ಜನರಿಗೆ ಅಪ್ಪಣೆ
ಕೊಟ್ಟನಂತರ ಪ್ರಾರ್ಥನೆ ಮಾಡುವದಕ್ಕಾಗಿ
47 ಬೆಟ್ಟಕ್ಕೆ ಹೋದನು. ಹೊತ್ತು ಮುಳುಗಿದ ಮೇಲೆ
ದೋಣಿಯು ಸಮುದ್ರದ ನಡುವೆ ಇತ್ತು; ಯೇಸು
48 ಒಬ್ಬನೇ ದಡದಲ್ಲಿದ್ದನು. ಎದುರುಗಾಳಿ ಬೀಸುತ್ತಿ
ದ್ದದರಿಂದ ಶಿಷ್ಯರು ಹುಟ್ಟು ಹಾಕಿ ಹಾಕಿ ಒದ್ದಾಡು
ವದನ್ನು ಆತನು ಕಂಡು ಹೆಚ್ಚುಕಡಿಮೆ ರಾತ್ರಿಯ
ನಾಲ್ಕನೆಯ ಜಾವದಲ್ಲಿ ಸಮುದ್ರದ ಮೇಲೆ ನಡೆದು
ಅವರ ಕಡೆಗೆ ಬಂದು ಅವರನ್ನು ದಾಟಿ ಮುಂದಕ್ಕೆ
49 ಹೋಗಬೇಕೆಂದಿದ್ದನು. ಸಮುದ್ರದ ಮೇಲೆ ನಡೆ
ಯುವ ಆತನನ್ನು ಅವರು ಕಂಡು ಭೂತವೆಂದು
ಭಾವಿಸಿ ಅಬ್ಬರಿಸಿ ಕೂಗಿದರು; ಅವರೆಲ್ಲರೂ ಆತ
50 ನನ್ನು ನೋಡಿ ತತ್ತರಿಸಿದರು. ಆತನು ಕೂಡಲೆ

ಅವರನ್ನು ಮಾತಾಡಿಸಿ ಅವರಿಗೆ—ಧೈರ್ಯವಾಗಿರಿ;
51 ನಾನು; ಅಂಜಬೇಡಿರಿ ಎಂದು ಹೇಳಿದನು. ತರು
ವಾಯ ಆತನು ದೋಣಿಯನ್ನು ಹತ್ತಿ ಅವರ
ಬಳಿಗೆ ಬಂದ ಮೇಲೆ ಗಾಳಿ ನಿಂತುಹೋಯಿತು.
ಆಗ ಅವರು ತಮ್ಮೊಳಗೆ ಬಹಳವಾಗಿ ಬೆರಗಾದರು.
52 ಯಾಕಂದರೆ ಅವರು ರೊಟ್ಟಿಯ ವಿಷಯವಾದ
ಮಹತ್ಕಾರ್ಯವನ್ನು ಗ್ರಹಿಸಲಿಲ್ಲ; ಅವರ ಮನಸ್ಸು
ಕಲ್ಲಾಗಿತ್ತು.

53 ಅವರು ಸಮುದ್ರವನ್ನು ದಾಟಿ ಗೆನೆಜರೇತ್
ದೇಶದ ದಡಕ್ಕೆ ಮುಟ್ಟಿ ದೋಣಿಯನ್ನು ಕಟ್ಟಿದರು.
54 ಅವರು ದೋಣಿಯಿಂದ ಇಳಿದ ಕೂಡಲೆ ಜನರು
55 ಆತನ ಗುರುತನ್ನು ಹಿಡಿದು ಆ ಸೀಮೆಯಲ್ಲೆಲ್ಲಾ
ಓಡಾಡುತ್ತಾ ಮೈಯಲ್ಲಿ ನೆಟ್ಟಗಿಲ್ಲದವರನ್ನು

ದೋಲಿಯ ಮೇಲೆ ಹಾಕಿಕೊಂಡು ಆತನು ಎಲ್ಲೆಲ್ಲಿ
ಇದ್ದಾನೆಂದು ಕೇಳಿದರೋ ಅಲ್ಲಲ್ಲಿಗೆ ತೆಗೆದು
56 ಕೊಂಡು ಹೋದರು. ಆತನು ಯಾವ ಗ್ರಾಮ
ಗಳಿಗೂ ಯಾವ ಊರು ಹಳ್ಳಿಗಳಿಗೂ ಹೋದ
ನೋ ಅಲ್ಲಿಯವರು ರೋಗಿಗಳನ್ನು ಪೇಟೆಗಳಲ್ಲಿ
ಇಟ್ಟು—ನಿನ್ನ ಉಡುಪಿನ ಗೊಂಡೆಯನ್ನಾದರೂ
ಮುಟ್ಟಗೊಡಿಸಬೇಕೆಂದು ಆತನನ್ನು ಬೇಡಿಕೊಂಡ
ರು; ಆತನನ್ನು ಮುಟ್ಟಿದವರೆಲ್ಲರೂ ಸ್ವಸ್ಥರಾದರು.

ಊಟದಿಂದ ಮನುಷ್ಯರು ಕೆಡುವದಿಲ್ಲವೆಂದು ಯೇಸು ಬೋಧಿಸಿದ್ದು.
(ಮತ್ತಾ. 15. 1—20.)

7 ತರುವಾಯ ಯೆರೂಸಲೇಮಿನಿಂದ ಬಂದಿದ್ದ
ಫರಿಸಾಯರೂ ಶಾಸ್ತ್ರಿಗಳಲ್ಲಿ ಕೆಲವರೂ ಆತನ
3 ಬಳಿಗೆ ಕೂಡಿ ಬಂದರು. ಫರಿಸಾಯರೂ [illegible] ಯೆಹೂದ್ಯ

ದ್ಯರೆಲ್ಲರೂ ಹಿರಿಯರಿಂದ ಬಂದ ಸಂಪ್ರದಾಯ
ವನ್ನು ಹಿಡಿದು ತಮ್ಮ ಕ್ಯೆಗಳನ್ನು ಚನ್ನಾಗಿ ತೊಳ
4 ಕೊಳ್ಳದೆ ಆಹಾರ ತೆಗೆದುಕೊಳ್ಳುವದಿಲ್ಲ; ಮತ್ತು
ಪೇಟೆಗೆ ಹೋಗಿ ಬಂದರೆ ನೀರನ್ನು ಪ್ರೋಕ್ಷಿಸಿ
ಕೊಳ್ಳದೆ ಆಹಾರ ತೆಗೆದುಕೊಳ್ಳುವಧಿಲ್ಲ; ಇದಲ್ಲದೆ
ಅವರಲ್ಲಿ ತಂಬಿಗೆ ಬಟ್ಟಲು ತಪ್ಪಲೆಗಳನ್ನು ಬೆಳಗಿ
ತೊಳೆಯುವದೇ ಮೊದಲಾದ ಅನೇಕಾಚಾರ
2 ಗಳನ್ನು ನಡಿಸುವ ನೇಮುಕವುಂಟು. ಆತನ ಶಿಷ್ಯ
ರಲ್ಲಿ ಕೆಲವರು ಮ್ಯೆಲಿಗೆಯ ಕ್ಯೆಯಿಂದ, ಅಂದರೆ
ಕ್ಯೆತೊಳಕೊಳ್ಳದೆ ಆಹಾರ ತೆಗೆದುಕೊಳ್ಳುವದನ್ನು
ಆ ಫರಿಸಾಯರೂ ಶಾಸ್ತ್ರಿಗಳೂ ಕಂಡು ಆತನನ್ನು—
5 ನಿನ್ನ ಶಿಷ್ಯರು ಹಿರಿಯರಿಂದ ಬಂದ ಸಂಪ್ರದಾಯ
ದಂತೆ ಯಾಕೆ ನಡೆದುಕೊಳ್ಳುವದಿಲ್ಲ? ಮ್ಯೆಲಿಗೆ

ಯ ಕೈಯಿಂದ ಯಾಕೆ ಆಹಾರ ತೆಗೆದುಕೊಳ್ಳು
6 ತ್ತಾರೆ ಎಂದು ಕೇಳಿದರು. ಅದಕ್ಕೆ ಆತನು—ಕಪಟಿ
ಗಳಾದ ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತ
ವಾಗಿ ಪ್ರವಾದಿಸಿದ್ದಾನೆ; ಅವನು ಬರೆದದ್ದೇ
ನಂದರೆ—

ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿ
ಸುತ್ತಾರೆ,
ಆದರೆ ಅವರ ಮನಸ್ಸು ನನಗೆ ದೂರವಾಗಿದೆ.
7 ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು
ಬೋಧಿಸುವದರಿಂದ ನನಗೆ ಭಕ್ತಿತೋರಿ
ಸುವದು ವ್ಯರ್ಥ ಎಂಬದೇ.

8 ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು
ಕಲ್ಪಿಸಿದ ಸಂಪ್ರದಾಯವನ್ನು ಹಿಡಿದಿದ್ದೀರಿ ಎಂದು

9 ಹೇಳಿದನು. ಆತನು ಇನ್ನೂ ಅವರಿಗೆ–ನೀವು
ನಿಮ್ಮ ಸಂಪ್ರದಾಯವನ್ನು ಹಿಡಿದು ನಡಿಸುವದ
ಕ್ಕಾಗಿ ದೇವರ ಆಜ್ಞೆಯನ್ನು ವ್ಯರ್ಥಮಾಡುತ್ತೀರಿ;
10 ಬಹು ಚೆನ್ನಾಗಿದೆಯಲ್ಲವೇ. ತಂದೆತಾಯಿಗಳನ್ನು
ಸನ್ಮಾನಿಸಬೇಕೆಂತಲೂ ತಂದೆಯನ್ನಾಗಲಿ ತಾಯಿ
ಯನ್ನಾಗಲಿ ದೂಷಿಸುವವನಿಗೆ ಮರಣದಂಡನೆ
ಆಗಬೇಕೆಂತಲೂ ಮೋಶೆಯು ಹೇಳಿದ್ದಾನೆ;
11 ನೀವೋ ಒಬ್ಬನು ತನ್ನ ತಂದೆಯನ್ನಾಗಲಿ ತಾಯಿ
ಯನ್ನಾಗಲಿ ನೋಡಿ–ನಾನು ನಿನ್ನ ಸಂರಕ್ಷಣೆ
ಗಾಗಿ ಕೊಡತಕ್ಕದ್ದನ್ನು ಕೊರ್ಬಾನ್ ಮಾಡಿದ್ದೇನೆ
(ಅಂದರೆ ದೇವರಿಗಾಗಿ ಇಟ್ಟಿದ್ದೇನೆ) ಎಂದು ಹೇಳು
12 ವದಾದರೆ ಅವನು ತನ್ನ ತಂದೆಗಾಗಲಿ ತಾಯಿ
ಗಾಗಲಿ ಇನ್ನೇನೂ ಮಾಡಬಾರದೆಂದು ಹೇಳು

13 ತ್ತೀರಿ. ಹೀಗೆ ನೀವು ಕಲಿಸುತ್ತಾ ಬಂದಿರುವ
ಸಂಪ್ರದಾಯದಿಂದ ದೇವರ ವಾಕ್ಯವನ್ನು ನಿರರ್ಥಕ
ಮಾಡುತ್ತೀರಿ, ಮತ್ತು ಇಂಥ ಕಾರ್ಯಗಳನ್ನು
ಇನ್ನೂ ಎಷ್ಟೋ ಮಾಡುತ್ತೀರಿ ಎಂದು ಹೇಳಿದನು.
14 ಆ ಮೇಲೆ ಯೇಸು ಜನರ ಗುಂಪನ್ನು ತಿರಿಗಿ
ಹತ್ತರಕ್ಕೆ ಕರೆದು ಅವರಿಗೆ– ಎಲ್ಲರೂ ಕಿವಿ
ಗೊಟ್ಟು ನನ್ನ ಮಾತನ್ನು ಕೇಳಿರಿ, ತಿಳುಕೊಳ್ಳಿರಿ.
15 ಹೊರಗಿನಿಂದ ಮನುಷ್ಯನೊಳಕ್ಕೆ ಹೋಗಿ ಅವ
ನನ್ನು ಹೊಲೆಮಾಡತಕ್ಕಂಥದು ಒಂದೂ ಇಲ್ಲ;
ಆದರೆ ಮನುಷ್ಯನೊಳಗಿಂದ ಹೊರಡುವವುಗಳೇ
ಮನುಷ್ಯನನ್ನು ಹೊಲೆಮಾಡುವಂಥವುಗಳಾಗಿವೆ
17 ಎಂದು ಹೇಳಿದನು. ತರುವಾಯ ಆತನು ಜನ
ರನ್ನು ಬಿಟ್ಟು ಮನೆಯೊಳಕ್ಕೆ ಹೋದಾಗ ಆತನ

ಶಿಷ್ಯರು ಆ ಸಾಮ್ಯದ ಅರ್ಥವೇನೆಂದು ಆತನನ್ನು
18 ಕೇಳಲು ಆತನು ಅವರಿಗೆ–ನಿಮಗೂ ಅಷ್ಟು
ಬುದ್ಧಿ ಇಲ್ಲವೇ? ಹೊರಗಿನಿಂದ ಮನುಷ್ಯನೊಳಕ್ಕೆ
ಹೋಗುವಂಥದು ಅವನ ಹೃದಯದೊಳಕ್ಕೆ ಸೇರದೆ
19 ಹೊಟ್ಟೆಯಲ್ಲಿ ಸೇರಿ ಬಹಿರ್ದೇಶಕ್ಕೆ ಹೋಗುವದ
ರಿಂದ ಅವನನ್ನು ಹೊಲೆಮಾಡಲಾರದೆಂದು ನಿಮಗೆ
ತಿಳಿಯಲಿಲ್ಲವೋ ಎಂದು ಹೇಳಿದನು. ಹೀಗೆ ಹೇಳಿ
ದ್ದರಿಂದ ತಿನ್ನುವ ಪದಾರ್ಥಗಳೆಲ್ಲಾ ಶುದ್ಧವೆಂದು
20 ಸೂಚಿಸಿದನು. ಆತನು ಇನ್ನೂ–ಮನುಷ್ಯನೊಳ
ಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆ
21 ಮಾಡುವದು; ಒಳಗಿನಿಂದ ಅಂದರೆ ಮನುಷ್ಯರ
22 ಮನಸ್ಸಿನೊಳಗಿಂದ ಸೂಳೆಗಾರಿಕೆ ಕಳ್ಳತನ ಕೊಲೆ
ಹಾದರ ದ್ರವ್ಯಾಶೆ ಕೆಡುಕುತನ ಮೋಸ ಬಂಡತನ

ಹೊಟ್ಟೇಕಿಚ್ಚು ಬೈಗಳು ಸೊಕ್ಕು ಬುದ್ಧಿಗೇಡಿತನ
ಇವೇ ಮೊದಲಾದವುಗಳ ಕೆಟ್ಟ ಆಲೋಚನೆಗಳು
23 ಹೊರಡುತ್ತವೆ. ಈ ಕೆಟ್ಟ ವಿಷಯಗಳೆಲ್ಲಾ ಒಳಗಿ
ನಿಂದ ಹೊರಟು ಮನುಷ್ಯನನ್ನು ಹೊಲೆಮಾಡು
ತ್ತವೆ ಅಂದನು.

ಯೇಸು ಅನ್ಯಮತಸ್ಥಳ ಮಗಳನ್ನೂ ಒಬ್ಬ ಮೂಕನನ್ನೂ ಸ್ವಸ್ಥಮಾಡಿದ್ದು.
(ಮತ್ತಾ. 15. 21—28.)

24 ಅಲ್ಲಿಂದ ಯೇಸು ಎದ್ದು ಹೊರಟು ತೂರ್ ಪಟ್ಟ
ಣದ ಪ್ರಾಂತ್ಯಗಳಿಗೆ ಹೋಗಿ ಒಂದು ಮನೆಯೊ
ಳಗೆ ಇಳುಕೊಂಡು ಅದು ಯಾರಿಗೂ ಗೊತ್ತಾಗ
ಬಾರದೆಂದಿದ್ದನು; ಆದರೆ ಆತನು ಗುಪ್ತವಾಗಿರು
25 ವದಕ್ಕೆ ಆಗದೆ ಹೋಯಿತು. ಕೂಡಲೆ ಒಬ್ಬ

ಹೆಂಗಸು ಆತನ ಸುದ್ದಿಯನ್ನು ಕೇಳಿ ಬಂದು
ಆತನ ಪಾದಕ್ಕೆ ಬಿದ್ದಳು. ಆಕೆಯ ಮಗಳಿಗೆ ದೆವ್ವ
26 ಹಿಡಿದಿತ್ತು. ಆ ಹೆಂಗಸು ಅನ್ಯಮತದವಳೂ
27 ಸುರೋಫೊಯಿನಿಕ್ಯರವಳೂ ಆಗಿದ್ದಳು. ಆಕೆ
ಯು ತನ್ನ ಮಗಳ ದೆವ್ವವನ್ನು ಬಿಡಿಸಬೇಕೆಂದು
ಆತನನ್ನು ಬೇಡಿಕೊಂಡಾಗ ಆತನು ಆಕೆಗೆ—
ಮಕ್ಕಳಿಗೆ ಮೊದಲು ತೃಪ್ತಿಯಾಗಲಿ; ಮಕ್ಕಳು
ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿ
ಮರಿಗಳಿಗೆ ಹಾಕುವದು ಸರಿಯಲ್ಲ ಎಂದು ಹೇಳಿ
28 ದನು. ಅದಕ್ಕೆ ಆಕೆಯು—ಸ್ವಾಮೀ, ಆ ಮಾತು
ನಿಜವೇ; ಮೇಜಿನ ಕೆಳಗಿರುವ ನಾಯಿಮರಿ
ಗಳಂತೂ ಮಕ್ಕಳ ಕೈಯಿಂದ ಬೀಳುವ ರೊಟ್ಟೀ
ತುಂಡುಗಳನ್ನು ತಿನ್ನುತ್ತವಲ್ಲಾ ಎಂದು ಉತ್ತರ

29 ಕೊಡಲು ಆತನು–ಈ ಮಾತನ್ನು ಹೇಳಿದ್ದರಿಂದ
ದೆವ್ವವು ನಿನ್ನ ಮಗಳನ್ನು ಬಿಟ್ಟುಬಿಟ್ಟಿದೆ, ಹೋಗು
30 ಅಂದನು. ಆಕೆಯು ತನ್ನ ಮನೆಗೆ ಹೋಗಿ ನೋಡ
ಲಾಗಿ ಆ ಹುಡುಗಿ ಹಾಸಿಗೆಯ ಮೇಲೆ ಮಲಗಿದಳು;
ದೆವ್ವ ಅವಳನ್ನು ಬಿಟ್ಟುಹೋಗಿತ್ತು.
31 ಅನಂತರ ಆತನು ತೂರ್ ಪಟ್ಟಣದ ಪ್ರಾಂತ್ಯ
ಗಳನ್ನು ಬಿಟ್ಟು ಸೀದೋನ್ ಪಟ್ಟಣದ ಮಾರ್ಗ
ವಾಗಿ ದೆಕಪೊಲಿಯ ಪ್ರಾಂತ್ಯಗಳನ್ನು ಹಾದು
32 ಗಲಿಲಾಯ ಸಮುದ್ರಕ್ಕೆ ಬಂದನು. ಆಗ ಕೆಲ
ವರು ತೊದಲು ಮಾತಾಡುವ ಒಬ್ಬ ಕಿವುಡನನ್ನು
ಆತನ ಬಳಿಗೆ ಕರತಂದು–ಇವನ ಮೇಲೆ ನಿನ್ನ ಕೈ
ಯಿಡಬೇಕು ಎಂದು ಆತನನ್ನು ಬೇಡಿಕೊಂಡರು.
33 ಆತನು ಅವನನ್ನು ಜನರ ಗುಂಪಿನಿಂದ ಒತ್ತಟ್ಟಿಗೆ

ಕರಕೊಂಡು ಹೋಗಿ ತನ್ನ ಬೆರಳುಗಳನ್ನು ಅವನ
34 ಕಿವಿಗಳಲ್ಲಿ ಇಟ್ಟು ಉಗುಳಿ ಅವನ ನಾಲಿಗೆಯನ್ನು
ಮುಟ್ಟಿ ಆಕಾಶದ ಕಡೆಗೆ ನೋಡಿ ನಿಟ್ಟುಸುರು
ಬಿಟ್ಟು ಅವನಿಗೆ—ಎಪ್ಫಥಾ ಎಂದು ಹೇಳಿದನು. ಆ
35 ಶಬ್ದಕ್ಕೆ ತೆರೆಯಲಿ ಎಂದರ್ಥ. ಹೇಳುತ್ತಲೇ ಅವನ
ಕಿವಿ ತೆರೆದವು; ಅವನ ನಾಲಿಗೆಯ ಕಟ್ಟು ಬಿಚ್ಚಿ
ಹೋಯಿತು; ಅವನು ನೆಟ್ಟಗೆ ಮಾತಾಡಿದನು.
36 ಆಗ ಆತನು—ಯಾರಿಗೂ ತಿಳಿಸಬಾರದೆಂದು ಅವ
ರಿಗೆ ಖಂಡಿತವಾಗಿ ಹೇಳಿದನು. ಆದರೆ ಎಷ್ಟು
ಖಂಡಿತವಾಗಿ ಹೇಳಿದರೂ ಅವರು ಮತ್ತಷ್ಟು
37 ಹೆಚ್ಚಾಗಿ ಅದನ್ನು ಹಬ್ಬಿಸಿದರು. ಅವರು ಅತ್ಯಂತಾ
ಶ್ಚರ್ಯಪಟ್ಟು—ಎಲ್ಲಾ ಚೆನ್ನಾಗಿ ಮಾಡಿದ್ದಾನೆ;
ಕಿವುಡರಾದರೂ ಕೇಳುವಂತೆ ಮಾಡುತ್ತಾನೆ,

ಮೂಕರಾದರೂ ಮಾತಾಡುವಂತೆ ಮಾಡುತ್ತಾನೆ
ಅಂದುಕೊಂಡರು.

ಯೇಸು ನಾಲ್ಕುಸಾವಿರ ಜನರಿಗೆ ಊಟಮಾಡಿಸಿದ್ದು.
(ಮತ್ತಾ. 15. 32 – 39.)

8 ಆ ದಿವಸಗಳಲ್ಲಿ ಜನರು ತಿರಿಗಿ ಗುಂಪು
ಕೂಡಿ ಬಂದಾಗ ಅವರಿಗೆ ಊಟಕ್ಕೆ ಏನೂ ಇಲ್ಲದೆ
2 ಇರಲು ಯೇಸು ತನ್ನ ಶಿಷ್ಯರನ್ನು ಹತ್ತಿರಕ್ಕೆ
ಕರೆದು – ಈ ಜನರನ್ನು ನೋಡಿ ಕನಿಕರಪಡು
ತ್ತೇನೆ, ಇವರು ನನ್ನ ಬಳಿಗೆ ಬಂದು ಮೂರು
ದಿನವಾಯಿತು; ಇವರಿಗೆ ಊಟಕ್ಕೆ ಏನೂ ಇಲ್ಲ;
3 ಇವರನ್ನು ಉಪವಾಸವಾಗಿ ಮನೆಗೆ ಕಳುಹಿಸಿ
ಬಿಟ್ಟರೆ ದಾರಿಯಲ್ಲಿ ಬಳಲಿ ಹೋಗುವರು; ಇವ
ರಲ್ಲಿ ಕೆಲವರು ದೂರದಿಂದ ಬಂದಿದ್ದಾರಲ್ಲಾ

4 ಎಂದು ಅವರಿಗೆ ಹೇಳಿದ್ದಕ್ಕೆ ಶಿಷ್ಯರು—ಈ ಅಡವಿ
ಯಲ್ಲಿ ಎಲ್ಲಿಂದ ರೊಟ್ಟಿಯನ್ನು ತಂದು ಈ ಜನ
ರನ್ನು ತೃಪ್ತಿಪಡಿಸುವದಕ್ಕಾದೀತು? ಅಂದರು.
5 ಆತನು—ನಿಮ್ಮಲ್ಲಿ ಎಷ್ಟು ರೊಟ್ಟಿಗಳಿವೆ ಎಂದು
ಅವರನ್ನು ಕೇಳಿದ್ದಕ್ಕೆ ಅವರು—ಏಳು ಅವೆ
6 ಅಂದರು. ಆಗ ಆತನು ಜನರ ಗುಂಪಿಗೆ—ನೆಲದ
ಮೇಲೆ ಕೂತುಕೊಳ್ಳಿರಿ ಎಂದು ಅಪ್ಪಣೆಕೊಟ್ಟು
ಆ ಏಳು ರೊಟ್ಟಿಗಳನ್ನು ತೆಗೆದುಕೊಂಡು ದೇವರ
ಸ್ತೋತ್ರಮಾಡಿ ಅವುಗಳನ್ನು ಮುರಿದು ಹಂಚು
ವದಕ್ಕಾಗಿ ತನ್ನ ಶಿಷ್ಯರ ಕೈಗೆ ಕೊಟ್ಟನು; ಅವರು
7 ಗುಂಪಿನವರಿಗೆ ಹಂಚಿಕೊಟ್ಟರು. ಇದಲ್ಲದೆ ಅವ
ರಲ್ಲಿ ಕೆಲವು ಸಣ್ಣ ಮೀನುಗಳಿದ್ದವು; ಅವುಗಳನ್ನು
ಆತನು ತೆಗೆದುಕೊಂಡು ದೇವರ ಸ್ತೋತ್ರಮಾಡಿ—

8 ಇವುಗಳನ್ನೂ ಹಂಚಿಕೊಡಿರಿ ಅಂದನು. ಅವರು
ಊಟಮಾಡಿ ತೃಪ್ತರಾದರು. ಮಿಕ್ಕ ತುಂಡು
ಗಳನ್ನು ಕೂಡಿಸಲಾಗಿ ಏಳು ಹೆಡಿಗೆ ಆದವು.
9 ಊಟಮಾಡಿದವರು ಹೆಚ್ಚುಕಡಿಮೆ ನಾಲ್ಕುಸಾವಿರ
10 ಮಂದಿ. ಬಳಿಕ ಆತನು ಅವರನ್ನು ಕಳುಹಿಸಿ
ಬಿಟ್ಟು ಕೂಡಲೆ ತನ್ನ ಶಿಷ್ಯರನ್ನು ಕರಕೊಂಡು
ದೋಣಿಯನ್ನು ಹತ್ತಿ ದಲ್ಮನೂಥ ಸೀಮೆಗೆ
ಬಂದನು.

ಯೇಸು ಯೆಹೂದ್ಯ ಮತಾಭಿಮಾನಿಗಳ ವಿಷಯವಾಗಿ ಎಚ್ಚರಿಕೆ ಕೊಟ್ಟದ್ದು.
(ಮತ್ತಾ. 16. 1—12; ಲೂಕ 11. 16; 12. 1; ಯೋಹಾ. 6. 30.)

11 ತರುವಾಯ ಫರಿಸಾಯರು ಹೊರಟುಬಂದು
ಆತನ ಕೂಡ ತರ್ಕಮಾಡುತ್ತಾ ಪರೀಕ್ಷಿಸುವದ
ಕ್ಕಾಗಿ—ನೀನು ಆಕಾಶದಲ್ಲಿ ಒಂದು ಸೂಚಕ

ಕಾರ್ಯವನ್ನು ತೋರಿಸಿಕೊಡಬೇಕೆಂದು ಕೇಳು
ತ್ತಿರಲು ಆತನು ತನ್ನ ಆತ್ಮದಲ್ಲಿ ನೊಂದು
12 ನಿಟ್ಟುಸುರುಬಿಟ್ಟು — ಈ ಸಂತತಿಯು ಸೂಚಕ
ಕಾರ್ಯವನ್ನು ಅಪೇಕ್ಷಿಸುವದು ಯಾಕೆ? ನಿಮಗೆ
ಸತ್ಯವಾಗಿ ಹೇಳುತ್ತೇನೆ, ಈ ಸಂತತಿಗೆ ಸೂಚಕ
13 ಕಾರ್ಯವು ಸಿಕ್ಕುವದೇ ಇಲ್ಲ ಎಂದು ಹೇಳಿ ಅವ
ರನ್ನು ಬಿಟ್ಟು ತಿರಿಗಿ ದೋಣಿಯನ್ನು ಹತ್ತಿ ಆಚೇ
ದಡಕ್ಕೆ ಹೋದನು.

14 ಆದರೆ ಶಿಷ್ಯರು ರೊಟ್ಟೀಬುತ್ತಿ ಕಟ್ಟಿಕೊಳ್ಳುವ
ದನ್ನು ಮರೆತರು. ದೋಣಿಯಲ್ಲಿ ಅವರಿಗೆ
ಒಂದು ರೊಟ್ಟಿ ಮಾತ್ರ ಇತ್ತು; ಬೇರೆ ಇರಲಿಲ್ಲ.
15 ಯೇಸು ಅವರಿಗೆ — ಎಚ್ಚರಿಕೆ, ಫರಿಸಾಯರ ಮತ್ತು
ಹೆರೋದನ ಹುಳಿಹಿಟ್ಟಿನ ವಿಷಯದಲ್ಲಿ ನೋಡಿ

16 ಕೊಳ್ಳಿರಿ ಎಂದು ಖಂಡಿತವಾಗಿ ಹೇಳಲು ಅವರು–
ನಮ್ಮಲ್ಲಿ ರೊಟ್ಟಿಯಿಲ್ಲವಲ್ಲಾ ಎಂದು ತಮ್ಮ
17 ತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಆತನು
ಅದನ್ನು ತಿಳಿದು– ರೊಟ್ಟಿಯಿಲ್ಲವಲ್ಲಾ ಎಂದು
ಮಾತಾಡಿಕೊಳ್ಳುವದೇಕೆ? ನೀವು ಇನ್ನೂ ಗ್ರಹಿಸ
18 ಲಿಲ್ಲವೋ? ತಿಳುವಳಿಕೆ ಬರಲಿಲ್ಲವೋ? ನಿಮ್ಮ
ಮನಸ್ಸು ಕಲ್ಲಾಗಿದೆಯೋ? ಕಣ್ಣಿದ್ದೂ ಕಾಣುವ
ದಿಲ್ಲವೋ? ಕಿವಿಯಿದ್ದೂ ಕೇಳುವದಿಲ್ಲವೋ? ನಿಮಗೆ
19 ನೆನಪಿಲ್ಲವೋ? ನಾನು ಆ ಐದು ರೊಟ್ಟಿಗಳನ್ನು
ಮುರಿದು ಐದುಸಾವಿರ ಜನರಿಗೆ ಹಂಚಿಸಿದಾಗ
ತುಂಡು ತುಂಬಿದ ಎಷ್ಟು ಪುಟ್ಟಿಗಳನ್ನು ತೆಗೆದು
ಕೊಂಡು ಹೋದಿರಿ ಎಂದು ಕೇಳಿದ್ದಕ್ಕೆ ಅವರು–
20 ಹನ್ನೆರಡು ಪುಟ್ಟಿ ಅಂದರು. ಮತ್ತು ಆ ಏಳು

ರೊಟ್ಟಿಗಳನ್ನು ನಾಲ್ಕುಸಾವಿರ ಜನರಿಗೆ ಹಂಚಿಸಿ
ದಾಗ ತುಂಡು ತುಂಬಿದ ಎಷ್ಟು ಹೆಡಿಗೆಗಳನ್ನು ತೆಗೆದು
ಕೊಂಡು ಹೋದಿರಿ ಎಂದು ಕೇಳಿದ್ದಕ್ಕೆ ಅವರು—
21 ಏಳು ಹೆಡಿಗೆ ಅಂದರು. ಆಗ ಆತನು ಅವರಿಗೆ—
ನಿಮಗೆ ಇನ್ನೂ ತಿಳುವಳಿಕೆ ಬರಲಿಲ್ಲವೇ? ಎಂದು
ಹೇಳಿದನು.

ಯೇಸು ಕುರುಡನಿಗೆ ಕಣ್ಣು ಕೊಟ್ಟದ್ದು.

22 ಮತ್ತು ಅವರು ಬೇತ್ಸಾಯಿದ ಊರಿಗೆ ಬಂದರು.
ಅಲ್ಲಿ ಜನರು ಒಬ್ಬ ಕುರುಡನನ್ನು ಯೇಸುವಿನ
ಬಳಿಗೆ ಕರಕೊಂಡುಬಂದು— ಇವನನ್ನು ಮುಟ್ಟ
23 ಬೇಕು ಎಂದು ಆತನನ್ನು ಬೇಡಿಕೊಂಡರು. ಆತನು
ಕುರುಡನ ಕೈ ಹಿಡುಕೊಂಡು ಊರ ಹೊರಕ್ಕೆ
ಕರಕೊಂಡು ಹೋಗಿ ಅವನ ಕಣ್ಣುಗಳಲಿ ಉಗುಳಿ

ಅವನ ಮೇಲೆ ಕೈಯಿಟ್ಟು – ನಿನಗೇನಾದರೂ
ಕಾಣುತ್ತದೋ? ಎಂದು ಅವನನ್ನು ಕೇಳಿದನು.
24 ಅವನು ತಲೆಯೆತ್ತಿ ನೋಡಿ–ನನಗೆ ಜನರು ಕಾಣು
ತ್ತಾರೆ; ಅವರು ಮರಗಳಂತೆ ಕಾಣಿಸಿದರೂ ತಿರು
25 ಗಾಡುತ್ತಾ ಇದ್ದಾರೆ ಅಂದನು. ಆಗ ಆತನು
ಅವನ ಕಣ್ಣುಗಳ ಮೇಲೆ ತಿರಿಗಿ ಕೈಯಿಟ್ಟನು;
ಅವನು ಕಣ್ಣುಬಿಟ್ಟು ನೋಡಲು ಅವನಿಗೆ ಗುಣ
26 ವಾಗಿತ್ತು; ಎಲ್ಲವೂ ಸ್ಪಷ್ಟವಾಗಿ ಕಾಣಿಸಿತು. ತರು
ವಾಯ ಆತನು–ನೀನು ಊರೊಳಕ್ಕೇನೂ
ಹೋಗಬೇಡ ಎಂದು ಹೇಳಿ ಅವನನ್ನು ಅವನ
ಮನೆಗೆ ಕಳುಹಿಸಿಬಿಟ್ಟನು.

ಪೇತ್ರನು ಯೇಸುವನ್ನು ಕ್ರಿಸ್ತನೆಂದು ಒಪ್ಪಿಕೊಂಡ ಮೇಲೆ ಯೇಸು ತನ್ನ ಮರಣವನ್ನೂ ತನ್ನ ಶಿಷ್ಯರಿಗೆ ಬರುವ ಕಷ್ಟಗಳನ್ನೂ ಮುಂದಾಗಿ ತಿಳಿಸಿದ್ದು.

(ಮತ್ತಾ. 16. 13—28; ಲೂಕ 9. 18—27.)

27 ಯೇಸುವೂ ಆತನ ಶಿಷ್ಯರೂ ಫಿಲಿಪ್ಪನ ಕೈಸ
ರೈಯ ಎಂಬ ಪಟ್ಟಣಕ್ಕೆ ಸೇರಿದ ಗ್ರಾಮಗಳಿಗೆ
ಹೊರಟರು. ದಾರಿಯಲ್ಲಿ ಆತನು—ಜನರು
ನನ್ನನ್ನು ಯಾರು ಅನ್ನುತ್ತಾರೆ ಎಂದು ತನ್ನ
28 ಶಿಷ್ಯರನ್ನು ಕೇಳಿದ್ದಕ್ಕೆ ಅವರು—ನಿನ್ನನ್ನು ಕೆಲವರು
ಸ್ನಾನಿಕನಾದ ಯೋಹಾನನು ಅನ್ನುತ್ತಾರೆ; ಕೆಲ
ವರು ಎಲೀಯನು ಅನ್ನುತ್ತಾರೆ; ಇನ್ನು ಕೆಲವರು
ಪ್ರವಾದಿಗಳಲ್ಲಿ ಒಬ್ಬನು ಅನ್ನುತ್ತಾರೆ ಎಂದು ಹೇಳಿ
29 ದರು. ಆತನು ಅವರನ್ನು—ಆದರೆ ನೀವು ನನ್ನನ್ನು
ಯಾರನ್ನುತ್ತೀರಿ? ಎಂದು ಕೇಳಲಾಗಿ ಪೇತ್ರನು—

ನೀನು ಬರಬೇಕಾಗಿರುವ ಕ್ರಿಸ್ತನು ಎಂದು ಉತ್ತರ
30 ಕೊಟ್ಟನು. ಅದಕ್ಕೆ ಆತನು–ನನ್ನ ವಿಷಯವಾಗಿ
ಯಾರಿಗೂ ಹೇಳಬೇಡಿರಿ ಎಂದು ಅವರಿಗೆ ಖಂಡಿತ
31 ವಾಗಿ ಹೇಳಿದನು. ಇದಲ್ಲದೆ ಆತನು–ಮನುಷ್ಯ
ಕುಮಾರನು ಬಹು ಕಷ್ಟಗಳನ್ನನುಭವಿಸಿ ಹಿರಿಯ
ರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿ
ಗಳಿಂದಲೂ ನಿರಾಕೃತನಾಗಿ ಕೊಲ್ಲಲ್ಪಟ್ಟು ಮೂರು
ದಿನದ ಮೇಲೆ ಜೀವಿತನಾಗಿ ಎದ್ದು ಬರಬೇಕಾ
ಗಿದೆ ಎಂದು ಉಪದೇಶಮಾಡುವದಕ್ಕೆ ಪ್ರಾರಂಭ
32 ಮಾಡಿದನು. ಆತನು ಈ ಮಾತನ್ನು ಏನೂ
ಗುಂಬವಿಲ್ಲದೆ ಹೇಳಿದನು. ಆಗ ಪೇತ್ರನು ಆತನ
ಕೈ ಹಿಡಿದು ಆತನನ್ನು ಗದರಿಸುವದಕ್ಕೆ ಪ್ರಾರಂಭಿ
33 ಸಲು ಆತನು ಹಿಂತಿರುಗಿಕೊಂಡು ತನ್ನ ಶಿಷ್ಯ

ರನ್ನು ನೋಡಿ ಪೇತ್ರನಿಗೆ—ಸೈತಾನನೇ, ನನ್ನ
ಮುಂದೆ ನಿಲ್ಲಬೇಡ, ನಡೆ, ನಿನ್ನ ಯೋಚನೆ ಮನು
ಷ್ಯರ ಯೋಚನೆಯೇ ಹೊರತು ದೇವರದಲ್ಲ
ಎಂದು ಗದರಿಸಿ ಹೇಳಿದನು.
34 ಆ ಮೇಲೆ ಆತನು ತನ್ನ ಶಿಷ್ಯರ ಜೊತೆಗೆ ಜನರ
ಗುಂಪನ್ನೂ ಹತ್ತಿರ ಕರೆದು ಅವರಿಗೆ ಹೇಳಿದ
ನಂದರೆ—ಯಾವನಿಗಾದರೂ ನನ್ನ ಹಿಂದೆ ಬರುವ
ದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ
ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ
35 ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳ
ಬೇಕೆಂದಿರುವವನು ಅದನ್ನು ಕಳಕೊಳ್ಳುವನು;
ಆದರೆ ನನ್ನ ನಿಮಿತ್ತವಾಗಿಯೂ ಸುವಾರ್ತೆಯ
ನಿಮಿತ್ತವಾಗಿಯೂ ತನ್ನ ಪ್ರಾಣವನ್ನು ಕಳ

ಕೊಂಡವನು ಅದನ್ನು ಉಳಿಸಿಕೊಳ್ಳುವನು.
36 ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿ
ಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋ
37 ಜನವೇನು? ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು
38 ಕೊಡಬಹುದು? ವ್ಯಭಿಚಾರಿಣಿಯಂತಿರುವ ಈ
ಪಾಪಿಷ್ಠ ಸಂತತಿಯಲ್ಲಿ ಯಾವನು ನನಗೂ
ನನ್ನ ಮಾತುಗಳಿಗೂ ನಾಚಿಕೊಳ್ಳುತ್ತಾನೋ
ಅವನಿಗೆ ಮನುಷ್ಯಕುಮಾರನು, ತಾನು ತನ್ನ
ತಂದೆಯ ಪ್ರಭಾವದೊಡನೆ ಪರಿಶುದ್ಧ ದೇವ
ದೂತರ ಸಮೇತವಾಗಿ ಬರುವಾಗ ನಾಚಿಕೊಳ್ಳು
ವನು ಅಂದನು.

9 ಮತ್ತು ಅವರಿಗೆ—ನಿಮಗೆ ನಿಜವಾಗಿ ಹೇಳು
ತ್ತೇನೆ, ಇಲ್ಲಿ ನಿಂತಿರುವವರೊಳಗೆ ಕೆಲವರು

ದೇವರ ರಾಜ್ಯವು ಪ್ರಬಲವಾಗಿ ಬಂದಿರುವದನ್ನು
ನೋಡುವ ತನಕ ಮರಣ ಹೊಂದುವದಿಲ್ಲವೆಂದು
ಹೇಳಿದನು.

ಯೇಸು ಪ್ರಕಾಶರೂಪವುಳ್ಳವನಾದದ್ದು.

(ಮತ್ತಾ. 17. 1–13; ಲೂಕ 9. 28–36.)

2 ಆರು ದಿವಸಗಳಾದ ಮೇಲೆ ಯೇಸು ಪೇತ್ರ
ಯಾಕೋಬ ಯೋಹಾನರನ್ನು ಮಾತ್ರ ಪಿಂಗಡ
ವಾಗಿ ಕರಕೊಂಡು ಎತ್ತರವಾದ ಬೆಟ್ಟಕ್ಕೆ
ಹೋದನು. ಅಲ್ಲಿ ಅವರ ಕಣ್ಣಮುಂದೆ ಆತನ
3 ರೂಪ ಬೇರೆಯಾಯಿತು. ಆತನ ವಸ್ತ್ರಗಳು
ಬಹು ಬೆಳ್ಳಗೆ ಹೊಳೆಯುತ್ತಿದ್ದವು; ಭೂಲೋಕ
ದಲ್ಲಿರುವ ಯಾವ ಅಗಸನಾದರೂ ಅಷ್ಟು ಬೆಳ್ಳಗೆ
4 ಮಾಡಲಾರನು. ಇದಲ್ಲದೆ ಎಲೀಯನೂ ಮೋಶೆ

ಯೂ ಅವರಿಗೆ ಕಾಣಿಸಿಕೊಂಡು ಯೇಸುವಿನ
5 ಸಂಗಡ ಮಾತಾಡುತ್ತಿದ್ದರು. ಆಗ ಪೇತ್ರನು
ಯೇಸುವಿಗೆ—ಗುರುವೇ, ನಾವು ಇಲ್ಲೇ ಇರುವದು
ಒಳ್ಳೇದು; ಮೂರು ಪರ್ಣಶಾಲೆಗಳನ್ನು ಕಟ್ಟು
ವೆವು; ನಿನಗೊಂದು ಮೋಶೆಗೊಂದು ಎಲೀಯನಿ
6 ಗೊಂದು ಎಂದು ಹೇಳಿದನು. ಏನು ಹೇಳ
ಬೇಕೋ ತಿಳಿಯದೆ ಹೀಗೆ ಮಾತಾಡಿದನು. ಅವರು
7 ಬಹಳವಾಗಿ ಹೆದರಿಕೊಂಡಿದ್ದರು. ಅಷ್ಟರಲ್ಲಿ
ಮೋಡವು ಬಂದು ಅವರ ಮೇಲೆ ಕವಿಯಿತು.
ಆ ಮೋಡದೊಳಗಿಂದ—ಈತನು ಪ್ರಿಯನಾಗಿ
ರುವ ನನ್ನ ಮಗನು; ಈತನ ಮಾತನ್ನು ಕೇಳಿರಿ
8 ಎಂದು ಆಕಾಶವಾಣಿ ಆಯಿತು. ಫಕ್ಕನೆ ಅವರು
ಸುತ್ತಲೂ ನೋಡಿದಾಗ ತಮ್ಮ ಸಂಗಡ ಯೇಸು

ವನ್ನೀ ಹೊರತು ಆಗಿನಿಂದ ಮತ್ತಾರನ್ನೂ
ಕಾಣಲಿಲ್ಲ.
9 ಅವರು ಆ ಬೆಟ್ಟದಿಂದ ಇಳಿದು ಬರುತ್ತಿರು
ವಾಗ ಆತನು ಅವರಿಗೆ–ನೀವು ಕಂಡಿರುವದನ್ನು
ಮನುಷ್ಯಕುಮಾರನು ಸತ್ತು ಜೀವಿತನಾಗಿ ಎದ್ದು
ಬರುವತನಕ ಯಾರಿಗೂ ತಿಳಿಸಬಾರದೆಂದು
10 ಖಂಡಿತವಾಗಿ ಹೇಳಿದನು. ಅವರು ಈ ಮಾತನ್ನು
ಹಿಡಿದು ಸತ್ತು ಜೀವಿತನಾಗಿ ಏಳುವದಂದರೇನು
ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡರು.
11 ಇದಲ್ಲದೆ ಅವರು–ಎಲೀಯನು ಮೊದಲು ಬರು
ವದು ಅಗತ್ಯವೆಂಬದಾಗಿ ಶಾಸ್ತ್ರಿಗಳು ಹೇಳುತ್ತಾ
ರಲ್ಲಾ, ಇದು ಹೇಗೆ? ಎಂದು ಆತನನ್ನು ಕೇಳಿದಕ್ಕೆ
12 ಆತನು–ಎಲೀಯನು ಮೊದಲು ಬಂದು ಎಲ್ಲ

ವನ್ನು ತಿರಿಗಿ ಸರಿಮಾಡುವದು ನಿಜ. ಮತ್ತು
ಮನುಷ್ಯಕುಮಾರನ ವಿಷಯವಾಗಿ—ಅವನು
ಬಹು ಕಷ್ಟಗಳನ್ನನುಭವಿಸಿ ಹೀನೈಸಲ್ಪಡಬೇಕೆಂಬ
13 ದಾಗಿ ಬರೆದದೆ, ಇದು ಹೇಗೆ? ಆದರೆ ನಾನು
ನಿಮಗೆ ಹೇಳುವದೇನಂದರೆ—ಎಲೀಯನು ಬಂದ
ನು; ಮತ್ತು ಅವನ ವಿಷಯವಾಗಿ ಬರೆದಿರುವ
ಪ್ರಕಾರ ಜನರು ತಮ್ಮ ಮನಸ್ಸಿಗೆ ಬಂದಂತೆ ಅವ
ನಿಗೆ ಮಾಡಿದರು ಅಂದನು.

ಯೇಸು ಮೂರ್ಛಾರೋಗಿಯನ್ನು ಸ್ವಸ್ಥಮಾಡಿದ್ದು.
(ಮತ್ತಾ. 17. 14—21; ಲೂಕ 9. 37—42.)

14 ತರುವಾಯ ಅವರು [ಉಳಿದ] ಶಿಷ್ಯರ ಬಳಿಗೆ
ಬಂದು ಅವರ ಸುತ್ತಲು ಜನರ ದೊಡ್ಡ ಗುಂಪು
ಇರುವದನ್ನೂ ಅವರ ಸಂಗಡ ಶಾಸ್ತ್ರಿಗಳು ತರ್ಕ

15 ಮಾಡುವದನ್ನೂ ಕಂಡರು. ಕೂಡಲೆ ಆ ಗುಂಪಿ
ನವರೆಲ್ಲರು ಯೇಸುವನ್ನು ಕಂಡು ಬಹು
ಆಶ್ಚರ್ಯಪಟ್ಟು ಆತನ ಬಳಿಗೆ ಓಡಿಬಂದು ಆತ
16 ನನ್ನು ವಂದಿಸಿದರು. ಆತನು ಶಾಸ್ತ್ರಿಗಳನ್ನು—
ಇವರ ಸಂಗಡ ಏನು ತರ್ಕಮಾಡುತ್ತೀರಿ? ಎಂದು
17 ಕೇಳಿದ್ದಕ್ಕೆ ಆ ಗುಂಪಿನಲ್ಲಿ ಒಬ್ಬನು—ಬೋಧಕನೇ,
ನನ್ನ ಮಗನನ್ನು ನಿನ್ನ ಬಳಿಗೆ ಕರಕೊಂಡು
18 ಬಂದೆನು; ಅವನಿಗೊಂದು ಮೂಗದೆವ್ವ ಹಿಡಿದದೆ;
ಅದು ಎಲ್ಲಿ ಅವನ ಮೇಲೆ ಬಂದರೂ ಅವನನ್ನು
ಕೆಡವುತ್ತದೆ; ಆಗ ಅವನು ನೊರೆಸುರಿಸುತ್ತಾ ಕರ
ಕರನೆ ಹಲ್ಲು ಕಡಿಯುತ್ತಾ ಕುಂದಿಹೋಗುತ್ತಾನೆ.
ಅದನ್ನು ಬಿಡಿಸಬೇಕೆಂದು ನಿನ್ನ ಶಿಷ್ಯರಿಗೆ ಹೇಳಿ
ಕೊಂಡೆ; ಅವರ ಕೈಯಿಂದ ಆಗದೆಹೋಯಿತು

19 ಎಂದು ಉತ್ತರಕೊಟ್ಟನು. ಆದಕ್ಕಾತನು—ಎಲಾ,
ನಂಬಿಕೆಯಿಲ್ಲದಂಥ ಸಂತಾನವೇ, ನಾನು ಇನ್ನೆ
ಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ
ನಿಮ್ಮನ್ನು ಸಹಿಸಿಕೊಳ್ಳಲಿ? ಅವನನ್ನು ನನ್ನ ಬಳಿಗೆ
20 ತೆಗೆದುಕೊಂಡು ಬನ್ನಿರಿ, ಅನ್ನಲು ಅವನನ್ನು
ಆತನ ಬಳಿಗೆ ತೆಗೆದುಕೊಂಡು ಬಂದರು. ಆತ
ನನ್ನು ಕಂಡ ಕೂಡಲೆ ಆ ದೆವ್ವವು ಅವನನ್ನು
ಬಹಳವಾಗಿ ಒದ್ದಾಡಿಸಲು ಅವನು ನೆಲಕ್ಕೆ ಬಿದ್ದು
21 ನೊರೆಸುರಿಸುತ್ತಾ ಹೊರಳಾಡಿದನು. ಯೇಸು
ಅವನ ತಂದೆಯನ್ನು—ಇದು ಇವನಿಗೆ ಬಂದು
ಎಷ್ಟು ದಿನವಾಯಿತು ಎಂದು ಕೇಳಿದಾಗ ಅವನು—
22 ಚಿಕ್ಕಂದಿನಲ್ಲಿಯೇ ಬಂದಿದೆ; ಮತ್ತು ಇವನನ್ನು
ಕೊಲ್ಲಬೇಕೆಂದು ಆಗಾಗ್ಗೆ ಬೆಂಕಿಯಲ್ಲಿಯೂ

ನೀರಿನಲ್ಲಿಯೂ ಕೆಡವಿತು; ನಿನ್ನ ಕೈಲಿ ಏನಾ
ದರೂ ಆಗುವ ಹಾಗಿದ್ದರೆ ನಮ್ಮ ಮೇಲೆ ಕರುಣ
ವಿಟ್ಟು ನಮಗೆ ಸಹಾಯಮಾಡು ಅಂದನು.
23 ಯೇಸು ಅವನಿಗೆ—ನಿನ್ನ ಕೈಲಿ ಆಗುವ ಹಾಗಿದ್ದರೆ
ಅನ್ನುತ್ತೀಯೋ? ನಂಬುವವನಿಗೆ ಎಲ್ಲಾ ಆಗು
24 ವದು ಎಂದು ಹೇಳಿದನು. ಕೂಡಲೆ ಆ ಹುಡು
ಗನ ತಂದೆಯು—ನಂಬುತ್ತೇನೆ, ನನಗೆ ನಂಬಿಕೆ
ಕಡಿಮೆಯಾಗಿದ್ದರೂ ಸಹಾಯಮಾಡು ಎಂದು
25 ಕೂಗಿ ಹೇಳಿದನು. ಆಗ ಯೇಸು ಜನರ ಗುಂಪು
ಓಡಿಬರುವದನ್ನು ಕಂಡು ಆ ದೆವ್ವವನ್ನು ಗದರಿಸಿ—
ಎಲೇ, ಕಿವುಡಾದ ಮೂಗದೆವ್ವವೇ, ಇವನನ್ನು ಬಿಟ್ಟು
ಹೋಗು; ಇನ್ನು ಮುಂದೆ ಹಿಡಿಯಬೇಡವೆಂದು
ನಾನು ನಿನಗೆ ಅಪ್ಪಣೆಕೊಡುತ್ತೇನೆ ಅಂದನು.

26 ಆಗ ಅದು ಅಬ್ಬರಿಸಿ ಅವನನ್ನು ಒದ್ದಾಡಿಸಿ ಬಿಟ್ಟು
ಹೋಯಿತು. ಆ ಹುಡುಗನು ಸತ್ತಹಾಗೆ ಬಿದ್ದಿದ್ದ
ರಿಂದ ಬಹು ಜನರು—ಸತ್ತುಹೋದ ಅಂದರು.
27 ಆದರೆ ಯೇಸು ಅವನನ್ನು ಕೈಹಿಡಿದು ಎಬ್ಬಿಸಲು
28 ಅವನು ಎದ್ದು ನಿಂತನು. ಯೇಸು ಮನೆಗೆ
ಬಂದಾಗ ಆತನ ಶಿಷ್ಯರು—ಅದನ್ನು ಬಿಡಿಸಲಿಕ್ಕೆ
ನಮ್ಮಿಂದ ಯಾಕೆ ಆಗಲಿಲ್ಲವೆಂದು ಆತನನ್ನು
29 ಏಕಾಂತದಲ್ಲಿ ಕೇಳಲು ಆತನು—ಈ ಜಾತಿಯು
ದೇವರ ಪ್ರಾರ್ಥನೆಯಿಂದಲೇ ಹೊರತು ಬೇರೆ
ಯಾತರಿಂದಲೂ ಬಿಟ್ಟುಹೋಗುವದಿಲ್ಲವೆಂದು
ಅವರಿಗೆ ಹೇಳಿದನು.

ಯೇಸು ತನ್ನ ಮರಣ ಪುನರುತ್ಥಾನಗಳನ್ನು ಎರಡನೆಯ ಸಾರಿ ಮುಂದಾಗಿ ತಿಳಿಸಿದ್ದು.

(ಮತ್ತಾ. 17. 22, 23; ಲೂಕ 9. 43—45.)

30 ಅಲ್ಲಿಂದ ಅವರು ಹೊರಟು ಗಲಿಲಾಯವನ್ನು
ಹಾದು ಹೋಗುತ್ತಿದ್ದರು. ಇದು ಜನರಿಗೆ ಗೊತ್ತಾಗ
31 ಬಾರದೆಂದು ಆತನಿಗೆ ಮನಸ್ಸಿತ್ತು. ಯಾಕಂದರೆ
ಆತನು ತನ್ನ ಶಿಷ್ಯರಿಗೆ ಉಪದೇಶಮಾಡುತ್ತಾ—
ಮನುಷ್ಯಕುಮಾರನು ಜನರ ಕೈಗೆ ಒಪ್ಪಿಸಲ್ಪಡು
ತ್ತಾನೆ; ಅವರು ಅವನನ್ನು ಕೊಲ್ಲುವರು; ಕೊಂದ
ಮೂರು ದಿನದ ಮೇಲೆ ಆತನು ಜೀವಿತನಾಗಿ
32 ಎದು ಬರುವನೆಂದು ಹೇಳಿದನು. ಅವರು ಆ
ಮಾತನ್ನು ಗ್ರಹಿಸಲಿಲ್ಲ, ಆದರೆ ಆತನನ್ನು ಕೇಳು
ವದಕ್ಕೆ ಅಂಜಿದರು.

ಯೇಸು ತನ್ನ ಶಿಷ್ಯರಿಗೆ ದೀನಭಾವ ಇರಬೇಕೆಂತಲೂ ಪಾಪದಲ್ಲಿ ಸಿಕ್ಕಿಸುವಂಥದನ್ನು
ತೆಗೆದುಹಾಕಬೇಕೆಂತಲೂ ಬೋಧಿಸಿದ್ದು.
(ಮತ್ತಾ. 18. 1—9; ಲೂಕ 9. 46—50.)

33 ಮತ್ತು ಅವರು ಕಪೆರ್ನೌಮಿಗೆ ಬಂದರು.
ಅಲ್ಲಿ ಆತನು ಮನೆಯಲ್ಲಿದ್ದಾಗ—ನೀವು ದಾರಿಯಲ್ಲಿ
ಏನು ಮಾತಾಡಿಕೊಳ್ಳುತ್ತಿದ್ದಿರಿ ಎಂದು ಶಿಷ್ಯರನ್ನು
34 ಕೇಳಲು ಅವರು ಸುಮ್ಮನಿದ್ದರು; ಯಾಕಂದರೆ
ಅವರು ದಾರಿಯಲ್ಲಿ ಒಬ್ಬರಕೂಡೊಬ್ಬರು—
[ತಮ್ಮಲ್ಲಿ] ಯಾವನು ಹೆಚ್ಚಿನವನೆಂದು ವಾಗ್ವಾದ
35 ಮಾಡಿಕೊಂಡಿದ್ದರು. ಆತನು ಕೂತುಕೊಂಡು
ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕರೆದು
ಅವರಿಗೆ—ಯಾವನಾದರೂ ಮೊದಲಿನವನಾಗ
ಬೇಕೆಂದಿದ್ದರೆ ಅವನು ಎಲ್ಲರಲ್ಲಿ ಕಡೆಯವನೂ

36 ಎಲ್ಲರ ಆಳೂ ಆಗಿರಬೇಕು ಎಂದು ಹೇಳಿ ಒಂದು
ಚಿಕ್ಕ ಮಗುವನ್ನು ತೆಗೆದುಕೊಂಡು ಅವರ
37 ನಡುವೆ ನಿಲ್ಲಿಸಿ ಅಪ್ಪಿಕೊಂಡು ಅವರಿಗೆ—ಯಾವ
ನಾದರೂ ನನ್ನ ಹೆಸರಿನಲ್ಲಿ ಇಂಥ ಚಿಕ್ಕ ಮಕ್ಕ
ಳಲ್ಲಿ ಒಂದನ್ನು ಸೇರಿಸಿಕೊಂಡರೆ ನನ್ನನ್ನು ಸೇರಿಸಿ
ಕೊಂಡ ಹಾಗಾಯಿತು; ಮತ್ತು ಯಾವನಾದರೂ
ನನ್ನನ್ನು ಸೇರಿಸಿಕೊಂಡರೆ ನನ್ನನ್ನಲ್ಲ, ನನ್ನನ್ನು
ಕಳುಹಿಸಿಕೊಟ್ಟಾತನನ್ನೇ ಸೇರಿಸಿಕೊಂಡ ಹಾಗಾ
ಯಿತು ಎಂದು ಹೇಳಿದನು.

38 ಯೋಹಾನನು ಆತನಿಗೆ—ಬೋಧಕನೇ, ಯಾವ
ನೋ ಒಬ್ಬನು ನಿನ್ನ ಹೆಸರನ್ನು ಹೇಳಿ ದೆವ್ವಬಿಡಿಸು
ವದನ್ನು ನಾವು ಕಂಡು ಅವನು ನಮಗೆ ಸೇರಿದವ
ನಲ್ಲವಾದ್ದರಿಂದ ಅವನಿಗೆ ಅಡ್ಡಿಮಾಡಿದೆವು ಎಂದು

39 ಹೇಳಲಾಗಿ ಯೇಸು—ಅವನಿಗೆ ಅಡ್ಡಿಮಾಡಬೇಡಿರಿ;
ನನ್ನ ಹೆಸರಿನ ಮೇಲೆ ಮಹತ್ತನ್ನು ಮಾಡಿ ಏಕಾ
ಏಕಿ ನನ್ನನ್ನು ದೂಷಿಸುವವನು ಒಬ್ಬನೂ ಇಲ್ಲ.
40 ನಮ್ಮನ್ನು ಎದುರಿಸದವನು ನಮ್ಮ ಪಕ್ಷದವನೇ.
41 ನೀವು ಕ್ರಿಸ್ತನವರೆಂದು ನಿಮಗೆ ಯಾವನಾದರೂ
ಒಂದು ತಂಬಿಗೆ ನೀರನ್ನು ಕುಡಿಯುವದಕ್ಕೆ
ಕೊಟ್ಟರೆ ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವದೇ
ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.
42 ಮತ್ತು ನಂಬುವ ಈ ಚಿಕ್ಕವರಲ್ಲಿ ಒಬ್ಬನಿಗೆ
ಯಾವನಾದರೂ ಆಡ್ಡಿಯಾದರೆ ಅಂಥವನ ಕೊರ
ಳಿಗೆ ಬೀಸುವ ಕಲ್ಲು ಕಟ್ಟಿ ಅವನನ್ನು ಸಮುದ್ರ
43 ದಲ್ಲಿ ಹಾಕಿದರೂ ಅವನಿಗೆ ಲೇಸು. ಇದಲ್ಲದೆ
ನಿನ್ನ ಕೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ

ಅದನ್ನು ಕತ್ತರಿಸಿಬಿಡು; ಎರಡು ಕೈಯುಳ್ಳವ
ನಾಗಿದ್ದು ಆರದ ಬೆಂಕಿಯಾಗಿರುವ ನರಕದಲ್ಲಿ
ಬೀಳುವದಕ್ಕಿಂತ ಕೈಕಳಕೊಂಡವನಾಗಿ ಜೀವದಲ್ಲಿ
45 ಸೇರುವದು ನಿನಗೆ ಉತ್ತಮ. ಮತ್ತು ನಿನ್ನ
ಕಾಲು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ
ಅದನ್ನು ಕಡಿದುಬಿಡು; ಎರಡು ಕಾಲುಳ್ಳವ
ನಾಗಿದ್ದು ನರಕದಲ್ಲಿ ಹಾಕಿಸಿಕೊಳ್ಳುವದಕ್ಕಿಂತ
ಕಾಲುಕಳಕೊಂಡವನಾಗಿ ಜೀವದಲ್ಲಿ ಸೇರುವದು
47 ನಿನಗೆ ಉತ್ತಮ. ನಿನ್ನ ಕಣ್ಣು ನಿನ್ನನ್ನು ಪಾಪದಲ್ಲಿ
ಸಿಕ್ಕಿಸುವದಾದರೆ ಅದನ್ನು ಕಿತ್ತುಬಿಸಾಡು; ಎರಡು
ಕಣ್ಣುಳ್ಳವನಾಗಿದ್ದು ನರಕದಲ್ಲಿ ಹಾಕಿಸಿಕೊಳ್ಳುವದ
ಕ್ಕಿಂತ ಒಂದೇ ಕಣ್ಣುಳ್ಳವನಾಗಿದ್ದು ದೇವರ ರಾಜ್ಯ
48 ದಲ್ಲಿ ಸೇರುವದು ನಿನಗೆ ಉತ್ತಮ. ನರಕದಲ್ಲಿ

ಅವರನ್ನು ಕಡಿಯುವ ಹುಳ ಸಾಯುವದಿಲ್ಲ,
49 ಬೆಂಕಿ ಆರುವದಿಲ್ಲ. ಪ್ರತಿಯೊಬ್ಬನಿಗೂ ಬೆಂಕಿ
50 ಯೆಂಬ ಉಪ್ಪಿನ ಹದವು ಕೊಡಲ್ಪಡಬೇಕು. ಉಪ್ಪು
ಒಳ್ಳೆಯ ಪದಾರ್ಥವೇ; ಉಪ್ಪು ಸಪ್ಪೆಯಾದರೆ
ಅದನ್ನು ಇನ್ನಾವ್ಯತರಿಂದ ರುಚಿಗೊಳಿಸುವಿರಿ?
ನಿಮ್ಮೊಳಗೆ ಉಪ್ಪು ಇರಲಿ, ಒಬ್ಬರಿಗೊಬ್ಬರು
ಸಮಾಧಾನದಿಂದಿರಿ.

ಹೆಂಡತಿಯ ಪರಿತ್ಯಾಗದ ವಿಷಯವಾಗಿ ಯೇಸು ಉತ್ತರ ಕೊಟ್ಟದ್ದು.
(ಮತ್ತಾ. 19. 1—9; ಲೂಕ 16. 18.)

10 ಅಲ್ಲಿಂದ ಆತನು ಎದ್ದು ಯೂದಾಯ ಪ್ರಾಂತ್ಯ
ಕ್ಕೂ ಯೊರ್ದನ್ ಹೊಳೆಯ ಆಚೆಯ ಸೀಮೆಗೂ
ಬಂದನು. ಅಲ್ಲಿ ಜನರು ತಿರಿಗಿ ಗುಂಪುಗುಂಪಾಗಿ
ಆತನ ಬಳಿಗೆ ಕೂಡಿ ಬರಲು ಆತನು ತಿರಿಗಿ

ಎಂದಿನಂತೆ ಅವರಿಗೆ ಉಪದೇಶಮಾಡುತ್ತಿದ್ದನು.
2 ಆಗ ಫರಿಸಾಯರು ಹತ್ತಿರಕ್ಕೆ ಬಂದು ಆತನನ್ನು
ಪರೀಕ್ಷಿಸಬೇಕೆಂಬ ಯೋಚನೆಯಿಂದ — ಒಬ್ಬನು
ಹೆಂಡತಿಯನ್ನು ಬಿಟ್ಟು ಬಿಡುವದು ಧರ್ಮವೋ
3 ಹೇಗೆ ಎಂದು ಕೇಳಿದರು. ಆತನು ಅದಕ್ಕೆ—
ಮೋಶೆ ನಿಮಗೆ ಏನು ಆಜ್ಞೆಕೊಟ್ಟನು ಅನ್ನಲಾಗಿ
4 ಅವರು—ತ್ಯಾಗಪತ್ರವನ್ನು ಬರೆದುಕೊಟ್ಟು ಆಕೆ
ಯನ್ನು ಬಿಟ್ಟುಬಿಡಬಹುದೆಂದು ಮೋಶೆಯು
5 ಅಪ್ಪಣೆಕೊಟ್ಟನು ಅಂದರು. ಆದರೆ ಯೇಸು
ಅವರಿಗೆ— ಅವನು ನಿಮ್ಮ ಮೊಂಡತನವನ್ನು ನೋಡಿ
6 ನಿಮಗೆ ಇಂಥ ಆಜ್ಞೆಯನ್ನು ಬರೆದಿಟ್ಟನು. ದೇವ
ರಾದರೋ ಸೃಷ್ಟಿಯ ಮೊದಲಿನಿಂದಲೇ ಮನುಷ್ಯ
7 ರನ್ನು ಗಂಡುಹೆಣ್ಣಾಗಿ ನಿರ್ಮಿಸಿದನೆಂತಲೂ ಈ

ಕಾರಣದಿಂದ ಪುರುಷನು ತನ್ನ ತಂದೆತಾಯಿ
ಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿ
ಕೊಂಡು ಅವರಿಬ್ಬರು ಒಂದೇ ಶರೀರವಾಗಿರುವ
8 ರೆಂತಲೂ ಬರೆದದೆ. ಹೀಗಿರುವಲ್ಲಿ ಅವರು ಇನ್ನು
9 ಇಬ್ಬರಲ್ಲ, ಒಂದೇ ಶರೀರವಾಗಿದ್ದಾರೆ. ಆದದ
ರಿಂದ ದೇವರು ಕೂಡಿಸಿದ್ದನ್ನು ಮನುಷ್ಯರು ಅಗ
10 ಲಿಸಬಾರದು ಎಂದು ಹೇಳಿದನು. ಮನೆಯಲ್ಲಿ
ಆತನ ಶಿಷ್ಯರು ಈ ವಿಷಯದಲ್ಲಿ ಆತನನ್ನು ತಿರಿಗಿ
11 ಕೇಳಿದಾಗ ಆತನು ಅವರಿಗೆ—ತನ್ನ ಹೆಂಡತಿಯನ್ನು
ಬಿಟ್ಟು ಮತ್ತೊಬ್ಬಳನ್ನು ಮದುವೆಮಾಡಿಕೊಳ್ಳು
ವವನು ತನ್ನ ಹೆಂಡತಿಗೆ ದ್ರೋಹಿಯಾಗಿ ವ್ಯಭಿ
12 ಚಾರ ಮಾಡಿದವನಾಗಿದ್ದಾನೆ; ಮತ್ತು ಹೆಂಡತಿಯು
ತನ್ನ ಗಂಡನನ್ನು ಬಿಟ್ಟು ಬೇರೊಬ್ಬನನ್ನು ಮದುವೆ

ಮಾಡಿಕೊಂಡರೆ ಅವಳು ವ್ಯಭಿಚಾರ ಮಾಡಿದವ
ಳಾಗಿದ್ದಾಳೆ ಎಂದು ಹೇಳಿದನು.

ಯೇಸು ಚಿಕ್ಕ ಮಕ್ಕಳನ್ನು ಆಶೀರ್ವದಿಸಿದ್ದು.
(ಮತ್ತಾ. 19. 13—15; ಲೂಕ 18. 15—17.)

13 ಬಳಿಕ ಕೆಲವರು ತಮ್ಮ ಚಿಕ್ಕ ಮಕ್ಕಳನ್ನು
ಯೇಸುವಿನಿಂದ ಮುಟ್ಟಿಸಬೇಕೆಂದು ಆತನ ಬಳಿಗೆ
14 ತರಲು ಶಿಷ್ಯರು ಅವರನ್ನು ಗದರಿಸಿದರು. ಆದರೆ
ಯೇಸು ಅದನ್ನು ಕಂಡು ಕೋಪಗೊಂಡು ಅವ
ರಿಗೆ – ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ;
ಅವುಗಳಿಗೆ ಅಡ್ಡಿಮಾಡಬೇಡಿರಿ; ದೇವರ ರಾಜ್ಯವು
15 ಇಂಥವರದೇ. ನಿಮಗೆ ಸತ್ಯವಾಗಿ ಹೇಳುತ್ತೇನೆ,
ಯಾವನು ಶಿಶುಭಾವದಿಂದ ದೇವರ ರಾಜ್ಯವನ್ನು
ಅಂಗೀಕರಿಸುವದಿಲ್ಲವೋ ಅವನು ಅದರಲ್ಲಿ ಸೇರು

16 ಪದೇ ಇಲ್ಲ ಎಂದು ಹೇಳಿ ಅವುಗಳನ್ನು ಅಪ್ಪಿ
ಕೊಂಡು ಅವುಗಳ ಮೇಲೆ ಕೈಯಿಟ್ಟು ಆಶೀರ್ವ
ದಿಸಿದನು.

ಯೇಸು ಹಣದ ಭ್ರಮೆಯಿಂದಾಗುವ ಕೇಡನ್ನು ತೋರಿಸಿದ್ದು.
(ಮತ್ತಾ. 19. 16–30; ಲೂಕ 18. 18–30.)

17 ಆತನು ಹೊರಟು ದಾರಿಹಿಡಿದು ಹೋಗುವಾಗ
ಒಬ್ಬನು ಓಡುತ್ತಾ ಆತನ ಎದುರಿಗೆ ಬಂದು ಮೊಣ
ಕಾಲೂರಿ–ಒಳ್ಳೇ ಬೋಧಕನೇ, ನಾನು ನಿತ್ಯ
ಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡ
18 ಬೇಕೆಂದು ಆತನನ್ನು ಕೇಳಲಾಗಿ ಯೇಸು ಅವ
ನಿಗೆ–ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳು
ತ್ತೀ? ದೇವರೊಬ್ಬನೇ ಹೊರತು ಮತ್ತಾವನೂ
19 ಒಳ್ಳೆಯವನಲ್ಲ. ನರಹತ್ಯ ಮಾಡಬಾರದು; ವ್ಯಭಿ

ಚಾರಮಾಡಬಾರದು; ಕದಿಯಬಾರದು; ಸುಳ್ಳು
ಸಾಕ್ಷಿ ಹೇಳಬಾರದು; ಮೋಸಮಾಡಬಾರದು;
ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು ಎಂಬ
ದೇವರಾಜ್ಞೆಗಳು ನಿನಗೆ ಗೊತ್ತಿವೆಯಷ್ಟೆ ಎಂದು
20 ಹೇಳಿದನು. ಅವನು ಆತನಿಗೆ—ಬೋಧಕನೇ,
ನಾನು ಚಿಕ್ಕಂದಿನಿಂದಲೂ ಇವೆಲ್ಲಕ್ಕೂ ಸರಿಯಾಗಿ
ನಡಕೊಂಡು ಬಂದಿದ್ದೇನೆ ಎಂದು ಹೇಳಲು
21 ಯೇಸು ಅವನನ್ನು ದೃಷ್ಟಿಸಿನೋಡಿ ಪ್ರೀತಿಸಿ ಅವ
ನಿಗೆ—ನಿನಗೆ ಒಂದು ಕಡಿಮೆಯಾಗಿದೆ; ಹೋಗು,
ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಕೊಡು;
ಪರಲೋಕದಲ್ಲಿ ನಿನಗೆ ಸಂಪತ್ತಿರುವದು; ನೀನು
ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು.
22 ಆದರೆ ಅವನು ಬಹಳ ಆಸ್ತಿಯುಳ್ಳವನಾಗಿದ್ದದ

ರಿಂದ ಈ ಮಾತಿಗೆ ಮೋರೆಬಾಡಿದವನಾಗಿ ದುಃಖ
ದಿಂದ ಹೊರಟುಹೋದನು.
23 ಆಗ ಯೇಸು ಸುತ್ತಲೂ ನೋಡಿ ತನ್ನ ಶಿಷ್ಯ
ರಿಗೆ–ಧನವಂತರು ದೇವರ ರಾಜ್ಯದಲ್ಲಿ ಸೇರು
ವದು ಎಷ್ಟೋ ಕಷ್ಟ ಎಂದು ಹೇಳಿದನು.
24 ಶಿಷ್ಯರು ಆತನ ಮಾತುಗಳನ್ನು ಕೇಳಿ ಬೆರ
ಗಾದರು. ಯೇಸು ತಿರಿಗಿ ಅವರಿಗೆ–ಮಕ್ಕಳಿರಾ,
ದೇವರ ರಾಜ್ಯದಲ್ಲಿ ಸೇರುವದು ಎಷ್ಟೋ
25 ಕಷ್ಟ. ಐಶ್ವರ್ಯವಂತನು ದೇವರ ರಾಜ್ಯದಲ್ಲಿ
ಸೇರುವದಕ್ಕಿಂತ ಒಂಟೆಯು ಸೂಜೀಕಣ್ಣಿನಲ್ಲಿ
ನುಗ್ಗಿಹೋಗುವದು ಸುಲಭ ಎಂದು ಹೇಳಿದನು.
26 ಈ ಮಾತಿಗೆ ಅವರು ಇನ್ನಷ್ಟಾಶ್ಚರ್ಯಪಟ್ಟು–
[ಹೀಗಿದ್ದರೆ] ಯಾರಿಗೆ ರಕ್ಷಣೆಯಾದೀತು ಎಂದು

27 ತಮ್ಮ ತಮ್ಮೊಳಗೆ ಹೇಳಿಕೊಳ್ಳಲು ಯೇಸು ಅವ
ರನ್ನು ದೃಷ್ಟಿಸಿನೋಡಿ—ಇದು ಮನುಷ್ಯರಿಗೆ
ಅಸಾಧ್ಯ; ದೇವರಿಗೆ ಅಸಾಧ್ಯವಲ್ಲ; ದೇವರಿಗೆ
28 ಎಲ್ಲವು ಸಾಧ್ಯವೇ ಅಂದನು. ಪೇತ್ರನು ಆತನಿಗೆ—
ಇಗೋ, ನಾವು ಎಲ್ಲಾ ಬಿಟ್ಟುಬಿಟ್ಟು ನಿನ್ನನ್ನು
ಹಿಂಬಾಲಿಸಿದ್ದೇವೆ ಎಂದು ಹೇಳುವದಕ್ಕೆ ಪ್ರಾರಂಭಿ
29 ಸಲು ಯೇಸು—ನಿಮಗೆ ಸತ್ಯವಾಗಿ ಹೇಳುತ್ತೇನೆ,
ಯಾವನು ನನ್ನ ನಿಮಿತ್ತವೂ ಸುವಾರ್ತೆಯ
ನಿಮಿತ್ತವೂ ಮನೆಯನ್ನಾಗಲಿ ಅಣ್ಣತಮ್ಮಂದಿರ
ನ್ನಾಗಲಿ ಅಕ್ಕತಂಗಿಯರನ್ನಾಗಲಿ ತಾಯಿಯ
ನ್ನಾಗಲಿ ತಂದೆಯನ್ನಾಗಲಿ ಮಕ್ಕಳನ್ನಾಗಲಿ
30 ಭೂಮಿಯನ್ನಾಗಲಿ ಬಿಟ್ಟುಬಿಟ್ಟಿರುವನೋ ಅವ
ನಿಗೆ ಈಗಿನ ಕಾಲದಲ್ಲಿ ಮನೆ ಅಣ್ಣ ತಮ್ಮ ಅಕ್ಕ

ತಂಗಿ ತಾಯಿ ಮಕ್ಕಳು ಭೂಮಿ ಇವೆಲ್ಲವೂ
ಹಿಂಸೆಗಳು ಸಹಿತವಾಗಿ ನೂರರಷ್ಟು ಸಿಕ್ಕೇ ಸಿಕ್ಕು
ತ್ತವೆ; ಮತ್ತು ಮುಂದಣ ಲೋಕದಲ್ಲಿ ನಿತ್ಯ
31 ಜೀವವು ದೊರೆಯುವದು. ಆದರೆ ಬಹು ಮಂದಿ
ಮೊದಲಿನವರು ಕಡೆಯವರಾಗುವರು, ಕಡೆಯ
ವರು ಮೊದಲಿನವರಾಗುವರು ಎಂದು ಹೇಳಿ
ದನು.

ಯೇಸು ತನ್ನ ಮರಣ ಪುನರುತ್ಥಾನಗಳನ್ನು ಮೂರನೆಯ ಸಾರಿ ಮುಂದಾಗಿ ತಿಳಿಸಿದ್ದು.

(ಮತ್ತಾ. 20. 17 – 19; ಲೂಕ 18. 31 – 34.)

32 ಅವರು ಯೆರೂಸಲೇಮಿನ ದಾರಿಯನ್ನು
ಹಿಡಿದು ಹೋಗುತ್ತಿರುವಾಗ ಯೇಸು ಅವರ
ಮುಂದೆ ಮುಂದೆ ಹೋಗುತ್ತಿದ್ದನು. ಅವರು

[ನೋಡಿ] ಬೆರಗಾದರು; ಆತನ ಹಿಂದೆ ಬರು
ವವರು ಭಯಪಡುವವರಾದರು. ಆಗ ಆತನು
ತನ್ನ ಹನ್ನೆರಡು ಮಂದಿ ಶಿಷ್ಯರನ್ನು ತಿರಿಗಿ
ಕರೆದುಕೊಂಡು ಮುಂದೆ ತನಗಾಗುವದನ್ನು
33 ಹೇಳುವದಕ್ಕೆ ತೊಡಗಿ ಅವರಿಗೆ—ನೋಡಿರಿ,
ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ.
ಮತ್ತು ಮನುಷ್ಯಕುಮಾರನನ್ನು ಮಹಾಯಾಜ
ಕರ ಮತ್ತು ಶಾಸ್ತ್ರಿಗಳ ಕೈಗೆ ಹಿಡುಕೊಡುವರು.
ಅವರು ಅವನಿಗೆ ಮರಣ ದಂಡನೆಯನ್ನು ವಿಧಿಸಿ
34 ಅವನನ್ನು ಅನ್ಯರ ಕೈಗೆ ಒಪ್ಪಿಸುವರು. ಇವರು
ಅವನನ್ನು ಅಪಹಾಸ್ಯಮಾಡುವರು, ಅವನ ಮೇಲೆ
ಉಗುಳುವರು, ಅವನನ್ನು ಕೊರಡೆಗಳಿಂದ ಹೊಡೆ
ಯುವರು, ಕೊಂದುಹಾಕುವರು. ಅವನು

ಮೂರು ದಿನದ ಮೇಲೆ ಜೀವಿತನಾಗಿ ಎದ್ದು ಬರು
ವನು ಎಂದು ಹೇಳಿದನು.

ಯೇಸು ತನ್ನ ಶಿಷ್ಯರಿಗೆ ದೀನಭಾವವಿರಬೇಕೆಂದು ಬೋಧಿಸಿದ್ದು.
(ಮತ್ತಾ. 20. 20—28.)

35 ಆಗ ಜೆಬೆದಾಯನ ಮಕ್ಕಳಾದ ಯಾಕೋಬ
ಯೋಹಾನರು ಆತನ ಬಳಿಗೆ ಬಂದು ಆತನಿಗೆ–
ಗುರುವೇ, ನಾವು ಬಂದನ್ನು ಕೇಳಿಕೊಳ್ಳುತ್ತೇವೆ;
ಅದನ್ನು ನಮಗೋಸ್ಕರ ನಡಿಸಿಕೊಡಬೇಕೆಂದು
36 ಹೇಳಿದರು. ಆತನು ಅವರನ್ನು– ನಿಮಗೇನು
37 ನಡಿಸಿಕೊಡಬೇಕು ಎಂದು ಕೇಳಲು ಅವರು–
ನಿನಗೆ ಮಹಾಪದವಿ ಬಂದಾಗ ನಮ್ಮಲ್ಲಿ ಒಬ್ಬನು
ನಿನ್ನ ಬಲಗಡೆಯಲ್ಲೂ ಮತ್ತೊಬ್ಬನು ಎಡಗಡೆ
ಯಲ್ಲೂ ಕೂತುಕೊಳ್ಳುವಂತೆ ನಮಗೆ ಅನುಗ್ರಹ

38 ಮಾಡಬೇಕು ಅಂದರು. ಆದರೆ ಯೇಸು ಅವ
ರನ್ನು—ನೀವು ಬೇಡಿಕೊಂಡದ್ದು ಏನೆಂದು ನಿಮಗೆ
ತಿಳಿಯದು; ನಾನು ಕುಡಿಯುವ ಪಾತ್ರೆಯಲ್ಲಿ
ಕುಡಿಯುವದು ನಿಮ್ಮಿಂದಾದೀತೇ? ನನಗಾಗುವ
ದೀಕ್ಷಾಸ್ನಾನವನ್ನು ಹೊಂದುವದು ನಿಮ್ಮಿಂದಾ
ದೀತೇ ಎಂದು ಕೇಳಲು ಅವರು—ಆಗುವದು
39 ಅಂದರು. ಆಗ ಯೇಸು ಅವರಿಗೆ—ನಾನು ಕುಡಿ
ಯುವ ಪಾತ್ರೆಯಲ್ಲಿ ಕುಡಿಯುವಿರಿ; ನನಗಾಗುವ
40 ಸ್ನಾನವು ನಿಮಗಾಗುವದು; ಆದರೆ ನನ್ನ ಬಲಗಡೆ
ಯಲ್ಲಾದರೂ ಎಡಗಡೆಯಲ್ಲಾದರೂ ಕೂತು
ಕೊಳ್ಳುವಂತೆ ಅನುಗ್ರಹಮಾಡುವದು ನನ್ನದಲ್ಲ;
ಅದು ಯಾರಿಗೆಂದು ಸಿದ್ಧಪಡಿಸಿದೆಯೋ ಅವರಿಗೇ
41 ಸಿಕ್ಕುವದು ಎಂದು ಹೇಳಿದನು. ಉಳಿದ ಹತ್ತು

ಮುಂದಿ ಶಿಷ್ಯರು ಇದನ್ನು ಕೇಳಿ ಯಾಕೋಬ
42 ಯೋಹಾನರ ಮೇಲೆ ಸಿಟ್ಟಿಗೆದ್ದರು. ಯೇಸು ಅವ
ರನ್ನು ಹತ್ತಿರಕ್ಕೆ ಕರೆದು ಅವರಿಗೆ–ಜನಗಳನ್ನಾ
ಳುವವರೆನಿಸಿಕೊಳ್ಳುವವರು ಅವರ ಮೇಲೆ
ಅಹಂಕಾರದಿಂದ ದೊರೆತನಮಾಡುತ್ತಾರೆ, ಮತ್ತು
ಅವರಲ್ಲಿ ದೊಡ್ಡವರು ಬಲಾತ್ಕಾರದಿಂದ ಅಧಿಕಾರ
43 ನಡಸುತ್ತಾರೆ ಎಂದು ನೀವು ಬಲ್ಲಿರಷ್ಟೆ; ಆದರೆ
ನಿಮ್ಮಲ್ಲಿ ಹಾಗಿರಬಾರದು; ನಿಮ್ಮಲ್ಲಿ ದೊಡ್ಡವ
ನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರ
44 ಬೇಕು; ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿ
45 ರುವವನು ಎಲ್ಲರ ಆಳಾಗಿರಬೇಕು. ಮನುಷ್ಯ
ಕುಮಾರನು ಸಹ ಸೇವೆಮಾಡಿಸಿಕೊಳ್ಳುವದಕ್ಕೆ
ಬರಲಿಲ್ಲ, ಸೇವೆಮಾಡುವದಕ್ಕೂ ಅನೇಕರನ್ನು

ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು
ಕೊಡುವದಕ್ಕೂ ಬಂದನು ಎಂದು ಹೇಳಿದನು.

ಯೇಸು ಬಾರ್ತಿಮಾಯನೆಂಬ ಒಬ್ಬ ಕುರುಡನಿಗೆ ದೃಷ್ಟಿಕೊಟ್ಟದ್ದು.
(ಮತ್ತಾ. 20. 29 - 34: ಲೂಕ 18. 35 -- 43.)

46 ಆ ಮೇಲೆ ಅವರು ಯೆರಿಕೋವಿಗೆ ಬಂದರು.
ಆತನೂ ಆತನ ಶಿಷ್ಯರೂ ಬಹು ಜನರ ಗುಂಪೂ
ಆ ಊರಿನಿಂದ ಹೊರಟುಹೋಗುತ್ತಿರುವಾಗ
ತಿಮಾಯನ ಮಗನಾದ ಬಾರ್ತಿಮಾಯನು
ದಾರಿಯ ಮಗ್ಗುಲಲ್ಲಿ ಕೂತಿದ್ದನು. ಅವನು
47 ಕುರುಡ ಭಿಕ್ಷಗಾರನು. ಈ ಮಾರ್ಗವಾಗಿ
ಹೋಗುವವನು ನಜರೇತಿನ ಯೇಸುವೆಂದು
ಅವನು ಕೇಳಿ-ದಾವೀದನ ಕುಮಾರನೇ, ಯೇಸು
ವೇ, ನನ್ನನ್ನು ಕರುಣಿಸು ಎಂದು ಕೂಗಿಕೊಳ್ಳು

48 ವದಕ್ಕೆ ಪ್ರಾರಂಭಿಸಿದನು. ಅನೇಕರು—ಸುಮ್ಮ
ನಿರು ಎಂದು ಅವನನ್ನು ಗದರಿಸಲು ಅವನು—
ದಾವೀದನ ಕುಮಾರನೇ, ನನ್ನನ್ನು ಕರುಣಿಸು
49 ಎಂದು ಮತ್ತಷ್ಟು ಕೂಗಿಕೊಂಡನು. ಆಗ
ಯೇಸು ನಿಂತು—ಅವನನ್ನು ಕರೆಯಿರಿ ಅನ್ನಲು
ಅವರು ಆ ಕುರುಡನನ್ನು ಕರೆದು—ಧೈರ್ಯ
ವಿರಲಿ, ಏಳು, ನಿನ್ನನ್ನು ಕರೆಯುತ್ತಾನೆ ಅಂದರು.
50 ಅವನು ತನ್ನ ಹೊದಿಕೆಯನ್ನು ತೆಗೆದುಹಾಕಿ
ತಟ್ಟನೆ ಎದ್ದು ಯೇಸುವಿನ ಬಳಿಗೆ ಬಂದನು.
51 ಯೇಸು ಅವನನ್ನು—ನಾನು ನಿನಗೆ ಏನು ಮಾಡ
ಬೇಕೆಂದು ಕೋರುತ್ತೀ ಎಂದು ಕೇಳಲು ಆ
ಕುರುಡನು—ನನಗೆ ಕಣ್ಣು ಬರುವಂತೆ ಮಾಡ
52 ಬೇಕು, ಗುರುವೇ, ಅಂದನು. ಯೇಸು ಅವನಿಗೆ—

ಹೋಗು, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥ
ಮಾಡಿ ಅದೆ ಎಂದು ಹೇಳಿದನು; ಕೂಡಲೆ ಅವನಿಗೆ
ಕಣ್ಣು ಬಂದವು; ಅವನು ಆ ದಾರಿಯಲ್ಲಿ ಆತನ
ಹಿಂದೆ ಹೋದನು.

ಯೇಸು ಅರಸನಂತೆ ಯೆರೂಸಲೇಮಿನಲ್ಲಿ ಪ್ರವೇಶಮಾಡಿದ್ದು.
(ಮತ್ತಾ. 21. 1—9; ಲೂಕ 19. 29—38; ಯೋಹಾ. 12. 12—16.)

11 ಅವರು ಯೆರೂಸಲೇಮಿಗೆ ಸಮೀಪಿಸಿ ಎಣ್ಣೇ
ಮರಗಳ ಗುಡ್ಡದ ಬಳಿಯಲ್ಲಿರುವ ಬೇತ್ಫಗೆಗೂ
ಬೇಥಾನ್ಯಕ್ಕೂ ಬಂದಾಗ ಆತನು ತನ್ನ ಶಿಷ್ಯರಲ್ಲಿ
2 ಇಬ್ಬರನ್ನು ಕರೆದು—ನಿಮ್ಮೆದುರಿಗಿರುವ ಹಳ್ಳಿಗೆ
ಹೋಗಿರಿ; ಅದರೊಳಕ್ಕೆ ಸೇರುತ್ತಿರುವಾಗಲೇ
ಅಲ್ಲಿ ಕಟ್ಟಿರುವ ಒಂದು ಕತ್ತೇಮರಿಯನ್ನು ಕಾಣು
ವಿರಿ; ಇದುವರೆಗೆ ಅದರ ಮೇಲೆ ಯಾರೂ

ಹತ್ತಿಲ್ಲ; ಅದನ್ನು ಬಿಚ್ಚಿ ಹಿಡುಕೊಂಡು ಬನ್ನಿರಿ
3 ಯಾವನಾದರೂ ನಿಮ್ಮನ್ನು—ಏನು ಹೀಗೆ ಮಾಡು
ವದು ಎಂದು ಕೇಳಿದರೆ—ಇದು ಸ್ವಾಮಿಯವರಿಗೆ
ಬೇಕಾಗಿದೆ, ಅವರು ತಡಮಾಡದೆ ತಿರಿಗಿ ಇಲ್ಲಿಗೆ
ಕಳುಹಿಸಿಕೊಡುವರು ಅನ್ನಿರಿ ಎಂದು ಹೇಳಿ ಕಳು
4 ಹಿಸಿದನು. ಆ ಶಿಷ್ಯರು ಹೋಗಿ ಬೀದಿಯಲ್ಲಿ
ಹೊರಗೆ ಬಾಗಲಿನ ಹತ್ತಿರ ಒಂದು ಕತ್ತೇಮರಿ
ಕಟ್ಟಿರುವದನ್ನು ಕಂಡು ಅದನ್ನು ಬಿಚ್ಚಿದರು.
5 ಅಲ್ಲಿ ನಿಂತಿದ್ದವರಲ್ಲಿ ಕೆಲವರು—ಈ ಮರಿಯನ್ನು
ಬಿಚ್ಚಿ ಏನು ಮಾಡುತ್ತೀರಿ? ಎಂದು ಅವರನ್ನು
6 ಕೇಳಿದ್ದಕ್ಕೆ ಯೇಸು ಹೇಳಿದಂತೆಯೇ ಅವರು ಹೇಳಿ
ದಾಗ ಆ ಜನರು ತೆಗೆದುಕೊಂಡುಹೋಗಗೊಡಿಸಿ
7 ದರು. ಶಿಷ್ಯರು ಆ ಮರಿಯನ್ನು ಯೇಸುವಿನ

ಬಳಿಗೆ ತಂದು ತಮ್ಮ ಬಟ್ಟೆಗಳನ್ನು ಅದರ ಮೇಲೆ
ಹಾಕಲು ಆತನು ಅದನ್ನು ಹತ್ತಿ ಕೂತುಕೊಂಡನು.
8 ಆಗ ಅನೇಕರು ತಮ್ಮ ಬಟ್ಟೆಗಳನ್ನು ದಾರಿಯಲ್ಲಿ
ಹಾಸಿದರು. ಬೇರೆ ಕೆಲವರು ತೋಟಗಳಿಂದ
ಚಿಗುರುಗಳನ್ನು ಕೊಯಿದು ತಂದು ಹಾಸಿದರು.
9 ಆತನ ಹಿಂದೆಯೂ ಮುಂದೆಯೂ ಹೋಗುತ್ತಿದ್ದ
ವರು-ಜಯ, ಕರ್ತನ ಹೆಸರಿನಲ್ಲಿ ಬರುವವನಿಗೆ
10 ಆಶೀರ್ವಾದ; ನಮ್ಮ ಪಿತೃವಾದ ದಾವೀದನ ರಾಜ್ಯ
ವು ಬರುತ್ತದೆ, ಅದಕ್ಕೆ ಆಶೀರ್ವಾದ; ಮೇಲಣ
ಲೋಕಗಳಲ್ಲಿ ಜಯ ಎಂದು ಆರ್ಭಟಿಸಿದರು.

11 ತರುವಾಯ ಯೇಸು ಯೆರೂಸಲೇಮನ್ನು
ಸೇರಿ ದೇವಾಲಯಕ್ಕೆ ಹೋಗಿ ಸುತ್ತಲೂ ಎಲ್ಲಾ
ನೋಡಿಕೊಂಡು ಅಷ್ಟರಲ್ಲಿ ಸಂಜೆಯಾದದ್ದರಿಂದ

ಹನ್ನೆರಡು ಮಂದಿ ಶಿಷ್ಯರನ್ನು ಕರಕೊಂಡು
ಬೇಥಾನ್ಯಕ್ಕೆ ಹೊರಟುಹೋದನು.

ಯೇಸುವಿನ ಮಾತಿಗೆ ಅಂಜೂರದ ಮರವು ಒಣಗಿಹೋದದ್ದು;
ದೇವಾಲಯದಲ್ಲಿ ವ್ಯಾಪಾರಮಾಡುವವರನ್ನು ಹೊರಡಿಸಿದ್ದು.
(ಮತ್ತಾ. 21. 12—22; ಲೂಕ 19. 45—48.)

12 ಮರುದಿನ ಅವರು ಬೇಥಾನ್ಯವನ್ನು ಬಿಟ್ಟು
13 ಬರುತ್ತಿರುವಾಗ ಆತನು ಹಸಿದನು. ಮತ್ತು ಎಲೆ
ಬಿಟ್ಟಿದ್ದ ಒಂದು ಅಂಜೂರದ ಮರವನ್ನು ದೂರ
ದಲ್ಲಿ ಕಂಡು ಅದರಲ್ಲಿ ತನಗೇನಾದರೂ ಹಣ್ಣು
ಸಿಕ್ಕೀತೆಂದು ಅಲ್ಲಿಗೆ ಹೋದನು. ಅದರ ಹತ್ತಿ
ರಕ್ಕೆ ಬಂದಾಗ ಅದರಲ್ಲಿ ಬರೀ ಎಲೆಗಳನ್ನೇ
ಹೊರತು ಮತ್ತೇನೂ ಕಾಣಲಿಲ್ಲ; ಅದು ಅಂಜೂ
14 ರದ ಹಣ್ಣಿನ ಕಾಲವಲ್ಲ. ಆಗ ಯೇಸು ಆ

ಮರಕ್ಕೆ–ಇನ್ನು ಮೇಲೆ ಒಬ್ಬರೂ ನಿನ್ನಲ್ಲಿ ಹಣ್ಣ
ನ್ನು ಎಂದೆಂದಿಗೂ ತಿನ್ನದ ಹಾಗಾಗಲಿ ಎಂದು
ಹೇಳಿದನು. ಆತನ ಶಿಷ್ಯರು ಅದನ್ನು ಕೇಳಿದರು.
15 ಅವರು ಯೆರೂಸಲೇಮಿಗೆ ಬಂದಾಗ ಯೇಸು
ದೇವಾಲಯಕ್ಕೆ ಹೋಗಿ ಅದರಲ್ಲಿ ಮಾರುವವ
ರನ್ನೂ ಕೊಳ್ಳುವವರನ್ನೂ ಹೊರಡಿಸಿಬಿಡುವದಕ್ಕೆ
ಪ್ರಾರಂಭಿಸಿ ಚಿನಿವಾರರ ಮೇಜುಗಳನ್ನೂ ಪಾರಿ
ವಾಳ ಮಾರುವವರ ಕಾಲ್ಮಣೆಗಳನ್ನೂ ಕೆಡವಿ
16 ದನು; ಒಬ್ಬನನ್ನಾದರೂ ಸಾಮಾನು ಹೊತ್ತು
ಕೊಂಡು ದೇವಾಲಯದೊಳಗೆ ಹಾದುಹೋಗ
17 ಗೊಡಿಸಲಿಲ್ಲ. ಮತ್ತು ಆತನು ಉಪದೇಶಮಾಡಿ–
ನನ್ನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥ
ನಾಲಯವೆನಿಸಿಕೊಳ್ಳುವದು ಎಂದು ಬರೆದಿದೆ

ಯಲ್ಲಾ? ಆದರೆ ನೀವು ಅದನ್ನು ಕಳ್ಳರ ಗವಿ
18 ಮಾಡಿದ್ದೀರಿ ಎಂದು ಹೇಳಿದನು. ಅದನ್ನು ಮಹಾ
ಯಾಜಕರೂ ಶಾಸ್ತ್ರಿಗಳೂ ಕೇಳಿ ಅವನನ್ನು
ಯಾವ ಉಪಾಯದಿಂದ ಕೊಲ್ಲೋಣ ಎಂದು
ಸಂದರ್ಭನೋಡುತ್ತಿದ್ದರು; ಯಾಕಂದರೆ ಜನ
ರೆಲ್ಲಾ ಆತನ ಉಪದೇಶವನ್ನು ಕೇಳಿ ಅತ್ಯಾಶ್ಚ
ರ್ಯಪಟ್ಟದ್ದರಿಂದ ಅವರು ಆತನಿಗೆ ಹೆದರು
ತ್ತಿದ್ದರು.
19 ಪ್ರತಿಸಾಯಂಕಾಲ ಯೇಸುವೂ ಆತನ ಶಿಷ್ಯ
ರೂ ಪಟ್ಟಣವನ್ನು ಬಿಟ್ಟು ಹೊರಗೆ ಹೋಗುತ್ತಿ
ದ್ದರು.
20 ಬೆಳಿಗ್ಗೆ ಅವರು ಬರುತ್ತಿರುವಾಗ ಆ ಅಂಜೂ
ರದ ಮರವು ಬುಡದಿಂದಲೂ ಒಣಗಿಹೋಗಿರುವ

21 ದನ್ನು ಕಂಡರು. ಆಗ ಪೇತ್ರನು ಹಿಂದಿನ ದಿನದ
ಸಂಗತಿಯನ್ನು ನೆನಸಿಕೊಂಡು ಆತನಿಗೆ—ಗುರು
ವೇ, ಇಗೋ, ನೀನು ಶಾಪಕೊಟ್ಟ ಅಂಜೂರದ
ಮರವು ಒಣಗಿಹೋಗಿದೆ ಎಂದು ಹೇಳಿದ್ದಕ್ಕೆ
22 ಯೇಸು ಹೇಳಿದ್ದೇನಂದರೆ—ನಿಮಗೆ ದೇವರಲ್ಲಿ
23 ನಂಬಿಕೆಯಿರಲಿ. ನಿಮಗೆ ಸತ್ಯವಾಗಿ ಹೇಳುತ್ತೇನೆ,
ಯಾವನಾದರೂ ಈ ಬೆಟ್ಟಕ್ಕೆ—ನೀನು ಕಿತ್ತು
ಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು
ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು
ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿ
24 ದಂತೆಯೇ ಆಗುವದು. ಆದಕಾರಣ ನೀವು
ಪ್ರಾರ್ಥನೆಮಾಡಿ ಏನೇನು ಬೇಡಿಕೊಳ್ಳುತ್ತೀರೋ
ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು

ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ.
25 ಇದಲ್ಲದೆ ನೀವು ನಿಂತುಕೊಂಡು ಪ್ರಾರ್ಥನೆ
ಮಾಡುವಾಗೆಲ್ಲಾ ಯಾರ ಮೇಲೆ ಏನಾದರೂ
ವಿರೋಧವಿದ್ದರೆ ಅದನ್ನು ಅವನಿಗೆ ಕ್ಷಮಿಸಿರಿ;
ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆ
ಯು ಸಹ ನಿಮ್ಮ ತಪ್ಪುಗಳನ್ನು ನಿಮಗೆ ಕ್ಷಮಿಸಿ
ಬಿಡುವನು ಅಂದನು.

ಶಾಸ್ತ್ರಿಗಳು ಯೇಸುವಿನ ಅಧಿಕಾರವನ್ನು ವಿಚಾರಿಸಿದಾಗ ಆತನು ತಕ್ಕ ಉತ್ತರ
ಕೊಟ್ಟು ಅವರು ಮಾಡಿದ ದೈವದ್ರೋಹವನ್ನು ಸಾಮ್ಯದಿಂದ ಸೂಚಿಸಿದ್ದು.
(ಮತ್ತಾ. 21. 23—46; ಲೂಕ 20. 1—19.)

27 ಅವರು ತಿರಿಗಿ ಯೆರೂಸಲೇಮಿಗೆ ಬಂದಾಗ
ಆತನು ದೇವಾಲಯದಲ್ಲಿ ತಿರುಗಾಡುತ್ತಿರಲಾಗಿ
ಮಹಾಯಾಜಕರೂ ಶಾಸ್ತ್ರಿಗಳೂ ಹಿರಿಯರೂ

28 ಆತನ ಬಳಿಗೆ ಬಂದು—ನೀನು ಯಾವ ಅಧಿ
ಕಾರದಿಂದ ಇದನ್ನೆಲ್ಲಾ ಮಾಡುತ್ತೀ? ಇದನ್ನು
ಮಾಡುವದಕ್ಕೆ ಈ ಅಧಿಕಾರವನ್ನು ನಿನಗೆ
ಯಾರು ಕೊಟ್ಟರು ಎಂದು ಆತನನ್ನು ಕೇಳಿದರು.
29 ಯೇಸು ಅವರಿಗೆ – ನಾನು ನಿಮ್ಮನ್ನೊ ಬಂದು
ಮಾತು ಕೇಳುತ್ತೇನೆ, ನನಗೆ ಉತ್ತರ ಹೇಳಿದರೆ
ನಾನು ಸಹ ಯಾವ ಅಧಿಕಾರದಿಂದ ಇದನ್ನು
ಮಾಡುತ್ತೇನೆಂಬದನ್ನು ನಿಮಗೆ ಹೇಳುತ್ತೇನೆ.
30 ದೀಕ್ಷಾಸ್ನಾನಮಾಡಿಸುವ ಅಧಿಕಾರವು ಯೋಹಾನ
ನಿಗೆ ಪರಲೋಕದಿಂದ ಬಂತೋ? ಮನುಷ್ಯರಿಂದ
31 ಬಂತೋ? ಉತ್ತರಕೊಡಿರಿ ಅಂದನು. ಆಗ
ಅವರು – ಪರಲೋಕದಿಂದ ಬಂತೆಂದು ನಾವು
ಹೇಳಿದರೆ ಹಾಗಾದರೆ ನೀವು ಅವನನ್ನು ಯಾಕೆ

32 ನಂಬಲಿಲ್ಲ ಅಂದಾನು; ಮನುಷ್ಯರಿಂದ ಬಂತೆಂದು
ಹೇಳಿದರೆ ಏನಾಗುವದೋ ಎಂಬದಾಗಿ ತಮ್ಮ
ತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಯೋಹಾ
ನನು ಪ್ರವಾದಿಯೆಂದು ಜನರೆಲ್ಲರೂ ಅನುಮಾನ
ವಿಲ್ಲದೆ ತಿಳುಕೊಂಡಿದ್ದದರಿಂದ ಇವರಿಗೆ ಜನರ
33 ಭಯವಿತ್ತು. ಹೀಗಿರಲಾಗಿ ಅವರು—ನಾವರಿ
ಯೆವು ಎಂದು ಯೇಸುವಿಗೆ ಉತ್ತರಕೊಟ್ಟರು.
ಆಗ ಯೇಸು ಅವರಿಗೆ—ಯಾವ ಅಧಿಕಾರದಿಂದ
ಇದನ್ನು ಮಾಡುತ್ತೇನೋ ಅದನ್ನು ನಾನೂ
ನಿಮಗೆ ಹೇಳುವದಿಲ್ಲ ಅಂದನು.

12 ಆಗ ಯೇಸು ಅವರ ಕೂಡ ಸಾಮ್ಯರೂಪವಾಗಿ
ಮಾತಾಡುವದಕ್ಕೆ ತೊಡಗಿ—ಒಬ್ಬ ಮನುಷ್ಯನು
ಒಂದು ದ್ರಾಕ್ಷೆಯ ತೋಟವನ್ನು ಮಾಡಿ ಸುತ್ತಲು

ಬೇಲಿಹಾಕಿಸಿ ದ್ರಾಕ್ಷೆಯ ಆಲೆಗಾಗಿ ಒಂದು ಗುಂಡಿ
ಯನ್ನು ತೆಗಿಸಿ ಹೂಡೆಯನ್ನು ಕಟ್ಟಿಸಿ ಒಕ್ಕಲಿಗರಿಗೆ
ವಾರಕ್ಕೆ ಕೊಟ್ಟು ಬೇರೊಂದು ದೇಶಕ್ಕೆ ಹೋದನು.
2 ಫಲಕಾಲ ಬಂದಾಗ ದ್ರಾಕ್ಷೆಯ ತೋಟದ ಹಣ್ಣಿನ
ಪಾಲನ್ನು ಆ ಒಕ್ಕಲಿಗರಿಂದ ತೆಗೆದುಕೊಂಡು ಬರು
ವದಕ್ಕಾಗಿ ಒಬ್ಬ ಆಳನ್ನು ಅವರ ಬಳಿಗೆ ಕಳುಹಿಸಿ
3 ದನು. ಅವರು ಅವನನ್ನು ಹಿಡುಕೊಂಡು
4 ಹೊಡೆದು ಬರಿಗೈಲಿ ಕಳುಹಿಸಿಬಿಟ್ಟರು. ಆ ದಣಿ
ಯು ತಿರಿಗಿ ಮತ್ತೊಬ್ಬ ಆಳನ್ನು ಅವರ ಬಳಿಗೆ
ಕಳುಹಿಸಲು ಅವನನ್ನು ಅವರು ತಲೆತಲೆಯ
5 ಮೇಲೆ ಹೊಡೆದು ಅಪಮಾನ ಪಡಿಸಿದರು. ಆ
ಮೇಲೆ ಇನ್ನೊಬ್ಬನನ್ನು ಕಳುಹಿಸಲು ಅವನನ್ನು
ಕೊಂದುಹಾಕಿದರು. ಇನ್ನೂ ಅನೇಕರನ್ನು ಕಳು

ಹಿಸಿದನು. ಅವರಲ್ಲಿ ಕೆಲವರನ್ನು ಹೊಡೆದರು,
6 ಕೆಲವರನ್ನು ಕಡಿದುಹಾಕಿದರು. ಅವನಿಗೆ ಇನ್ನೊ
ಬ್ಬನಿದ್ದನು; ಯಾರಂದರೆ ಅವನ ಮುದ್ದು
ಮಗನೇ. ನನ್ನ ಮಗನಿಗಾದರೂ ಮರ್ಯಾದೆ
ತೋರಿಸಿಯಾರೆಂದು ದಣಿಯು ಕಡೆಯಲ್ಲಿ ಅವ
7 ನನ್ನು ಅವರ ಬಳಿಗೆ ಕಳುಹಿಸಿದನು. ಆದರೆ ಆ
ಒಕ್ಕಲಿಗರು–ಇವನೇ ಬಾಧ್ಯಸ್ಥನು; ಬನ್ನಿ ಇವ
ನನ್ನು ಕೊಂದುಹಾಕೋಣ; ಆಗ ಸ್ವಾಸ್ತ್ಯ ನಮ್ಮ
ದಾಗುವದು ಎಂದು ಒಬ್ಬರಸಂಗಡಲೊಬ್ಬರು
8 ಮಾತಾಡಿಕೊಂಡು ಅವನನ್ನು ಹಿಡಿದು ಕೊಂದು
ಹಾಕಿ ದ್ರಾಕ್ಷೆಯ ತೋಟದಿಂದ ಹೊರಕ್ಕೆ ಬಿಸಾಟು
9 ಬಿಟ್ಟರು. ಹಾಗಾದರೆ ದ್ರಾಕ್ಷೆಯ ತೋಟದ ದಣಿ
ಯು ಏನು ಮಾಡುವನು? ಅವನು ಬಂದು ಆ

ಒಕ್ಕಲಿಗರನ್ನು ಸಂಹರಿಸಿ ತನ್ನ ತೋಟವನ್ನು
ಬೇರೆ ಜನರಿಗೆ ಮಾಡುವದಕ್ಕೆ ಕೊಡುವನು.
10-11 ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ
ಮುಖ್ಯವಾದ ಮೂಲೆಗಲ್ಲಾಯಿತು.
ಇದು ಕರ್ತನಿಂದಲೇ ಆಯಿತು;
ನಮಗೆ ಆಶ್ಚರ್ಯವಾಗಿ ತೋರುತ್ತದೆ
ಎಂಬುವ ಶಾಸ್ತ್ರವಚನವನ್ನು ನೀವು ಓದಿಲ್ಲವೇ
12 ಅಂದನು. ಇವನು ತಮ್ಮನ್ನೇ ಕುರಿತು ಈ
ಸಾಮ್ಯವನ್ನು ಹೇಳಿದನು ಎಂದು ಅವರು ತಿಳು
ಕೊಂಡು ಆತನನ್ನು ಹಿಡಿಯುವದಕ್ಕೆ ಸಂದರ್ಭ
ನೋಡುತ್ತಿದ್ದರು. ಆದರೆ ಜನರಿಗೆ ಭಯಪಟ್ಟು
ಆತನನ್ನು ಬಿಟ್ಟುಹೋದರು.

ಬೇರೆ ಬೇರೆ ಪಕ್ಷದವರು ಯೇಸುವನ್ನು ಮಾತಿನಲ್ಲಿ ಸಿಕ್ಕಿಸುವದಕ್ಕೆ ಪ್ರಯತ್ನಮಾಡಿ ಸೋತುಹೋದದ್ದು.

(ಮತ್ತಾ. 22. 15—46; ಲೂಕ 20. 20—44.)

13 ಆ ಮೇಲೆ ಅವರು ಆತನನ್ನು ಮಾತಿನಲ್ಲಿ ಹಿಡಿ
ಯುವದಕ್ಕೆ ಫರಿಸಾಯರಲ್ಲಿಯೂ ಹೆರೋದ್ಯ
ರಲ್ಲಿಯೂ ಕೆಲವರನ್ನು ಆತನ ಬಳಿಗೆ ಕಳುಹಿಸಿ
14 ದರು. ಇವರು ಬಂದು—ಬೋಧಕನೇ, ನೀನು
ಸತ್ಯವಂತನು, ಯಾರಿಗೂ ಹೆದರದವನು; ನೀನು
ಜನರ ಮುಖದಿಟ್ಟಿಗೆ ಮಾತಾಡದೆ ದೇವರ
ಮಾರ್ಗವನ್ನು ಸತ್ಯವಾಗಿ ಬೋಧಿಸುವವನಾ
ಗಿದ್ದೀ ಎಂದು ಬಲ್ಲೆವು. ಕೈಸರನಿಗೆ ತೆರಿಗೆ ಕೊಡು
15 ವದು ಸರಿಯೋ ಸರಿಯಲ್ಲವೋ, ಕೊಡಬೇಕೋ
ಬೇಡವೋ ಎಂದು ಆತನನ್ನು ಕೇಳಿದರು. ಆತನು
ಅವರ ಕಪಟವನ್ನು ತಿಳಿದು—ನನ್ನನ್ನು ಯಾಕೆ

ಪರೀಕ್ಷೆಮಾಡುತ್ತೀರಿ? ನನಗೆ ಒಂದು ಹಣವನ್ನು
ತಂದು ತೋರಿಸಿರಿ ಅನ್ನಲು ಅವರು ತಂದರು.
16 ಆಗ ಆತನು – ಈ ತಲೆಯೂ ಮುದ್ರೆಯೂ
ಯಾರದು ಎಂದು ಕೇಳಿದ್ದಕ್ಕೆ ಅವರು – ಕೈಸರ
17 ನದು ಅಂದರು. ಯೇಸು–ಕೈಸರನದನ್ನು ಕೈಸರ
ನಿಗೆ ಕೊಡಿರಿ; ದೇವರದನ್ನು ದೇವರಿಗೆ ಕೊಡಿರಿ
ಎಂದು ಹೇಳಿದನು. ಅವರು ಆತನ ವಿಷಯದಲ್ಲಿ
ಬಹು ಆಶ್ಚರ್ಯಪಟ್ಟರು.
18 ತರುವಾಯ ಸದ್ದುಕಾಯರು ಆತನ ಬಳಿಗೆ
ಬಂದರು. ಇವರು ಪುನರುತ್ಥಾನವಿಲ್ಲ ಅನ್ನು
19 ವವರು. ಇವರು ಆತನಿಗೆ ಪ್ರಶ್ನೆಮಾಡಿದ್ದೇ
ನಂದರೆ– ಬೋಧಕನೇ, ಅಣ್ಣನಾದವನು ಮಕ್ಕಳಿ
ಲ್ಲದೆ ಹೆಂಡತಿಯನ್ನು ಬಿಟ್ಟು ಸತ್ತರೆ ಆಕೆಯನ್ನು

ಅವನ ತಮ್ಮನು ಮದುವೆಮಾಡಿಕೊಂಡು ತನ್ನ
ಅಣ್ಣನಿಗೆ ಸಂತಾನವನ್ನು ಪಡೆಯಬೇಕೆಂದು
20 ಮೋಶೆಯು ನಮಗೆ ಬರೆದಿಟ್ಟನಷ್ಟೆ. ಏಳು ಮಂದಿ
ಅಣ್ಣತಮ್ಮಂದಿರಿದ್ದರು. ಮೊದಲನೆಯವನು ಹೆಂಡತಿ
ಯನ್ನು ಮಾಡಿಕೊಂಡು ಸಂತಾನವಿಲ್ಲದೆ ಸತ್ತನು.
21 ಎರಡನೆಯವನೂ ಆಕೆಯನ್ನು ಮದುವೆಮಾಡಿ
ಕೊಂಡು ಸಂತಾನವಿಲ್ಲದೆ ಸತ್ತನು. ಅದರಂತೆ
22 ಮೂರನೆಯವನು. ಇದೇ ಪ್ರಕಾರ ಏಳು
ಮಂದಿಯೂ ಸಂತಾನವಿಲ್ಲದೆ ಹೋದರು. ಕಡೆ
23 ಯಲ್ಲಿ ಆ ಸ್ತ್ರೀಯೂ ಸತ್ತಳು. ಪುನರುತ್ಥಾನ
ದಲ್ಲಿ ಆಕೆ ಯಾರ ಹೆಂಡತಿಯಾಗಿರುವಳು? ಆಕೆ
ಯನ್ನು ಏಳು ಮಂದಿಯೂ ಮದುವೆಮಾಡಿ
24 ಕೊಂಡಿದ್ದರಲ್ಲಾ ಅಂದರು. ಯೇಸು ಅವರಿಗೆ—

ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾ
ದರೂ ತಿಳಿಯದಿರುವದರಿಂದಲೇ ತಪ್ಪುವವರಾಗಿ
25 ದ್ದೀರಲ್ಲವೆ. ಸತ್ತವರು ಬದುಕಿ ಎದ್ದಮೇಲೆ
ಮದುವೆಮಾಡಿಕೊಳ್ಳುವದೂ ಇಲ್ಲ, ಮಾಡಿ
ಕೊಡುವದೂ ಇಲ್ಲ; ಪರಲೋಕದಲ್ಲಿರುವ ದೇವ
26 ದೂತರಂತೆ ಇರುತ್ತಾರೆ. ಆದರೆ ಸತ್ತವರು
ಬದುಕಿ ಏಳುತ್ತಾರೆಂಬ ವಿಷಯದಲ್ಲಿ ಹೇಳಬೇಕಾ
ದರೆ–ನಾನು ಅಬ್ರಹಾಮನ ದೇವರು, ಇಸಾಕನ
ದೇವರು, ಯಾಕೋಬನ ದೇವರು ಎಂದು ದೇವರು
ಮೋಶೆಗೆ ನುಡಿದದ್ದನ್ನು ನೀವು ಮೋಶೆಯ ಗ್ರಂಥ
ದಲ್ಲಿ ಪೊದೆಯ ಸಂಗತಿಯಿರುವ ಅಧ್ಯಾಯದಲ್ಲಿ
27 ಓದಲಿಲ್ಲವೇ? ಆತನು ಜೀವಿತರಿಗೆ ದೇವರಾಗಿ
ದ್ದಾನೆ ಹೊರತು ಜೀವವಿಲ್ಲದವರಿಗೆ ಅಲ್ಲ; ನೀವು

ಹಿಡಿದ ಅಭಿಪ್ರಾಯವು ಬಹು ತಪ್ಪಾಗಿದೆ ಎಂದು
ಹೇಳಿದನು.
28 ಶಾಸ್ತ್ರಿಗಳಲ್ಲಿ ಒಬ್ಬನು ಅವರ ತರ್ಕವನ್ನು ಕೇಳಿ
ಯೇಸು ಅವರಿಗೆ ಒಳ್ಳೆಯ ಉತ್ತರ ಕೊಟ್ಟನೆಂದು
ತಿಳಿದು ಹತ್ತಿರಕ್ಕೆ ಬಂದು – ಎಲ್ಲಾ ಆಜ್ಞೆಗಳಲ್ಲಿ
ಮೊದಲನೆಯದು ಯಾವದು ಎಂದು ಆತನನ್ನು
29 ಕೇಳಿದ್ದಕ್ಕೆ ಯೇಸು – ಇಸ್ರಾಯೇಲ್ ಜನವೇ
ಕೇಳು, ನಮ್ಮ ದೇವರಾದ ಕರ್ತನು ಒಬ್ಬನೇ
30 ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ
ಹೃದಯದಿಂದಲೂ ಪೂರ್ಣಪ್ರಾಣದಿಂದಲೂ
ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ
ಪ್ರೀತಿಸಬೇಕು ಎಂಬದೇ ಮೊದಲನೆಯ ಆಜ್ಞೆ;
31 ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸ

ಬೇಕು ಎಂಬದೇ ಎರಡನೆಯ ಆಜ್ಞೆ; ಇವುಗಳಿ
ಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ ಎಂದು ಉತ್ತರ
32 ಕೊಟ್ಟನು. ಆಗ ಆ ಶಾಸ್ತ್ರಿಯು – ಬೋಧಕನೇ,
ಚೆನ್ನಾಗಿ ಹೇಳಿದೆ; ಒಬ್ಬನೇ ಇದ್ದಾನೆ, ಆತನ
ಹೊರತು ಮತ್ತೊಬ್ಬ ದೇವರಿಲ್ಲ ಎಂದು ನೀನು
33 ಹೇಳಿದ್ದು ಸತ್ಯ. ಆತನನ್ನು ಪೂರ್ಣಮನಸ್ಸಿನಿಂದ
ಲೂ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿ
ಯಿಂದಲೂ ಪ್ರೀತಿಸುವದು ಮತ್ತು ತನ್ನನ್ನು
ಪ್ರೀತಿಸಿಕೊಳ್ಳುವಂತೆ ತನ್ನ ನೆರೆಯವನನ್ನು ಪ್ರೀತಿ
ಸುವದು ಇವೆರಡೂ ಎಲ್ಲಾ ಸರ್ವಾಂಗಹೋಮ
ಗಳಿಗಿಂತಲೂ ಎಲ್ಲಾ ಯಜ್ಞಗಳಿಗಿಂತಲೂ ಹೆಚ್ಚಿ
34 ನವು ಅಂದನು. ಅವನು ಬುದ್ಧಿಯಿಂದ ಉತ್ತರ
ಕೊಟ್ಟದ್ದನ್ನು ಯೇಸು ಕಂಡು – ನೀನು ದೇವರ

ರಾಜ್ಯಕ್ಕೆ ದೂರವಾದವನಲ್ಲ ಅಂದನು. ಅಂದಿನಿಂದ
ಆತನನ್ನು ಪ್ರಶ್ನೆಮಾಡುವದಕ್ಕೆ ಯಾರಿಗೂ
ಧೈರ್ಯವಿರಲಿಲ್ಲ.
35 ಯೇಸು ದೇವಾಲಯದಲ್ಲಿ ಉಪದೇಶಮಾಡು
ತ್ತಿರಲಾಗಿ ಪ್ರಶ್ನೆಮಾಡಿ—ಶಾಸ್ತ್ರಿಗಳು ಬರಬೇಕಾದ
ಕ್ರಿಸ್ತನನ್ನು ದಾವೀದನ ಮಗನೆಂದು ಹೇಳುತ್ತಾ
ರಲ್ಲಾ, ಅದು ಹೇಗಾದೀತು?
36 ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದ
ಗಳ ಕೆಳಗೆ ಹಾಕುವ ತನಕ
ನನ್ನ ಬಲಗಡೆಯಲ್ಲಿ ಕೂತುಕೊಂಡಿರು
ಎಂದು
ಕರ್ತನು ನನ್ನ ಒಡೆಯನಿಗೆ ನುಡಿದನು
ಎಂಬದಾಗಿ ದಾವೀದನೇ ಪವಿತ್ರಾತ್ಮನ ಪ್ರೇರಣೆ

37 ಯಿಂದ ಹೇಳಿದನು. ದಾವೀದನೇ ಆತನನ್ನು
ಒಡೆಯನೆಂದು ಹೇಳಿರುವಲ್ಲಿ ಆತನು ಅವನಿಗೆ
ಮಗನಾಗುವದು ಹೇಗೆ? ಎಂದು ಕೇಳಿದನು.

ಯೇಸು ಶಾಸ್ತ್ರಿಗಳ ವಿಷಯದಲ್ಲಿ ಎಚ್ಚರಿಕೆ ಹೇಳಿದ್ದು.
(ಮತ್ತಾ. 23; ಲೂಕ 20. 45—47.)

38 ಸಾಧಾರಣ ಜನರು ಆತನ ಮಾತನ್ನು
ಸಂತೋಷದಿಂದ ಕೇಳುತ್ತಿದ್ದರು. ಆತನು ಉಪ
ದೇಶಮಾಡಿ ಹೇಳಿದ್ದೇನಂದರೆ—ಶಾಸ್ತ್ರಿಗಳ ವಿಷಯ
ದಲ್ಲಿ ಎಚ್ಚರಿಕೆಯಾಗಿರಿ. ನಿಲುವಂಗಿಗಳನ್ನು
39 ತೊಟ್ಟುಕೊಂಡು ತಿರುಗಾಡುವದು, ಅಂಗಡಿಬೀದಿ
ಗಳಲ್ಲಿ ನಮಸ್ಕಾರಗಳು, ಸಭಾಮಂದಿರಗಳಲ್ಲಿ
ಮುಖ್ಯಪೀಠಗಳು, ಔತಣಪ್ರಸ್ತಗಳಲ್ಲಿ ಪ್ರಥಮ
ಸ್ಥಾನಗಳು, ಇವುಗಳಲ್ಲಿಯೇ ಅವರು ಮನಸ್ಸುಳ್ಳ

40 ವರಾಗಿದ್ದಾರೆ. ವಿಧವೆಯರ ಮನೆಗಳನ್ನು ನುಂಗಿ
ನಟನೆಗಾಗಿ ದೇವರಿಗೆ ಉದ್ದವಾದ ಪ್ರಾರ್ಥನೆ
ಗಳನ್ನು ಮಾಡುವವರಾದ ಇವರು ಹೆಚ್ಚಾದ
ದಂಡನೆಯನ್ನು ಹೊಂದುವರು ಅಂದನು.

ದೇವರಿಗೆ ಕಾಣಿಕೆಕೊಡುವವರ ತಾರತಮ್ಯವನ್ನು ಕುರಿತು ಮಾತಾಡಿದ್ದು.
(ಲೂಕ 21. 1—4.)

41 ಯೇಸು ಬೊಕ್ಕಸದ ಮನೆಗೆ ಎದುರಾಗಿ
ಕೂತುಕೊಂಡು ಜನರು ಬೊಕ್ಕಸದಲ್ಲಿ ಹಣ
ಹಾಕುವದನ್ನು ನೋಡುತ್ತಿದ್ದನು. ಅನೇಕ ಮಂದಿ
ಐಶ್ವರ್ಯವಂತರು ಬಹಳ ಬಹಳ ಹಾಕುತ್ತಿರಲು
42 ಒಬ್ಬ ಬಡ ವಿಧವೆಯು ಬಂದು ಎರಡು ಕಾಸು
43 ಅಂದರೆ ಒಂದು ದುಗ್ಗಾಣಿ ಹಾಕಿದಳು. ಆಗ
ಆತನು ತನ್ನ ಶಿಷ್ಯರನ್ನು ಹತ್ತಿರಕ್ಕೆ ಕರೆದು-

ನಿಮಗೆ ನಿಜವಾಗಿ ಹೇಳುತ್ತೇನೆ, ಬೊಕ್ಕಸದಲ್ಲಿ
ಹಾಕಿದವರೆಲ್ಲರಲ್ಲಿ ಈ ಬಡ ವಿಧವೆ ಹೆಚ್ಚು ಹಾಕಿ
44 ದ್ದಾಳೆ. ಹೇಗಂದರೆ ಎಲ್ಲರು ತಮಗೆ ಸಾಕಾಗಿ
ಮಿಕ್ಕದ್ದರಲ್ಲಿ ಹಾಕಿದರು; ಈಕೆಯೋ ತನ್ನ ಬಡ
ತನದಲ್ಲಿಯೂ ತನಗಿದ್ದದ್ದನ್ನೆಲ್ಲಾ ಹಾಕಿದಳು, ತನ್ನ
ಜೀವನವನ್ನೇ ಕೊಟ್ಟುಬಿಟ್ಟಳು ಅಂದನು.

ಯೇಸು ಯೆರೂಸಲೇಮಿನ ನಾಶನವನ್ನೂ ಯುಗದ ಸಮಾಪ್ತಿಯನ್ನೂ
ಮುಂದಾಗಿ ತಿಳಿಸಿದ್ದು.

(ಮತ್ತಾ. 24. ಲೂಕ 21. 5—36.)

13 ಯೇಸು ದೇವಾಲಯವನ್ನು ಬಿಟ್ಟು ಹೋಗು
ತ್ತಿರಲು ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ—
ಗುರುವೇ, ನೋಡು, ಎಂಥಾ ಕಲ್ಲುಗಳು! ಎಂಥಾ
2 ಕಟ್ಟಣಗಳು! ಎಂದು ಹೇಳಿದನು. ಯೇಸು—

ಈ ದೊಡ್ಡ ಕಟ್ಟಣಗಳನ್ನು ನೋಡುತ್ತೀಯಾ?
ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವದಿಲ್ಲ;
ಎಲ್ಲಾ ಕೆಡವಲ್ಪಡುವದು ಅಂದನು.
3 ಬಳಿಕ ಆತನು ಎಣ್ಣೇಮರಗಳ ಗುಡ್ಡದ ಮೇಲೆ
ದೇವಾಲಯಕ್ಕೆ ಎದುರಾಗಿ ಕೂತಿದ್ದಾಗ ಪೇತ್ರ
ಯಾಕೋಬ ಯೋಹಾನ ಅಂದ್ರೆಯ ಇವರು –
4 ಅದು ಯಾವಾಗ ಆಗುವದು? ಅದೆಲ್ಲಾ ನೆರವೇರು
ವದಕ್ಕಿರುವಾಗ ಯಾವ ಸೂಚನೆ ತೋರು
ವದು? ನಮಗೆ ಹೇಳು ಎಂದು ಆತನನ್ನು ಪ್ರತ್ಯೇಕ
5 ವಾಗಿ ಕೇಳಲು ಯೇಸು ಅವರಿಗೆ ಹೇಳಿದ್ದೇ
ನಂದರೆ—ಯಾರಾದರೂ ನಿಮ್ಮನ್ನು ಮೋಸಗೊಳಿ
6 ಸಾರು ನೋಡಿಕೊಳ್ಳಿರಿ. ಅನೇಕರು ಬಂದು
ನನ್ನ ಹೆಸರನ್ನು ಎತ್ತಿಕೊಂಡು – ನಾನು ಕ್ರಿಸ್ತನು,

ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು
7 ಮೋಸಗೊಳಿಸುವರು. ಇದಲ್ಲದೆ ಯುದ್ಧಗಳಾ
ಗುವದನ್ನೂ ಯುದ್ಧವಾಗುವ ಹಾಗಿದೆ ಎಂಬ
ಸುದ್ದಿಗಳನ್ನೂ ನೀವು ಕೇಳುವಾಗ ಕಳವಳಪಡ
ಬೇಡಿರಿ. ಹಾಗಾಗುವದು ಅಗತ್ಯ; ಆದರೂ ಇದು
8 ಇನ್ನೂ ಅಂತ್ಯಕಾಲವಲ್ಲ. ಜನಕ್ಕೆ ವಿರೋಧವಾಗಿ
ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ಏಳು
ವವು; ಮತ್ತು ಭೂಕಂಪಗಳು ಅಲ್ಲಲ್ಲಿ ಆಗುವವು;
ಬರಗಳು ಬರುವವು; ಇವೆಲ್ಲಾ [ನೂತನ ಕಾಲವು
ಹುಟ್ಟುವ] ಪ್ರಸವವೇದನೆಯ ಪ್ರಾರಂಭ.
9 ಆದರೆ ನಿಮ್ಮ ವಿಷಯದಲ್ಲಿ ನೋಡಿಕೊಳ್ಳಿರಿ.
ನಿಮ್ಮನ್ನು ನ್ಯಾಯವಿಚಾರಣೆಯ ಸಭೆಗಳಿಗೆ
ಎಳಕೊಂಡುಹೋಗುವರು; ಸಭಾಮಂದಿರಗಳಲ್ಲಿ

ನಿಮ್ಮನ್ನು ಹೊಡೆಯುವರು; ನನ್ನ ನಿಮಿತ್ತವಾಗಿ
ನಿಮ್ಮನ್ನು ಅಧಿಪತಿಗಳ ಮುಂದೆಯೂ ಅರಸುಗಳ
ಮುಂದೆಯೂ ಸಾಕ್ಷಿಗಳಾಗಿ ನಿಲ್ಲಿಸುವರು. ಹೀಗೆ
10 ಅವರಿಗೆ ಸಾಕ್ಷಿಯಾಗುವದು. ಮೊದಲು ಎಲ್ಲಾ
ಜನಾಂಗಗಳಿಗೆ ಸುವಾರ್ತೆಯು ಸಾರಲ್ಪಡಬೇಕು.
11 ನಿಮ್ಮನ್ನು ಹಿಡುಕೊಂಡುಹೋಗಿ ಒಪ್ಪಿಸುವಾಗ
ಏನು ಹೇಳಬೇಕು ಎಂದು ಮುಂಚಿತವಾಗಿ ಚಿಂತೆ
ಮಾಡಬೇಡಿರಿ; ಆ ಗಳಿಗೆಯಲ್ಲಿ ನಿಮಗೆ ಸೂಚನೆ
ಯಾಗುವಂಥ ಮಾತನ್ನೇ ಆಡಿರಿ; ಮಾತಾಡು
12 ವವರು ನೀವಲ್ಲ, ಪವಿತ್ರಾತ್ಮನೇ. ಇದಲ್ಲದೆ ಅಣ್ಣನು
ತಮ್ಮನನ್ನು ತಂದೆಯು ಮಗನನ್ನು ಮರಣಕ್ಕೆ
ಒಪ್ಪಿಸುವರು. ಮಕ್ಕಳು ಹೆತ್ತವರ ಮೇಲೆ ತಿರುಗಿ
13 ಬಿದ್ದು ಅವರನ್ನು ಕೊಲ್ಲಿಸುವರು. ಮತ್ತು ನನ್ನ

ಹೆಸರಿನ ನಿಮಿತ್ತವಾಗಿ ನಿಮ್ಮನ್ನು ಎಲ್ಲರೂ ಹಗೆ
ಮಾಡುವರು. ಆದರೆ ಕಡೇವರೆಗೂ ತಾಳುವವನು
ರಕ್ಷಣೆ ಹೊಂದುವನು.
14 ಇದಲ್ಲದೆ ಹಾಳುಮಾಡುವ ಅಸಹ್ಯವಸ್ತುವು ನಿಲ್ಲ
ಬಾರದ ಸ್ಥಳದಲ್ಲಿ ನಿಂತಿರುವದನ್ನು ನೀವು ಕಾಣು
ವಾಗ (ಇದನ್ನು ಓದುವವನು ತಿಳುಕೊಳ್ಳಲಿ)
ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿ
15 ಹೋಗಲಿ. ಮಾಳಿಗೆಯ ಮೇಲೆ ಇರುವವನು ತನ್ನ
ಮನೆಯೊಳಗಿಂದ ಏನಾದರೂ ತೆಗೆದುಕೊಳ್ಳು
16 ವದಕ್ಕೆ ಇಳಿಯದೆ ಒಳಕ್ಕೆ ಹೋಗದೆ ಹೊಲದಲ್ಲಿರು
ವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳು
ವದಕ್ಕೆ ಹಿಂತಿರಿಗಿ ಬಾರದೆ ಓಡಿಹೋಗಲಿ.
17 ಆದರೆ ಆ ದಿನಗಳಲ್ಲಿ ಬಸುರಿಯರಿಗೂ ಮೊಲೆ

ಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು
18-19 ಏನು ಹೇಳಲಿ! ಆ ದಿವಸಗಳು ಸಂಕಟದಿವಸ
ಗಳಾಗಿರುವದರಿಂದ ಇದೆಲ್ಲಾ ಚಳಿಗಾಲದಲ್ಲಿ ಆಗ
ಬಾರದೆಂದು ಪ್ರಾರ್ಥನೆಮಾಡಿರಿ; ಅಂಥ ಸಂಕಟವು
ದೇವರು ಮಾಡಿದ ಸೃಷ್ಟಿಮೊದಲುಗೊಂಡು
ಇಂದಿನ ವರೆಗೂ ಆಗಲಿಲ್ಲ; ಇನ್ನು ಮೇಲೆಯೂ
20 ಆಗುವದಿಲ್ಲ. ಕರ್ತನು ಆ ದಿನಗಳನ್ನು ಕಡಿಮೆ
ಮಾಡದಿದ್ದರೆ ಒಂದು ನರಪ್ರಾಣಿಯಾದರೂ
ಉಳಿಯದು; ಆದರೆ ತಾನು ಆದುಕೊಂಡವರಿ
21 ಗೋಸ್ಕರ ಆ ದಿನಗಳನ್ನು ಕಡಿಮೆಮಾಡಿದ್ದಾನೆ. ಆಗ
ಯಾರಾದರೂ ನಿಮಗೆ – ಇಗೋ ಕ್ರಿಸ್ತನು ಇಲ್ಲಿ
ದ್ದಾನೆ; ಅಗೋ ಅಲ್ಲಿದ್ದಾನೆ ಎಂದು ಹೇಳಿದರೆ ನಂಬ
22 ಬೇಡಿರಿ; ಸುಳ್ಳು ಕ್ರಿಸ್ತರೂ ಸುಳ್ಳು ಪ್ರವಾದಿಗಳೂ

ಎದ್ದು ಸಾಧ್ಯವಾದರೆ ದೇವರಾದುಕೊಂಡವರನ್ನು
ಮೋಸಗೊಳಿಸುವದಕ್ಕೋಸ್ಕರ ಸೂಚಕಕಾರ್ಯ
ಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿ
23 ಸುವರು. ನೀವಂತು ನೋಡಿಕೊಳ್ಳಿರಿ; ನಿಮಗೆ
ಎಲ್ಲವನ್ನೂ ಮುಂದಾಗಿ ಹೇಳಿದ್ದೇನೆ.
24 ಇದಲ್ಲದೆ ಆ ದಿನಗಳಲ್ಲಿ ಆ ಸಂಕಟ ತೀರಿದ
ಮೇಲೆ ಸೂರ್ಯನು ಕತ್ತಲಾಗಿ ಹೋಗುವನು;
25 ಚಂದ್ರನು ಬೆಳಕುಕೊಡದೆ ಇರುವನು; ನಕ್ಷತ್ರ
ಗಳು ಆಕಾಶದಿಂದ ಉದುರುತ್ತಿರುವವು; ಆಕಾಶ
26 ದಲ್ಲಿರುವ ಶಕ್ತಿಗಳು ಕದಲುವವು. ಆಗ ಮನುಷ್ಯ
ಕುಮಾರನು ಬಹು ಬಲದಿಂದಲೂ ಮಹಿಮೆ
ಯಿಂದಲೂ ಮೇಘಗಳಲ್ಲಿ ಬರುವದನ್ನು ಕಾಣು
27 ವರು. ಮತ್ತು ಆತನು ತನ್ನ ದೂತರನ್ನು

ಕಳುಹಿಸಿ ತಾನು ಆದುಕೊಂಡವರನ್ನು ಭೂಮಿ
ಯ ಕಟ್ಟಕಡೆಯಿಂದ ಆಕಾಶದ ಕಟ್ಟಕಡೆಯ
ವರೆಗೂ ನಾಲ್ಕೂ ದಿಕ್ಕುಗಳಿಂದ ಒಟ್ಟುಗೂಡಿಸು
ವನು.
28 ಅಂಜೂರದ ಮರದ ದೃಷ್ಟಾಂತದಿಂದ ಬುದ್ಧಿ
ಕಲಿಯಿರಿ; ಅದರ ಕೊಂಬೆ ಇನ್ನೂ ಎಳೇದಾ
ಗಿದ್ದು ಎಲೆ ಬಿಡುವಾಗ ಬೇಸಿಗೆಯು ಹತ್ತರವಾಯಿ
29 ತೆಂದು ತಿಳುಕೊಳ್ಳುತ್ತೀರಲ್ಲಾ. ಹಾಗೆಯೇ ನೀವು
ಸಹ ಇದೆಲ್ಲಾ ಆಗುವದನ್ನು ನೋಡುವಾಗ
ಹತ್ತರವದೆ, ಬಾಗಲಲ್ಲೇ ಅದೆ ಎಂದು ತಿಳು
30 ಕೊಳ್ಳಿರಿ. ಇದೆಲ್ಲಾ ಆಗುವ ತನಕ ಈ ಸಂತತಿ
ಯು ಅಳಿದುಹೋಗುವದೇ ಇಲ್ಲವೆಂದು ನಿಮಗೆ
31 ಸತ್ಯವಾಗಿ ಹೇಳುತ್ತೇನೆ. ಭೂಮ್ಯಾಕಾಶಗಳು

ಅಳಿದುಹೋಗುವವು, ಆದರೆ ನನ್ನ ಮಾತುಗಳು
ಅಳಿದುಹೋಗುವದೇ ಇಲ್ಲ.
32 ಇದಲ್ಲದೆ ಆ ದಿನದ ವಿಷಯವಾಗಲಿ ಆ ಗಳಿಗೆ
ಯ ವಿಷಯವಾಗಲಿ ನನ್ನ ತಂದೆಗೆ ತಿಳಿಯು
ವದೇ ಹೊರತು ಮತ್ತಾರಿಗೂ ತಿಳಿಯದು;
ಪರಲೋಕದಲ್ಲಿರುವ ದೂತರಿಗೂ ತಿಳಿಯದು;
33 ಮಗನಿಗೂ ತಿಳಿಯದು. ಆ ಕಾಲವು ಯಾವಾಗ
ಬರುವದೋ ನಿಮಗೆ ಗೊತ್ತಿಲ್ಲವಾದ್ದರಿಂದ
34 ನೋಡಿಕೊಳ್ಳಿರಿ, ಜಾಗರೂಕರಾಗಿರಿ. ಒಬ್ಬ
ಮನುಷ್ಯನು ತನ್ನ ಮನೆಯನ್ನು ಬಿಟ್ಟು
ಬೇರೊಂದು ದೇಶಕ್ಕೆ ಹೋಗುವಾಗ ತನ್ನ ಆಳು
ಗಳಿಗೆ ಮನೇ ಆಡಳಿತವನ್ನು ಒಪ್ಪಿಸಿಕೊಟ್ಟು
ಒಬ್ಬೊಬ್ಬನಿಗೆ ಅವನವನ ಕೆಲಸವನ್ನು ನೇಮಿಸಿ

ಬಾಗಲುಕಾಯುವವನನ್ನು ಕರೆದು—ನೀನು ಎಚ್ಚರ
ವಾಗಿರಬೇಕೆಂದು ಅಪ್ಪಣೆ ಕೊಡುವ ಪ್ರಕಾರ
35 [ನಾನು ನಿಮಗೆ ಅಪ್ಪಣೆ ಕೊಡುತ್ತೇನೆ]. ಮನೇ
ಯಜಮಾನನು ಸಂಜೆಯಲ್ಲೋ ಸರುಹೊತ್ತಿ
ನಲ್ಲೋ ಕೋಳಿ ಕೂಗುವಾಗಲೋ ಮುಂಜಾನೆ
ಯಲ್ಲೋ ಯಾವಾಗ ಬರುತ್ತಾನೋ ನಿಮಗೆ
36 ಗೊತ್ತಿಲ್ಲದ ಕಾರಣ ಎಚ್ಚರವಾಗಿರಿ; ಅವನು
ಏಕಾಏಕಿ ಬಂದು ನೀವು ನಿದ್ದೆಮಾಡುವದನ್ನು
37 ಕಂಡಾನು. ನಾನು ನಿಮಗೆ ಹೇಳಿದ್ದನ್ನು ಎಲ್ಲರಿಗೂ
ಹೇಳುತ್ತೇನೆ, ಎಚ್ಚರವಾಗಿರಿ ಅಂದನು.

ಅಧಿಕಾರಸ್ಥರು ಯೇಸುವನ್ನು ಕೊಲ್ಲುವದಕ್ಕೆ ಉಪಾಯ ಮಾಡಿದ್ದು;
ಒಬ್ಬ ಸ್ತ್ರೀಯು ಪರಿಮಳತೈಲವನ್ನು ಆತನ ಮೇಲೆ ಹೊಯಿದದ್ದು.
(ಮತ್ತಾ. 26. 1—16; ಲೂಕ 22. 1—6;
ಯೋಹಾ. 11. 47—53; 12. 1—8.)

14 ಪಸ್ಕದ ಮತ್ತು ಹುಳಿಯಿಲ್ಲದ ರೊಟ್ಟಿಯ ಹಬ್ಬ
ಬರುವದಕ್ಕೆ ಇನ್ನೂ ಎರಡು ದಿನಗಳಿದ್ದಾಗ ಮಹಾ
ಯಾಜಕರೂ ಶಾಸ್ತ್ರಿಗಳೂ ಯೇಸುವನ್ನು
ಉಪಾಯದಿಂದ ಹಿಡಿದು ಕೊಲ್ಲುವದಕ್ಕೆ ಮಾರ್ಗ
2 ವನ್ನು ಹುಡುಕುತ್ತಿದ್ದರು. ಯಾಕಂದರೆ – ಹಬ್ಬ
ದಲ್ಲಿ ಹಿಡಿಯಬಾರದು, ನಮ್ಮ ಜನರಲ್ಲಿ ಗದ್ದಲ
ವಾದೀತು ಎಂದು ಮಾತಾಡಿಕೊಂಡರು.
3 ಆತನು ಬೇಥಾನ್ಯದಲ್ಲಿ ಕುಷ್ಠರೋಗಿಯಾದ
ಸೀಮೋನನ ಮನೆಯಲ್ಲಿ ಇದ್ದು ಊಟಕ್ಕೆ ಕೂತಿ
ದ್ದಾಗ ಒಬ್ಬ ಸ್ತ್ರೀಯು ಬಹು ಬೆಲೆಯುಳ್ಳ ಅಚ್ಚ

ಜಟಾಮಾಂಸಿ ತೈಲದ ಭರಣಿಯನ್ನು ತೆಗೆದು
ಕೊಂಡು ಬಂದು ಆ ಭರಣಿಯನ್ನು ಒಡೆದು
ತೈಲವನ್ನು ಆತನ ತಲೆಯ ಮೇಲೆ ಹೊಯಿದಳು.
4 ಆದರೆ ಕೆಲವರು ತಮ್ಮೊಳಗೆ ಕೋಪಗೊಂಡು—
5 ಈ ತೈಲವನ್ನು ನಷ್ಟಮಾಡಿದ್ದೇಕೆ? ಇದನ್ನು
ಮುನ್ನೂರು ಹಣಕ್ಕಿಂತ ಹೆಚ್ಚು ಬೆಲೆಗೆ ಮಾರಿ
ಬಡವರಿಗೆ ಕೊಡಬಹುದಾಗಿತ್ತಲ್ಲಾ ಎಂದು ಹೇಳಿ
6 ಆಕೆಗೆ ಛೀ ಹಾಕಿದರು. ಆದರೆ ಯೇಸು—ಈಕೆ
ಯನ್ನು ಬಿಡಿರಿ. ಈಕೆಗೆ ಯಾಕೆ ತೊಂದರೆ
ಕೊಡುತ್ತೀರಿ? ಈಕೆ ನನಗೆ ಒಳ್ಳೆಯ ಕಾರ್ಯ
7 ವನ್ನು ಮಾಡಿದ್ದಾಳೆ. ಬಡವರು ಯಾವಾಗಲೂ
ನಿಮ್ಮ ಬಳಿಯಲ್ಲಿ ಇರುತ್ತಾರೆ; ನಿಮಗೆ ಮನಸ್ಸು
ಬಂದಾಗ ಅವರಿಗೆ ಉಪಕಾರಮಾಡಬಹುದು;

ಆದರೆ ನಾನು ಯಾವಾಗಲೂ ನಿಮ್ಮ ಬಳಿಯಲ್ಲಿ
8 ಇರುವದಿಲ್ಲ. ಈಕೆಯು ತನ್ನ ಕೈಲಾಗುವಷ್ಟು
ಮಾಡಿದ್ದಾಳೆ; ಈಕೆಯು ಮುಂದಾಗಿ ನನ್ನ ಉತ್ತರ
ಕ್ರಿಯೆಗೋಸ್ಕರ ನನ್ನ ದೇಹಕ್ಕೆ ಈ ತೈಲವನ್ನು
9 ಹಚ್ಚಿದ್ದಾಳೆ. ಸುವಾರ್ತೆಯು ಸರ್ವಲೋಕದಲ್ಲಿ
ಎಲ್ಲೆಲ್ಲಿ ಸಾರಲಾಗುವದೋ ಅಲ್ಲಲ್ಲಿ ಈಕೆ ಮಾಡಿ
ದ್ದನ್ನು ಸಹ ಈಕೆಯ ನೆನಪಿಗಾಗಿ ಹೇಳುವರೆಂದು
ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು.
10 ಆ ಮೇಲೆ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬ
ನಾದ ಇಸ್ಕರಿಯೋತ ಯೂದನು ಯೇಸುವನ್ನು
ಮಹಾಯಾಜಕರಿಗೆ ಹಿಡುಕೊಡಬೇಕೆಂತ ಅವರ
11 ಬಳಿಗೆ ಹೋದನು. ಅವರು ಕೇಳಿ ಸಂತೋಷ
ಪಟ್ಟು – ನಿನಗೆ ಹಣಕೊಡುತ್ತೇವೆಂದು ಮಾತು

ಕೊಟ್ಟರು. ಅವನು ಆತನನ್ನು ಅನುಕೂಲವಾಗಿ
ಹಿಡುಕೊಡುವದು ಹೇಗೆ ಎಂದು ನೋಡುತ್ತಿದ್ದನು.

ಯೇಸು ತನ್ನ ಶಿಷ್ಯರ ಸಂಗಡ ಕಡೇ ಭೋಜನವನ್ನು ಮಾಡಿದ್ದು.
(ಮತ್ತಾ. 26. 17—29; ಲೂಕ 22. 7—23;
ಯೋಹಾನ 13. 21—39.)

12 ಹುಳಿಯಿಲ್ಲದ ರೊಟ್ಟಿಯ ಹಬ್ಬದ ಮೊದಲನೆಯ
ದಿವಸ, ಅಂದರೆ ಪಸ್ಕದ ಕುರಿಮರಿಯನ್ನು
ಕೊಯ್ಯುವ ದಿವಸ, ಆತನ ಶಿಷ್ಯರು—ನೀನು
ಪಸ್ಕದ ಊಟ ಮಾಡುವಂತೆ ನಾವು ಎಲ್ಲಿ ಹೋಗಿ
ಸಿದ್ಧಮಾಡಬೇಕನ್ನುತ್ತೀ ಎಂದು ಆತನನ್ನು
13 ಕೇಳಲು ಆತನು ತನ್ನ ಶಿಷ್ಯರಲ್ಲಿ ಇಬ್ಬರನ್ನು
ಕರೆದು—ನೀವು ಪಟ್ಟಣದೊಳಕ್ಕೆ ಹೋಗಿರಿ; ಅಲ್ಲಿ
ಒಬ್ಬ ಮನುಷ್ಯನು ತುಂಬಿದ ಕೊಡವನ್ನು ಹೊತ್ತು

ಕೊಂಡು ನಿಮ್ಮೆದುರಿಗೆ ಬರುವನು; ನೀವು ಅವನ
14 ಹಿಂದೆ ಹೋಗಿರಿ; ಅವನು ಯಾವ ಮನೆಗೆ
ಹೋಗುವನೋ ಆ ಮನೆಯ ಯಜಮಾನನಿಗೆ -
ನಮ್ಮ ಬೋಧಕನು ತನ್ನ ಶಿಷ್ಯರ ಸಂಗಡ ಪಸ್ಕದ
ಊಟವನ್ನು ಮಾಡುವದಕ್ಕೆ ತನಗೆ ಭೋಜನಶಾಲೆ
ಎಲ್ಲಿ ಎಂದು ಕೇಳುತ್ತಾನೆ ಎಂಬದಾಗಿ ಹೇಳಿರಿ.
15 ಅವನು ತಕ್ಕ ಸಾಮಾನೆಲ್ಲಾ ಸಿದ್ಧವಾಗಿ ಇಟ್ಟಿರುವ
ಮೇಲಂತಸ್ತಿನ ದೊಡ್ಡ ಕೊಠಡಿಯನ್ನು ನಿಮಗೆ
ತೋರಿಸುವನು; ಅಲ್ಲಿ ನಮಗೆ ಸಿದ್ಧಮಾಡಿರಿ
ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು.
16 ಶಿಷ್ಯರು ಹೊರಟು ಪಟ್ಟಣಕ್ಕೆ ಹೋಗಿ ಆತನು
ತಮಗೆ ಹೇಳಿದಂತೆ ಕಂಡು ಪಸ್ಕಕ್ಕೆ ಸೌರಿಸಿದರು.
17 ಸಂಜೆಯಾದಾಗ ಆತನು ಹನ್ನೆರಡು ಮಂದಿ

18 ಶಿಷ್ಯರ ಸಂಗಡ ಬಂದನು. ಅವರು ಕೂತು
ಕೊಂಡು ಊಟಮಾಡುತ್ತಿರುವಾಗ ಯೇಸು–
ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವನು,
ಅವನು ನನ್ನ ಸಂಗಡ ಊಟಮಾಡುವವನೇ
ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು.
19 ಆಗ ಅವರು ದುಃಖಿತರಾಗಿ–ನಾನಲ್ಲವಲ್ಲಾ, ನಾನ
ಲ್ಲವಲ್ಲಾ ಎಂದು ಒಬ್ಬೊಬ್ಬರೂ ಆತನನ್ನು ಕೇಳ
20 ತೊಡಗಿದರು. ಆತನು ಅವರಿಗೆ–ಅವನು ನನ್ನ
ಹನ್ನೆರಡು ಮಂದಿಯಲ್ಲಿ ಒಬ್ಬನು, ನನ್ನ ಸಂಗಡ
21 ಬಟ್ಟಲಲ್ಲಿ ಕೈ ಅದ್ದುವವನೇ. ಮನುಷ್ಯಕುಮಾ
ರನು ಹೊರಟುಹೋಗುತ್ತಾನೆ ಸರಿ; ಹಾಗೆ ಆತನ
ವಿಷಯವಾಗಿ ಬರೆದದೆಯಲ್ಲಾ. ಆದರೆ ಯಾವ
ನು ಮನುಷ್ಯಕುಮಾರನನ್ನು ಹಿಡುಕೊಡುವನೋ

ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯ
ನು ಹುಟ್ಟದಿದ್ದರೆ ಅವನಿಗೆ ಒಳ್ಳೇದಾಗಿತ್ತು ಎಂದು
ಹೇಳಿದನು.
22 ಅವರು ಊಟಮಾಡುತ್ತಿರುವಾಗ ಆತನು
ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರ
ಮಾಡಿ ಮುರಿದು ಅವರಿಗೆ ಕೊಟ್ಟು—ತಕ್ಕೊಳ್ಳಿರಿ;
23 ಇದು ನನ್ನ ದೇಹ ಅಂದನು. ಆ ಮೇಲೆ ಪಾತ್ರೆ
ಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ
ಕೊಟ್ಟನು; ಅವರೆಲ್ಲರೂ ಅದರಲ್ಲಿ ಕುಡಿದರು.
24 ಮತ್ತು ಆತನು ಅವರಿಗೆ—ಇದು ನನ್ನ ರಕ್ತ, ಇದು
ಒಡಂಬಡಿಕೆಯ ರಕ್ತ; ಇದು ಬಹು ಜನರಿಗೋ
25 ಸ್ಕರ ಸುರಿಸಲ್ಪಡುವ ರಕ್ತ. ನಿಮಗೆ ಸತ್ಯವಾಗಿ
ಹೇಳುತ್ತೇನೆ, ನಾನು ದೇವರ ರಾಜ್ಯದಲ್ಲಿ ದ್ರಾಕ್ಷಾ

ರಸವನ್ನು ಹೊಸದಾಗಿ ಕುಡಿಯುವ ದಿನದ
ವರೆಗೂ ಅದನ್ನು ಇನ್ನು ಕುಡಿಯುವದೇ ಇಲ್ಲ
ಅಂದನು.

ಯೇಸು ಗೆತ್ಸೇಮನೆ ತೋಟಕ್ಕೆ ಹೋಗಿ ಪ್ರಾರ್ಥಿಸಿದ್ದು;
ಯೂದನು ಆತನನ್ನು ಶತ್ರುಗಳಿಗೆ ಹಿಡುಕೊಟ್ಟದ್ದು.
(ಮತ್ತಾ. 26. 30—56; ಲೂಕ 22. 31—53;
ಯೋಹಾ. 13. 36—38; 18. 1—11.)

26 ಬಳಿಕ ಅವರು ಕೀರ್ತನೆಹಾಡಿ ಎಣ್ಣೇಮರಗಳ
27 ಗುಡ್ಡಕ್ಕೆ ಹೊರಟುಹೋದರು. ಆಗ ಯೇಸು
ಅವರಿಗೆ—ನೀವೆಲ್ಲರೂ ದಿಗಿಲುಪಟ್ಟು ಹಿಂಜರಿಯು
ವಿರಿ. ಕುರುಬನನ್ನು ಹೊಡೆಯುವೆನು, ಕುರಿ
ಗಳು ಚದರಿಹೋಗುವವು ಎಂದು ಬರೆದದೆ
28 ಯಲ್ಲಾ. ಆದಾಗ್ಯೂ ನಾನು ಜೀವಿತನಾಗಿ ಎದ್ದ

ಮೇಲೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗು
29 ವೆನು ಎಂದು ಹೇಳಿದನು. ಆದರೆ ಪೇತ್ರನು ಆತ
ನಿಗೆ–ಎಲ್ಲರೂ ದಿಗಿಲುಪಟ್ಟು ಹಿಂಜರಿದರೂ ನಾನು
30 ಹಿಂಜರಿಯುವದಿಲ್ಲ ಎಂದು ಹೇಳಲು ಯೇಸು–
ನಿನಗೆ ಸತ್ಯವಾಗಿ ಹೇಳುತ್ತೇನೆ, ಈ ಹೊತ್ತು ಈ
ರಾತ್ರಿಯಲ್ಲಿಯೇ ಕೋಳಿ ಎರಡು ಸಾರಿ ಕೂಗು
ವದಕ್ಕಿಂತ ಮುಂಚೆ ನೀನು ನನ್ನ ವಿಷಯದಲ್ಲಿ–
ಅವನನ್ನು ಅರಿಯೆನೆಂಬದಾಗಿ ಮೂರು ಸಾರಿ
31 ಹೇಳುವಿ ಅಂದನು. ಆದರೆ ಅವನು–ನಾನು ನಿನ್ನ
ಸಂಗಡ ಸಾಯಬೇಕಾದರೂ ನಿನ್ನನ್ನು ಅರಿಯೆ
ನೆಂಬದಾಗಿ ಹೇಳುವದೇ ಇಲ್ಲವೆಂದು ಬಹು ಖಂಡಿತ
ವಾಗಿ ಮಾತಾಡಿದನು. ಅದರಂತೆ ಅವರೆಲ್ಲರೂ
ಹೇಳಿದರು.

32 ತರುವಾಯ ಅವರು ಗೆತ್ಸೇಮನೆ ಎಂಬ ತೋಟ
ಕ್ಕೆ ಬಂದರು. ಆತನು ತನ್ನ ಶಿಷ್ಯರಿಗೆ—ಇಲ್ಲೇ
ಕೂತುಕೊಳ್ಳಿರಿ, ನಾನು ಪ್ರಾರ್ಥನೆಮಾಡಿ ಬರು
ತ್ತೇನೆ ಎಂದು ಹೇಳಿ ಪೇತ್ರ ಯಾಕೋಬ
ಯೋಹಾನರನ್ನು ತನ್ನ ಜೊತೆಯಲ್ಲಿ ಕರಕೊಂಡು
33 ಹೋಗಿ ಬೆಚ್ಚಿಬೆರಗಾಗಿ ಮನಗುಂದಿದವನಾದನು.
34 ಮತ್ತು ಅವರಿಗೆ—ನನ್ನ ಪ್ರಾಣವು ಸಾಯುವಷ್ಟು
ದುಃಖಕ್ಕೆ ಒಳಗಾಗಿದೆ. ನೀವು ಇಲ್ಲೇ ಇದ್ದು ಎಚ್ಚರ
ವಾಗಿರ್ರಿ ಎಂದು ಹೇಳಿ ಸ್ವಲ್ಪ ಮುಂದೆ ಹೋಗಿ
35 ನೆಲದ ಮೇಲೆ ಅಡ್ಡಬಿದ್ದು ಸಾಧ್ಯವಾದರೆ ಆ ಗಳಿಗೆ
ತನ್ನನ್ನು ಬಿಟ್ಟುಹೋಗುವಂತೆ ದೇವರನ್ನು ಪ್ರಾ
36 ರ್ಥಿಸಿ—ಅಪ್ಪಾ, ತಂದೆಯೇ, ನಿನಗೆ ಎಲ್ಲವೂ
ಸಾಧ್ಯ; ಈ ಪಾತ್ರೆಯನ್ನು ನನ್ನಿಂದ ತೊಲಗಿಸು;

ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆ
37 ಯೇ ಆಗಲಿ ಅಂದನು. ಆ ಮೇಲೆ ಆತನು
ಬಂದು ಅವರು ನಿದ್ದೆಮಾಡುವದನ್ನು ಕಂಡು
ಪೇತ್ರನಿಗೆ—ಸೀಮೋನನೇ, ನಿದ್ದೆಮಾಡುತ್ತೀಯಾ?
ಒಂದು ಗಳಿಗೆಯಾದರೂ ಎಚ್ಚರವಾಗಿರಲಾರೆ
38 ಯಾ? ಶೋಧನೆಗೆ ಒಳಗಾಗದಂತೆ ಎಚ್ಚರ
ವಾಗಿದ್ದು ಪ್ರಾರ್ಥಿಸಿರಿ; ಮನಸ್ಸು ಸಿದ್ಧವಾಗಿದೆ
ಸರಿ, ಆದರೆ ದೇಹಕ್ಕೆ ಬಲಸಾಲದು ಎಂದು ಹೇಳಿ
39 ದನು. ಆ ಮೇಲೆ ತಿರಿಗಿ ಹೋಗಿ ಅದೇ ಮಾತ
40 ನ್ನು ಹೇಳುತ್ತಾ ಪ್ರಾರ್ಥಿಸಿದನು. ತಿರಿಗಿ ಬಂದಾಗ
ಅವರು ನಿದ್ದೆಮಾಡುವದನ್ನು ಕಂಡನು; ಅವರ
ಕಣ್ಣುಗಳು ಬಹು ಭಾರವಾಗಿದ್ದವು; ಮತ್ತು
ಆತನು ಕೇಳಿದ್ದಕ್ಕೆ ಏನು ಉತ್ತರ ಕೊಡಬೇಕೋ

41 ಅವರಿಗೆ ತಿಳಿಯಲಿಲ್ಲ. ಆತನು ಮೂರನೆಯ
ಸಾರಿ ಹೋಗಿ ಬಂದು ಅವರಿಗೆ—ನೀವು ಇನ್ನೂ
42 ನಿದ್ದೆಮಾಡಿ ದಣಿವಾರಿಸಿಕೊಳ್ಳಿರಿ; ಸಾಕು; ಆ
ಗಳಿಗೆ ಬಂತು; ಇಗೋ, ಮನುಷ್ಯಕುಮಾರನು
ದುರ್ಜನರ ಕೈಗೆ ಒಪ್ಪಿಸಲ್ಪಡುತ್ತಾನೆ. ಏಳಿರಿ,
ಹೋಗೋಣ; ನನ್ನನ್ನು ಹಿಡುಕೊಡುವವನು
ಹತ್ತಿರಕ್ಕೆ ಬಂದಿದ್ದಾನೆ ನೋಡಿರಿ ಎಂದು ಹೇಳಿದನು.
43 ಆತನು ಇನ್ನೂ ಮಾತಾಡುತ್ತಿರುವಾಗಲೇ
ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಯೂದ
ನು ಬಂದನು. ಮಹಾಯಾಜಕರು ಶಾಸ್ತ್ರಿಗಳು
ಹಿರಿಯರು ಇವರ ಕಡೆಯಿಂದ ಒಂದು ಗುಂಪು
ಕತ್ತಿದೊಣ್ಣೆಗಳನ್ನು ಹಿಡುಕೊಂಡು ಅವನ
44 ಸಂಗಡ ಬಂತು; ಇದಲ್ಲದೆ ಆತನನ್ನು ಹಿಡು

ಕೊಡುವವನು ಅವರಿಗೆ—ನಾನು ಯಾರಿಗೆ ಮುದ್ದಿ
ಡುತ್ತೇನೋ ಅವನೇ ಆತನು; ಅವನನ್ನು ಹಿಡಿದು
ಭದ್ರವಾಗಿ ತೆಗೆದುಕೊಂಡುಹೋಗಿರಿ ಎಂದು
45 ಗುರುತು ಹೇಳಿಕೊಟ್ಟಿದನು. ಅಲ್ಲಿಗೆ ಬಂದ
ಕೂಡಲೆ ಅವನು ಯೇಸುವಿನ ಬಳಿಗೆ ಹೋಗಿ—
ಗುರುವೇ ಎಂದು ಹೇಳಿ ಆತನಿಗೆ ಮುದ್ದಿಡಲು
46 ಅವರು ಆತನ ಮೇಲೆ ಕೈಹಾಕಿ ಆತನನ್ನು ಹಿಡಿ
47 ದರು. ಆದರೆ ಹತ್ತರ ನಿಂತಿದ್ದವರಲ್ಲಿ ಒಬ್ಬನು
ತನ್ನ ಕತ್ತಿಯನ್ನು ಹಿರಿದು ಮಹಾಯಾಜಕನ
ಆಳನ್ನು ಹೊಡೆದು ಅವನ ಕಿವಿಯನ್ನು ಕಡಿದು
48 ಹಾಕಿದನು. ಅವರು ಯೇಸುವನ್ನು ಹಿಡಿದಾಗ
ಆತನು ಅವರಿಗೆ—ಕಳ್ಳನನ್ನು ಹಿಡಿಯುವದಕ್ಕೆ
ಬಂದಂತೆ ಕತ್ತಿಗಳನ್ನೂ ದೊಣ್ಣೆಗಳನ್ನೂ ತೆಗೆದು

ಕೊಂಡು ನನ್ನನ್ನು ಹಿಡಿಯುವದಕ್ಕೆ ಬಂದಿರಾ?
49 ನಾನು ದಿನಾಲು ನಿಮ್ಮ ಸಂಗಡ ಇದ್ದು ದೇವಾಲಯ
ದಲ್ಲಿ ಬೋಧಿಸುತ್ತಿದ್ದಾಗ ನೀವು ನನ್ನನ್ನು ಹಿಡಿಯ
ಲಿಲ್ಲ. ಆದರೆ ಶಾಸ್ತ್ರವಚನಗಳು ನೆರವೇರುವಂತೆ
ಇದೆಲ್ಲಾ ಆಯಿತು ಎಂದು ಉತ್ತರಕೊಟ್ಟನು.
50 ಆಗ ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿ
ಹೋದರು.
51 ಒಬ್ಬಾನೊಬ್ಬ ಯೌವನಸ್ಥನು ಬರೀ ಮೈಮೇಲೆ
ನಾರುಮಡಿಯನ್ನು ಹೊದ್ದವನಾಗಿ ಆತನ ಹಿಂದೆ
52 ಜನರ ಕೂಡ ಬರುತ್ತಿದ್ದನು. ಅವರು ಅವನನ್ನು
ಹಿಡಿಯಲಾಗಿ ಅವನು ಆ ನಾರುಮಡಿಯನ್ನು
ಬಿಟ್ಟು ಬರೀ ಮೈಲಿ ಓಡಿಹೋದನು.

ಹಿರೀಸಭೆಯವರು ಯೇಸುವನ್ನು ಮರಣದಂಡನೆಗೆ ತಕ್ಕವನೆಂದು ತೀರ್ಪುಮಾಡಿ
ದೇಶಾಧಿಪತಿಯ ಬಳಿಗೆ ತೆಗೆದುಕೊಂಡು ಹೋದದ್ದು; ಪೇತ್ರನು ಯೇಸುವನ್ನು
ನಾನರಿಯೆನೆಂದು ಹೇಳಿದ್ದು.

(ಮತ್ತಾ. 26. 57—75; ಲೂಕ 22. 54—71;
ಯೋಹಾ. 18. 12—27.)

53 ಅಷ್ಟರಲ್ಲಿ ಅವರು ಯೇಸುವನ್ನು ಮಹಾ
ಯಾಜಕನ ಬಳಿಗೆ ತೆಗೆದುಕೊಂಡು ಹೋದರು.
ಇವನ ಬಳಿಗೆ ಮಹಾಯಾಜಕರು ಹಿರಿಯರು
54 ಶಾಸ್ತ್ರಿಗಳು ಇವರೆಲ್ಲರೂ ಕೂಡಿಬಂದರು. ಮತ್ತು
ಪೇತ್ರನು ದೂರದಿಂದ ಆತನ ಹಿಂದೆ ಹೋಗುತ್ತಾ
ಮಹಾಯಾಜಕನ ಮಠದ ಅಂಗಳದೊಳಗೂ
ಬಂದು ಓಲೇಕಾರರ ಸಂಗಡ ಬೆಂಕಿಯ ಮುಂದೆ
ಕೂತುಕೊಂಡು ಚಳಿಕಾಯಿಸಿಕೊಳ್ಳುತ್ತಿದ್ದನು.
55 ಆಗ ಮಹಾಯಾಜಕರೂ ಹಿರೀಸಭೆಯವರೆಲ್ಲರೂ

ಯೇಸುವನ್ನು ಕೊಲ್ಲಿಸಬೇಕೆಂದು ಆತನ ಮೇಲೆ
ಸಾಕ್ಷಿಯನ್ನು ಹುಡುಕಿದರು; ಆದರೆ ಏನೂ ಸಿಕ್ಕ
56 ಲಿಲ್ಲ. ಬಹುಮಂದಿ ಬಂದು ಆತನ ಮೇಲೆ ಸುಳ್ಳು
ಸಾಕ್ಷಿ ಹೇಳಿದರೂ ಅವರ ಸಾಕ್ಷಿ ಒಂದಕ್ಕೊಂದು
57-58 ಸರಿಬೀಳಲಿಲ್ಲ. ತರುವಾಯ ಕೆಲವರು ಎದ್ದು
ನಿಂತು—ಕೈಯಿಂದ ಕಟ್ಟಿರುವ ಈ ದೇವಾಲಯ
ವನ್ನು ನಾನು ಕೆಡವಿಬಿಟ್ಟು ಕೈಯಿಂದ ಕಟ್ಟದಿರುವ
ಮತ್ತೊಂದನ್ನು ಮೂರು ದಿನಗಳಲ್ಲಿ ಕಟ್ಟುವೆನು
ಎಂದು ಇವನು ಹೇಳಿದ್ದನ್ನು ನಾವು ಕೇಳಿದ್ದೇವೆ
ಎಂಬದಾಗಿ ಆತನ ಮೇಲೆ ಸುಳ್ಳುಸಾಕ್ಷಿ ಹೇಳಿದರು.
59 ಹೀಗೆ ಹೇಳಿದರೂ ಅವರ ಸಾಕ್ಷಿ ಒಂದಕ್ಕೊಂದು
60 ಸರಿಬೀಳಲಿಲ್ಲ. ಆಗ ಮಹಾಯಾಜಕನು ಎದ್ದು
ನಡುವೆ ನಿಂತು — ನೀನೇನೂ ಉತ್ತರಹೇಳುವದಿಲ್ಲ

ವೋ? ಇವರು ನಿನ್ನ ಮೇಲೆ ಹೇಳುವ ಈ ಸಾಕ್ಷಿ
61 ಏನು? ಎಂದು ಯೇಸುವನ್ನು ಪ್ರಶ್ನಿಸಿದನು. ಆದರೆ
ಆತನು ಸುಮ್ಮನಿದ್ದು ಏನೂ ಉತ್ತರ ಹೇಳಲಿಲ್ಲ.
ತಿರಿಗಿ ಮಹಾಯಾಜಕನು – ಭಗವಂತನ ಕುಮಾರ
ನಾದ ಕ್ರಿಸ್ತನೋ ನೀನು? ಎಂದು ಆತನನ್ನು ಕೇಳ
62 ಲಾಗಿ ಯೇಸು – ನಾನೇ, ಇದಲ್ಲದೆ ಮನುಷ್ಯ
ಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನ
ನಾಗಿರುವದನ್ನೂ ಆಕಾಶದ ಮೇಘಗಳೊಂದಿಗೆ
63 ಬರುವದನ್ನೂ ನೋಡುವಿರಿ ಅಂದನು. ಇದನ್ನು
ಕೇಳಿ ಮಹಾಯಾಜಕನು ತನ್ನ ಅಂಗಿಗಳನ್ನು ಹರ
ಕೊಂಡು – ನಮಗೆ ಸಾಕ್ಷಿಗಳು ಇನ್ನು ಯಾತಕ್ಕೆ
64 ಬೇಕು? ಇವನು ಮಾಡಿದ ದೂಷಣೆಯನ್ನು ಕೇಳಿ
ದಿರಲ್ಲಾ; ನಿಮಗೆ ಹೇಗೆ ಕಾಣುತ್ತದೆ ಅನ್ನಲು

ಅವರೆಲ್ಲರು—ಇವನು ಮರಣದಂಡನೆ ಹೊಂದ
65 ತಕ್ಕವನು ಎಂದು ತೀರ್ಪುಮಾಡಿದರು. ಆ ಮೇಲೆ
ಕೆಲವರು ಆತನನ್ನು ಉಗುಳಿ ಆತನ ಮುಖಕ್ಕೆ
ಮುಸುಕುಹಾಕಿ ಗುದ್ದಿ—ಪ್ರವಾದನೆ ಹೇಳು ಅನ್ನು
ತ್ತಿದ್ದರು. ಮತ್ತು ಓಲೇಕಾರರು ಆತನ ಕೆನ್ನೆಗೆ
ಏಟು ಹಾಕುತ್ತಾ ತಮ್ಮ ವಶಕ್ಕೆ ತೆಗೆದುಕೊಂಡರು.
66 ಇತ್ತಲಾಗಿ ಪೇತ್ರನು ಕೆಳಗೆ ಅಂಗಳದಲ್ಲಿ ಇದ್ದಾಗ
ಮಹಾಯಾಜಕನ ದಾಸಿಯರಲ್ಲಿ ಒಬ್ಬಳು ಬಂದು
ಅವನು ಚಳಿಕಾಯಿಸಿಕೊಳ್ಳುತ್ತಿರುವದನ್ನು ಕಂಡು
67 ಅವನನ್ನು ನೋಡಿ—ನೀನು ಸಹ ಆ ನಜರೇತಿನವ
ನಾದ ಯೇಸುವಿನ ಕೂಡ ಇದ್ದವನು ಅಂದಳು.
68 ಅವನು—ಅಲ್ಲ; ನೀನು ಏನನ್ನುತ್ತೀಯೋ ನನಗೆ
ಗೊತ್ತಿಲ್ಲ, ತಿಳಿಯುವದಿಲ್ಲ ಎಂದು ಹೇಳಿ ಹೊರಂಗ

69 ಳಕ್ಕೆ ಹೋದನು. ಅಲ್ಲಿ ದಾಸಿಯು ಅವನನ್ನು
ಕಂಡು ಹತ್ತರದಲ್ಲಿ ನಿಂತಿದ್ದವರಿಗೆ–ಇವನೂ ಅವ
ರಲ್ಲಿ ಒಬ್ಬನು ಎಂದು ತಿರಿಗಿ ಹೇಳುವದಕ್ಕೆ ತೊಡಗಿ
70 ದಳು. ಅವನು ತಿರಿಗಿ ಅಲ್ಲ ಅಂದನು. ಸ್ವಲ್ಪ
ಹೊತ್ತಿನ ಮೇಲೆ ಅಲ್ಲಿ ನಿಂತವರು ಪೇತ್ರನಿಗೆ–
ನಿಶ್ಚಯವಾಗಿ ನೀನು ಅವರಲ್ಲಿ ಒಬ್ಬನು; ನೀನು
ಗಲಿಲಾಯದವನಷ್ಟೆ ಎಂದು ತಿರಿಗಿ ಹೇಳಿದರು.
71 ಆದರೆ ಅವನು–ನೀವು ಹೇಳುವ ಆ ಮನುಷ್ಯನನ್ನು
ನಾನರಿಯೆನು ಎಂದು ಹೇಳಿ ಶಪಿಸಿಕೊಳ್ಳುವದಕ್ಕೂ
ಆಣೆಯಿಟ್ಟುಕೊಳ್ಳುವದಕ್ಕೂ ಪ್ರಾರಂಭಿಸಿದನು.
ಕೂಡಲೆ ಕೋಳಿ ಎರಡನೆಯ ಸಾರಿ ಕೂಗಿತು.
72 ಆಗ ಪೇತ್ರನು–ಕೋಳಿ ಎರಡು ಸಾರಿ ಕೂಗುವದ
ಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯ

ವಾಗಿ ಅವನನ್ನು ಅರಿಯೆನೆಂಬದಾಗಿ ಹೇಳುವಿ
ಎಂದು ಯೇಸು ತನಗೆ ಹೇಳಿದ ಮಾತನ್ನು ನೆನಪಿಗೆ
ತಂದುಕೊಂಡು ಆ ವಿಷಯದಲ್ಲಿ ಯೋಚಿಸಿ
ಅತ್ತನು.

ಪಿಲಾತನು ಯೇಸುವನ್ನು ವಿಚಾರಿಸಿ ಆತನಲ್ಲಿ ಅಪರಾಧವಿಲ್ಲವೆಂದು ಕಂಡರೂ
ಆತನನ್ನು ಮರಣದಂಡನೆಗೆ ಒಪ್ಪಿಸಿದ್ದು.
(ಮತ್ತಾ. 27. 1, 2, 11—26; ಲೂಕ 23. 1—25;
ಯೋಹಾ. 18. 28—19. 16.)

15 ಬೆಳಗಾದ ಕೂಡಲೆ ಮಹಾಯಾಜಕರೂ ಹಿರಿ
ಯರೂ ಶಾಸ್ತ್ರಿಗಳೂ ಹಿರೀಸಭೆಯವರೆಲ್ಲರೂ
ಒಟ್ಟುಗೂಡಿ ಆಲೋಚನೆ ಮಾಡಿಕೊಂಡು ಯೇಸು
ವನ್ನು ಕಟ್ಟಿಸಿ ತೆಗೆದುಕೊಂಡು ಹೋಗಿ ಪಿಲಾತನಿಗೆ
2 ಒಪ್ಪಿಸಿದರು. ಪಿಲಾತನು ಆತನನ್ನು—ನೀನು

ಯೆಹೂದ್ಯರ ಅರಸನು ಹೌದೋ ಎಂದು ಕೇಳಲು
ಆತನು – ನೀನೇ ಹೇಳಿದ್ದೀ ಎಂದು ಉತ್ತರ
3-4 ಕೊಟ್ಟನು. ಮಹಾಯಾಜಕರು ಆತನ ಮೇಲೆ
ತುಂಬಾ ದೂರು ಹೇಳುತ್ತಿದ್ದರು. ಆಗ ಪಿಲಾತನು
ಇನ್ನೊಂದಾವರ್ತಿ ಆತನನ್ನು – ನೀನು ಏನೂ
ಉತ್ತರಕೊಡುವದಿಲ್ಲವೇ? ಇವರು ನಿನ್ನ ಮೇಲೆ
ಎಷ್ಟು ದೂರುಗಳನ್ನು ಹೇಳುತ್ತಾರೆ ನೋಡು
5 ಎಂದು ಕೇಳಿದನು. ಆದರೆ ಯೇಸು ಇನ್ನೇನೂ
ಉತ್ತರಕೊಡಲಿಲ್ಲ. ಅದನ್ನು ನೋಡಿ ಪಿಲಾತನು
ಆಶ್ಚರ್ಯಪಟ್ಟನು.

6 ಅವನು ಆ ಹಬ್ಬದಲ್ಲಿ ಜನರು ಬೇಡಿದ ಸೆರೆಯುವ
ನನ್ನು ಅವರಿಗೆ ಬಿಟ್ಟುಕೊಡುವ ಪದ್ಧತಿಯಿತ್ತು.
7 ಆಗ ಬರಬ್ಬನೆಂಬವನೊಬ್ಬನಿದ್ದನು; ಇವನನ್ನು

ದಂಗೆಯಲ್ಲಿ ಕೊಲೆಪಾತಕ ಮಾಡಿದ ದಂಗೆಗಾರರ
8 ಕೂಡ ಕಟ್ಟಿಹಾಕಿದ್ದರು. ಜನರು ಪಿಲಾತನ ಬಳಿಗೆ
ಹೋಗಿ - ನೀನು ನಮಗೆ ಮಾಡುತ್ತಾ ಬಂದ
ಪ್ರಕಾರ ಮಾಡು ಎಂದು ಬೇಡಿಕೊಳ್ಳುತ್ತಿದ್ದರು.
9-10 ಮಹಾಯಾಜಕರು ಹೊಟ್ಟೇಕಿಚ್ಚಿನಿಂದ ಯೇಸು
ವನ್ನು ಒಪ್ಪಿಸಿಕೊಟ್ಟಿದ್ದಾರೆಂದು ಪಿಲಾತನು ಗ್ರಹಿಸಿ
ಕೊಂಡು - ನಾನು ಯೆಹೂದ್ಯರ ಅರಸನನ್ನು
ನಿಮಗೆ ಬಿಟ್ಟುಕೊಡಬೇಕನ್ನುತ್ತೀರೋ ಎಂದು ಅವ
11 ರನ್ನು ಕೇಳಿದನು. ಅತ್ತಲಾಗಿ ಮಹಾಯಾಜ
ಕರು - ಬರಬ್ಬನನ್ನೇ ಬಿಟ್ಟುಕೊಡಬೇಕೆಂದು ಬೇಡಿ
ಕೊಳ್ಳಿರಿ ಎಂಬದಾಗಿ ಜನರನ್ನು ಪ್ರೇರೇಪಿಸಿದರು.
12 ಅದಕ್ಕೆ ಪಿಲಾತನು ತಿರಿಗಿ ಅವರನ್ನು—ಹಾಗಾದರೆ
ನೀವು ಹೇಳುವ ಯೆಹೂದ್ಯರ ಅರಸನನ್ನು

13 ನಾನೇನು ಮಾಡಲಿ ಎಂದು ಕೇಳಲು ಅವರು –
ಅವನನ್ನು ಶಿಲುಬೆಗೆ ಹಾಕಿಸು ಎಂದು ತಿರಿಗಿ
14 ಬೊಬ್ಬೆಹಾಕಿದರು. ಪಿಲಾತನು – ಯಾಕೆ? ಕೆಟ್ಟ
ದ್ದೇನು ಮಾಡಿದನು? ಅಂದನು. ಆದರೆ ಅವರು –
ಅವನನ್ನು ಶಿಲುಬೆಗೆ ಹಾಕಿಸು ಎಂದು ಬಹಳವಾಗಿ
15 ಆರ್ಭಟಿಸಿದರು. ಅದಕ್ಕೆ ಪಿಲಾತನು ಜನರ ಮನ
ಸ್ಸನ್ನು ಸಮಾಧಾನಪಡಿಸಬೇಕೆಂದು ಬರಬ್ಬನನ್ನು
ಅವರಿಗೆ ಬಿಟ್ಟುಕೊಟ್ಟು ಯೇಸುವನ್ನು ಕೊರಡೆ
ಗಳಿಂದ ಹೊಡಿಸಿ ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿ
ದನು.

ಯೇಸುವನ್ನು ಪರಿಹಾಸ್ಯಮಾಡಿ ಶಿಲುಬೆಗೆ ಹಾಕಿದ್ದು; ಆತನು ಪ್ರಾಣಬಿಟ್ಟದ್ದು.
(ಮತ್ತಾ. 27. 27—56; ಲೂಕ 23. 26—49;
ಯೋಹಾ. 19. 17—30.)

16 ಸಿಪಾಯಿಗಳು ಆತನನ್ನು ಅಧಿಪತಿಯ ಅರ
ಮನೆಗೆ ಸೇರಿದ ಅಂಗಳದೊಳಕ್ಕೆ ಸಾಗಿಸಿಕೊಂಡು
17 ಹೋಗಿ ಪಟಾಲಮನ್ನೆಲ್ಲಾ ಒಟ್ಟಿಗೆ ಕರೆದು ಆತನಿಗೆ
ಕೆಂಪು ಒಲ್ಲಿಯನ್ನು ಹೊದಿಸಿ ಮುಳ್ಳಿನ ಕಿರೀಟ
18 ವನ್ನು ಹೆಣಿದು ಆತನಿಗಿಟ್ಟು—ಯೆಹೂದ್ಯರ
ಅರಸನೇ, ನಿನಗೆ ನಮಸ್ಕಾರ ಎಂದು ಆತನಿಗೆ
19 ವಂದನೆಮಾಡಿ ಬೆತ್ತದಿಂದ ಆತನ ತಲೆಯ ಮೇಲೆ
ಹೊಡೆದು ಆತನ ಮೇಲೆ ಉಗುಳಿ ಆತನ ಮುಂದೆ
20 ಮೊಣಕಾಲೂರಿ ಅಡ್ಡಬಿದ್ದರು. ಹೀಗೆ ಆತನನ್ನು
ಪರಿಹಾಸ್ಯಮಾಡಿದ ಮೇಲೆ ಆ ಒಲ್ಲಿಯನ್ನು

ತೆಗೆದು ಆತನ ಬಟ್ಟೆಗಳನ್ನು ಹೊದಿಸಿ ಆತನನ್ನು
ಶಿಲುಬೆಗೆ ಹಾಕುವದಕ್ಕೆ ತೆಗೆದುಕೊಂಡು
ಹೋದರು.
21 ಆಗ ಹೊಲದಿಂದ ಹೊರಟು ಆ ಮಾರ್ಗವಾಗಿ
ಬರುತ್ತಿದ್ದ ಒಬ್ಬನನ್ನು ಆತನ ಶಿಲುಬೆಯನ್ನು
ಹೊರುವದಕ್ಕೆ ಬಿಟ್ಟೀಹಿಡಿದರು. ಇವನು ಯಾ
ರಂದರೆ—ಅಲೆಕ್ಸಾಂದ್ರ ರೂಫ ಎಂಬವರ ತಂದೆ
22 ಯಾದ ಕುರೇನೆಪಟ್ಟಣದ ಸೀಮೋನನು. ಬಳಿಕ
ಆತನನ್ನು ಗೊಲ್ಗೊಥಾ ಎಂಬ ಸ್ಥಳಕ್ಕೆ ಕರಕೊಂಡು
ಬಂದರು. ಗೊಲ್ಗೊಥಾ ಅಂದರೆ ಕಪಾಲಸ್ಥಳ.
23 ಅಲ್ಲಿ ಆತನಿಗೆ ರಕ್ತಬೋಳ ಬೆರಸಿದ ದ್ರಾಕ್ಷಾರಸ
ವನ್ನು ಕೊಟ್ಟರು; ಆದರೆ ಆತನು ತೆಗೆದುಕೊಳ್ಳ
24 ಲಿಲ್ಲ. ಅವರು ಆತನನ್ನು ಶಿಲುಬೆಗೆ ಹಾಕಿ ಆತನ

ಬಟ್ಟೆಗಳಲ್ಲಿ ಯಾವ ಯಾವದು ಯಾರಾರಿಗೆ ಆಗ
ಬೇಕೆಂದು ಚೀಟುಹಾಕಿ ಪಾಲುಮಾಡಿಕೊಂಡರು.
25 ಆತನನ್ನು ಶಿಲುಬೆಗೆ ಹಾಕುವಾಗ ಹೊತ್ತಾರೆ
26 ಒಂಬತ್ತು ಘಂಟೆಯಾಗಿತ್ತು. ಇದಲ್ಲದೆ ಅವರು
ಹೊರಿಸಿದ ಅಪರಾಧವನ್ನು ಸೂಚಿಸುವ ಒಂದು
ವಿಳಾಸವು ಶಿಲುಬೆಯು ಮೇಲೆ ಬರೆದಿತ್ತು; ಅದೇ
ನಂದರೆ – ಯೆಹೂದ್ಯರ ಅರಸನು ಎಂಬದೇ.
27 ಅದಲ್ಲದೆ ಇಬ್ಬರು ಕಳ್ಳರನ್ನು ತಂದು ಒಬ್ಬನನ್ನು
ಆತನ ಬಲಗಡೆಯಲ್ಲಿ ಒಬ್ಬನನ್ನು ಎಡಗಡೆಯಲ್ಲಿ
29 ಆತನ ಸಂಗಡ ಶಿಲುಬೆಗೆ ಹಾಕಿದರು. ಅಲ್ಲಿ ಹಾದು
ಹೋಗುವವರು ತಲೇ ಆಡಿಸಿ - ಆಹಾ, ದೇವಾಲಯ
ವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ,
30 ಶಿಲುಬೆಯಿಂದ ಇಳಿದು ನಿನ್ನನ್ನು ರಕ್ಷಿಸಿಕೋ

31 ಎಂದು ಆತನನ್ನು ಹಂಗಿಸುತ್ತಿದ್ದರು. ಅದೇ
ಮೇರೆಗೆ ಮಹಾಯಾಜಕರೂ ಶಾಸ್ತ್ರಿಗಳೂ—
ಅವನು ಮತ್ತೊಬ್ಬರನ್ನು ರಕ್ಷಿಸಿದನು; ತನ್ನನ್ನು
32 ರಕ್ಷಿಸಿಕೊಳ್ಳಲಾರನು. ಇಸ್ರಾಯೇಲ್ಯರ ಅರಸ
ನಾದ ಈ ಕ್ರಿಸ್ತನು ಈಗ ಶಿಲುಬೆಯಿಂದ ಇಳಿದು
ಬರಲಿ; ಇಳಿದುಬಂದರೆ ನಾವು ನೋಡಿ ನಂಬೇವು
ಎಂದು ತಮ್ಮತಮ್ಮೊಳಗೆ ಹಾಸ್ಯದಿಂದ ಮಾತಾಡು
ತ್ತಿದ್ದರು. ಆತನ ಸಂಗಡ ಶಿಲುಬೆಗೆ ಹಾಕಲ್ಪಟ್ಟ
ವರು ಸಹ ಆತನನ್ನು ನಿಂದಿಸುತ್ತಿದ್ದರು.
33 ಮಧ್ಯಾಹ್ನವಾದಾಗ ಆ ದೇಶದ ಮೇಲೆಲ್ಲಾ
ಕತ್ತಲೆ ಕವಿದು ಸಾಯಂಕಾಲ ಮೂರು ಘಂಟೆ
34 ಯ ತನಕ ಇತ್ತು. ಮೂರು ಘಂಟೆಗೆ ಯೇಸು—
ಎಲೋಹಿ, ಎಲೋಹಿ, ಲಮಾ ಸಬಕ್ತಾನೀ ಅಂದರೆ

ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು
ಕೈಬಿಟ್ಟಿದ್ದೀ ಎಂದು ಮಹಾಧ್ವನಿಯಿಂದ ಕೂಗಿದನು.
35 ಹತ್ತಿರ ನಿಂತಿದ್ದವರಲ್ಲಿ ಕೆಲವರು ಅದನ್ನು ಕೇಳಿ—
ಎಲೀಯನನ್ನು ಕರೆಯುತ್ತಾನೆ ಕಾಣಿರೋ,
36 ಅಂದರು. ಆಗ ಒಬ್ಬನು ಓಡಿಹೋಗಿ ಸ್ಪಂಜನ್ನು
ಹುಳಿರಸದಿಂದ ತುಂಬಿಸಿ ಕೋಲಿಗೆ ಸಿಕ್ಕಿಸಿ ಆತ
ನಿಗೆ ಕುಡಿಯುವದಕ್ಕೆ ಕೊಟ್ಟು—ಬಿಡಿರಿ, ಎಲೀಯ
ನು ಇವನನ್ನು ಇಳಿಸುವದಕ್ಕೆ ಬರುವನೇನೋ
37 ನೋಡೋಣ ಅಂದನು. ಆದರೆ ಯೇಸು ಮಹಾ
38 ಧ್ವನಿಯನ್ನು ಗೈದು ಪ್ರಾಣಬಿಟ್ಟನು. ಆಗ ದೇವಾ
ಲಯದ ತೆರೆಯು ಮೇಲಿಂದ ಕೆಳಗಿನ ವರೆಗೂ
39 ಹರಿದು ಎರಡು ಭಾಗವಾಯಿತು. ಆತನು ಹೀಗೆ
ಪ್ರಾಣಬಿಟ್ಟದ್ದನ್ನು ಆತನ ಹತ್ತಿರ ಎದುರಿಗೆ ನಿಂತಿದ್ದ

ಶತಾಧಿಪತಿಯು ನೋಡಿ—ನಿಜವಾಗಿ ಈ ಮನುಷ್ಯ
40-41 ನು ದೇವಕುಮಾರನಾಗಿದ್ದನು ಅಂದನು ಇದ
ಲ್ಲದೆ ಅಲ್ಲಿ ಸ್ತ್ರೀಯರು ಸಹ ದೂರದಿಂದ ನೋಡು
ತ್ತಿದರು; ಇವರಲ್ಲಿ, ಆತನು ಗಲಿಲಾಯದಲ್ಲಿದ್ದಾಗ
ಆತನನ್ನು ಹಿಂಬಾಲಿಸಿ ಸೇವೆಮಾಡುತ್ತಿದ್ದವರಾದ
ಮಗ್ದಲದ ಮರಿಯ, ಚಿಕ್ಕ ಯಾಕೋಬನ ಮತ್ತು
ಯೋಸೆಯ ತಾಯಿಯಾದ ಮರಿಯ, ಸಲೋಮೆ
ಎಂಬವರೂ ಆತನ ಸಂಗಡ ಯೆರೂಸಲೇಮಿಗೆ
ಬಂದಿದ್ದ ಇನ್ನೂ ಅನೇಕ ಸ್ತ್ರೀಯರೂ ಇದ್ದರು.

ಶಿಷ್ಯರು ಯೇಸುವಿನ ದೇಹವನ್ನು ಸಮಾಧಿಯಲ್ಲಿಟ್ಟದ್ದು.
(ಮತ್ತಾ. 27. 57—61; ಲೂಕ 23. 50—56;
ಯೋಹಾ. 19. 38—42.)

42 ಆಗಲೇ ಸಂಜೆಯಾಗಿತ್ತು; ಮತ್ತು ಆ ದಿನವು
ಸೌರಣೆಯ ದಿನ, ಅಂದರೆ ಸಬ್ಬತ್‌ದಿನದ ಹಿಂದಿನ

43 ದಿನ ಆಗಿತ್ತು. ಹೀಗಿರಲಾಗಿ ಅರಿಮಥಾಯದ
ಯೋಸೇಫನೆಂಬವನು ಬಂದು ಧೈರ್ಯದಿಂದ
ಪಿಲಾತನ ಬಳಿಗೆ ಹೋಗಿ ಯೇಸುವಿನ ದೇಹವನ್ನು
ತನಗೆ ಕೊಡಿಸಬೇಕೆಂದು ಬೇಡಿಕೊಂಡನು.
ಇವನು ಹಿರೀಸಭೆಯವರಲ್ಲಿ ಘನವಂತನು,
ದೇವರ ರಾಜ್ಯವನ್ನು ಎದುರುನೋಡುತ್ತಿದ್ದವನು.
44 ಪಿಲಾತನು—ಅವನು ಇಷ್ಟು ಬೇಗ ಸತ್ತನೋ
ಎಂದು ಆಶ್ಚರ್ಯಪಟ್ಟು ಶತಾಧಿಪತಿಯನ್ನು
ಕರೆಸಿ—ಅವನು ಆಗಲೇ ಸತ್ತನೋ ಎಂದು ಅವ
45 ನನ್ನು ಕೇಳಿ ಆತನು ಸತ್ತದ್ದನ್ನು ಶತಾಧಿಪತಿ
ಯಿಂದ ತಿಳಿದು ಶವವನ್ನು ಯೋಸೇಫನಿಗೆ
46 ಕೊಡಿಸಿದನು. ಯೋಸೇಫನು ನಾರುಮಡಿ
ಯನ್ನು ಕೊಂಡುತಂದು ಆತನನ್ನು ಇಳಿಸಿ ನಾರು

ಮಡಿಯಲ್ಲಿ ಸುತ್ತಿ ಬಂಡೆಯಲ್ಲಿ ತೋಡಿದ್ದ
ಸಮಾಧಿಯಲ್ಲಿಟ್ಟು ಸಮಾಧಿಯ ಬಾಗಲಿಗೆ ಕಲ್ಲನ್ನು
47 ಉರುಳಿಸಿದನು. ಮಗ್ದಲದ ಮರಿಯಳೂ
ಯೋಸೆಯ ತಾಯಿ ಮರಿಯಳೂ ಆತನನ್ನಿಡುವ
ಸ್ಥಳವನ್ನು ನೋಡಿದರು.

ಸ್ತ್ರೀಯರು ಯೇಸುವಿನ ಸಮಾಧಿಯು ಖಾಲಿಯಾಗಿರುವದನ್ನು ಕಂಡು ದೂತರ ದರ್ಶನವನ್ನು ನೋಡಿದ್ದು.

(ಮತ್ತಾ. 28. 1—8; ಲೂಕ 24. 1—10; ಯೋಹಾ. 20. 1.)

16 ಸಬ್ಬತ್‌ದಿನ ಕಳೆದ ಮೇಲೆ, ಮಗ್ದಲದ ಮರಿಯ
ಳೂ ಯಾಕೋಬನ ತಾಯಿ ಮರಿಯಳೂ
ಸಲೋಮೆಯೂ ಆತನ ದೇಹಕ್ಕೆ ಹಚ್ಚುವದಕ್ಕಾಗಿ
2 ಸುಗಂಧ ದ್ರವ್ಯಗಳನ್ನು ಕೊಂಡರು. ಮತ್ತು
ವಾರದ ಮೊದಲನೆಯ ದಿನದ ಬೆಳಿಗ್ಗೆ ಹೊತ್ತು

ಮೂಡುವಾಗ ಅವರು ಸಮಾಧಿಯ ಬಳಿಗೆ
3 ಬಂದರು. ಸಮಾಧಿಗೆ ಮುಚ್ಚಿದ್ದ ಕಲ್ಲು ಬಹಳ
ದೊಡ್ಡದಾಗಿದ್ದದರಿಂದ ಅವರು–ಸಮಾಧಿಯ
4 ಬಾಗಲಿಂದ ಆ ಕಲ್ಲನ್ನು ನಮಗೋಸ್ಕರ ಉರು
ಳಿಸುವವರು ಯಾರಿದ್ದಾರೆ ಎಂದು ತಮ್ಮತಮ್ಮೊ
ಳಗೆ ಮಾತಾಡಿಕೊಳ್ಳುತ್ತಾ ಇರಲಾಗಿ ತಲೆಯೆತ್ತಿ
ನೋಡಿ ಆ ಕಲ್ಲು ಉರುಳಿಸಲ್ಪಟ್ಟಿರುವದನ್ನು
5 ಕಂಡರು. ಅವರು ಸಮಾಧಿಯೊಳಕ್ಕೆ ಹೋಗಿ
ಒಬ್ಬ ಯೌವನಸ್ಥನು ಬಿಳೀ ಅಂಗಿಯನ್ನು ತೊಟ್ಟು
ಕೊಂಡು ಬಲಗಡೆ ಕೂತಿರುವದನ್ನು ಕಂಡು ಬೆಚ್ಚಿ
6 ಬೆರಗಾದರು. ಅವನು ಅವರಿಗೆ–ಬೆರಗಾಗಬೇಡಿರಿ.
ಶಿಲುಬೆಗೆ ಹಾಕಲ್ಪಟ್ಟಿದ್ದ ನಜರೇತಿನ ಯೇಸುವನ್ನು
ಹುಡುಕುತ್ತೀರಲ್ಲವೇ. ಆತನು ಜೀವಿತನಾಗಿ ಎದ್ದಿ

ದ್ದಾನೆ; ಇಲ್ಲಿ ಇಲ್ಲ. ಆತನನ್ನು ಇಟ್ಟಿದ್ದ ಸ್ಥಳವು
7 ಇದೇ, ನೋಡಿರಿ. ಆದರೆ ನೀವು ಹೋಗಿ ಆತನ
ಶಿಷ್ಯರಿಗೂ ಪೇತ್ರನಿಗೂ—ಆತನು ನಿಮಗೆ ಹೇಳಿ
ದಂತೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗು
ತ್ತಾನೆ, ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿ
8 ಸಿರಿ ಎಂದು ಹೇಳಿದನು. ಅವರು ಭ್ರಮೆ ಹಿಡಿದವ
ರಾಗಿ ನಡುಗುತ್ತಾ ಹೊರಕ್ಕೆ ಬಂದು ಸಮಾಧಿಯ
ಬಳಿಯಿಂದ ಓಡಿಹೋದರು; ಅವರು ಹೆದರಿ
ಕೊಂಡದರಿಂದ ಯಾರಿಗೂ ಏನೂ ಹೇಳಲಿಲ್ಲ.

ಯೇಸು ಜೀವಿತನಾಗಿ ಎದ್ದ ಮೇಲೆ ತನ್ನ ಶಿಷ್ಯರಿಗೆ ಕಾಣಿಸಿಕೊಂಡದ್ದು.

9 [ವಾರದ ಮೊದಲನೆಯ ದಿನ ಬೆಳಿಗ್ಗೆ ಯೇಸು
ಜೀವಿತನಾಗಿ ಎದ್ದ ಮೇಲೆ ಮಗ್ದಲದ ಮರಿಯಳಿಗೆ
10 ಮೊದಲು ಕಾಣಿಸಿಕೊಂಡನು. ಆಕೆಗೆ ಏಳು ದೆವ್ವ

ಗಳನ್ನು ಬಿಡಿಸಿದ್ದನು. ಆಕೆ ಹೋಗಿ ಆತನು
ಕಾಣಿಸಿಕೊಂಡದ್ದನ್ನು ಮುಂಚೆ ಆತನ ಜೊತೆ
ಯಲ್ಲಿದ್ದವರಿಗೆ ತಿಳಿಸಿದಳು; ಇವರು ಹಂಬಲಿ
11 ಸುತ್ತಾ ಅಳುತ್ತಾ ಕೂತಿದ್ದರು. ಆತನು ಬದುಕಿ
ದ್ದಾನೆ, ನನಗೆ ಕಾಣಿಸಿಕೊಂಡನು ಎಂಬ ಮಾತನ್ನು
ಕೇಳಿದಾಗ ಅವರು ನಂಬಲಿಲ್ಲ.
12 ಇದಾದ ಮೇಲೆ ಶಿಷ್ಯರಲ್ಲಿ ಇಬ್ಬರು ಒಂದು
ಹಳ್ಳಿಗೆ ನಡಕೊಂಡು ಹೋಗುತ್ತಿದ್ದಾಗ ಆತನು
ಅವರಿಗೆ ರೂಪಾಂತರದಿಂದ ಕಾಣಿಸಿಕೊಂಡನು.
13 ಅವರು ಹೋಗಿ ಉಳಿದವರಿಗೆ ತಿಳಿಸಿದರು. ಆದರೆ
ಅವರನ್ನೂ ನಂಬಲಿಲ್ಲ.
14 ತರುವಾಯ ಹನ್ನೊಂದು ಮಂದಿ ಶಿಷ್ಯರು
ಊಟಕ್ಕೆ ಕೂತಿದ್ದಾಗ ಆತನು ಅವರಿಗೂ ಕಾಣಿಸಿ

ಕೊಂಡನು. ತಾನು ಜೀವಿತನಾಗಿ ಎದ್ದು ಬಂದ
ಮೇಲೆ ತನ್ನನ್ನು ಕಂಡವರ ಮಾತನ್ನು ಅವರು
ನಂಬಲಿಲ್ಲವಾದಕಾರಣ ಆತನು ಅವರ ಅಪನಂಬಿಕೆ
ಗೂ ಅವರ ಮನಸ್ಸಿನ ಕಾಠಿಣ್ಯಕ್ಕೂ ಅವರನ್ನು
15 ಗದರಿಸಿದನು. ಆ ಮೇಲೆ ಅವರಿಗೆ—ನೀವು
ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ
16 ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾಸ್ನಾನ
ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು;
ನಂಬದೆಹೋಗುವವನು ದಂಡನೆಗೆ ಗುರಿಯಾಗು
17 ವನು. ಇದಲ್ಲದೆ ನಂಬುವವರಿಂದ ಈ ಸೂಚಕ
ಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು
ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆ
ಗಳಿಂದ ಮಾತಾಡುವರು; ಹಾವುಗಳನ್ನು ಎತ್ತು